ಶನಿವಾರ, ಏಪ್ರಿಲ್ 20, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮತದಾನ
ನಾಗ್ಪುರದಲ್ಲಿ ಶುಕ್ರವಾರ ನಡೆದ ಲೋಕಸಭಾ ಚುನಾವಣೆಯಲ್ಲಿ ಜಗತ್ತಿನ ಅತ್ಯಂತ ಕುಳ್ಳ ಮಹಿಳೆ ಜ್ಯೋತಿ ಆಮ್ಗೆ ಮತದಾನ ಮಾಡಿದರು

ಜಾಹೀರಾತು

ಪ್ರಕಟಣೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

ವಿದ್ಯಾರ್ಥಿನಿ ಕೊಲೆ ಪ್ರಕರಣ: ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಪ್ರತಿಭಟನೆ, ಬಸ್ ಸಂಚಾರ ವ್ಯತ್ಯಯ

ಹುಬ್ಬಳ್ಳಿಯಲ್ಲಿ ಕಾಲೇಜುಗಳು ಬಂದ್, ಧರಣಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಬಿವಿಬಿ ಕಾಲೇಜು ಆವರಣದಲ್ಲಿ ನಡೆದ ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಘಟನೆಯನ್ನು ಖಂಡಿಸಿ ಬಹುತೇಕ ಕಡೆ ಹಿಂದೂ, ಮುಸ್ಲಿಂ, ವೀರಶೈವ ಲಿಂಗಾಯತ ಸೇರಿ ವಿವಿಧ ಸಮುದಾಯಗಳ ಸಂಘಟನೆಗಳು ಶುಕ್ರವಾರ ಪ್ರತಿಭಟನೆ ನಡೆಸಿದವು. ಜನರೂ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡರು.

ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರು ಪ್ರತ್ಯೇಕವಾಗಿ ಧರಣಿ ನಡೆಸಿದರು. ನಗರದ ಬಿವಿಬಿ ಕಾಲೇಜು ಎದುರು ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದರು. ಕರ್ನಾಟಕ ದಲಿತ ವಿಮೋಚನಾ ಸಮಿತಿ ಮುಖಂಡರು, ಕಾರ್ಯಕರ್ತರೂ ಪ್ರತಿಭಟನಾ ಮೆರವಣಿಗೆ ನಡೆಸಿದರು.

'ಅಮಾನುಷವಾಗಿ ಹತ್ಯೆ ಮಾಡಿದ ಫಯಾಜ್ ಖೊಂಡುನಾಯ್ಕ ವಿರುದ್ಧ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಆತನನ್ನು ಗಲ್ಲಿಗೇರಿಸಬೇಕು' ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು. ನೇಹಾ ಅವರ ಭಾವಚಿತ್ರ ಪ್ರದರ್ಶಿಸಿ, 'ನ್ಯಾಯ ಕೊಡಿಸಿ' ಎಂದು ಒತ್ತಾಯಿಸಿದರು.

ರಸ್ತೆ ಮಧ್ಯೆ ಕೂತು ಪ್ರತಿಭಟನೆ ನಡೆಸಿದ್ದರಿಂದ ಹುಬ್ಬಳ್ಳಿ–ಧಾರವಾಡ ಮಾರ್ಗದ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಬಿಆರ್‌ಟಿಎಸ್ ಮಾರ್ಗದಲ್ಲಿ ಚಿಗರಿ ಬಸ್‌ಗಳ ಸಂಚಾರವೂ ಕೆಲ ಹೊತ್ತು ಸ್ಥಗಿತಗೊಳಿಸಲಾಯಿತು. ಎಬಿವಿಪಿ ಸಂಘಟನೆ ಕರೆ ನೀಡಿದ ಮೇರೆಗೆ ಹುಬ್ಬಳ್ಳಿಯ ಬಹುತೇಕ ಕಾಲೇಜುಗಳು ಬಂದ್ ಆಗಿದ್ದವು.

ಧಾರವಾಡ ನಗರ ಸೇರಿ ಜಿಲ್ಲೆಯ ಕುಂದಗೋಳ, ನವಲಗುಂದ, ಅಳ್ನಾವರದಲ್ಲಿ ಬಜರಂಗದಳ, ಹಿಂದೂ ಜಾಗರಣ ವೇದಿಕೆ ಸಹಿತ ವಿವಿಧ ಸಂಘಟನೆಗಳವರು ಪ್ರತಿಭಟನೆ ನಡೆಸಿದರೆ, ಬೆಳಗಾವಿ ನಗರ ಸೇರಿ ಜಿಲ್ಲೆಯ ಚನ್ನಮ್ಮನ ಕಿತ್ತೂರು, ರಾಮದುರ್ಗ, ಬೈಲಹೊಂಗಲದಲ್ಲಿ, ಎಬಿವಿಪಿ, ವಿಶ್ವ ಹಿಂದೂ ಪರಿಷತ್, ಬಜರಂಗದಳ ಮತ್ತು ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಕಾರ್ಯಕರ್ತರು ಪ್ರತಿಭಟಿಸಿದರು. ಸವದತ್ತಿಯಲ್ಲಿ ಮುಸ್ಲಿಂ ಅಸೋಸಿಯೇಷನ್ ಮತ್ತು ಸಮುದಾಯದವರು ಧರಣಿ ನಡೆಸಿದರು. ಬಾಗಲಕೋಟೆ, ಗದಗ ಜಿಲ್ಲೆಯಲ್ಲಿ ಅಲ್ಲದೆ ಉತ್ತರ ಕನ್ನಡ, ಬಳ್ಳಾರಿ, ಹೊಸಪೇಟೆ, ಬಳ್ಳಾರಿಯಲ್ಲೂ ಪ್ರತಿಭಟನೆ ನಡೆಯಿತು.

ಹುಬ್ಬಳ್ಳಿಯ ವಿದ್ಯಾನಗರದ ಬಿವಿಬಿ ಕಾಲೇಜು ಎದುರಿನ ರಸ್ತೆ ಮಧ್ಯೆ ಎಬಿವಿಪಿ ಕಾರ್ಯಕರ್ತರು, ವಿದ್ಯಾರ್ಥಿಗಳು ವೃತ್ತಾಕಾರದಲ್ಲಿ ಕೂತು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಲವ್‌ಜಿಹಾದ್ ಕಾರಣಕ್ಕೆ ಕೊಲೆಯಾಗಿದೆ ಎಂದು ಮನೆಯವರೇ ಹೇಳಿದ್ದರೂ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಕೌಟುಂಬಿಕ ಕಾರಣ ಎಂದು ತೇಪೆ ಸಾರಿಸಿದ್ದಾರೆ

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಕೊಲೆ ಪ್ರಕರಣದ ಆರೋಪಿ ಫಯಾಜ್‌ನನ್ನು ಬಂಧಿಸಲಾಗಿದೆ. ಕಾನೂನು ಪ್ರಕಾರ ಮುಂದಿನ ಕ್ರಮಕೈಗೊಳ್ಳಲಾಗುವುದು. ತನಿಖೆ ಪ್ರಗತಿಯಲ್ಲಿದೆ

ರೇಣುಕಾ ಸುಕುಮಾರ್, ಪೊಲೀಸ್ ಕಮಿಷನರ್, ಹುಬ್ಬಳ್ಳಿ–ಧಾರವಾಡ

ಕಾಂಗ್ರೆಸ್ ಸರ್ಕಾರ ರಚನೆ ಆದಾಗಿನಿಂದ ಕೊಲೆ ಪ್ರಕರಣಗಳು ಹೆಚ್ಚುತ್ತಿವೆ. ಇಲ್ಲಿರುವುದನ್ನು ಸರ್ಕಾರ ಎಂದು ಕರೆಯುತ್ತೀರಾ? ರಾಜ್ಯದಲ್ಲಿ ಸರ್ಕಾರ ಇದೆಯೇ?

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಇದು ಲವ್ ಜಿಹಾದ್ ಪ್ರಕರಣ. ವಿದ್ಯಾರ್ಥಿನಿಯರ ಬಗ್ಗೆ ರಾಜ್ಯ ಸರ್ಕಾರಕ್ಕೆ ಕಳಕಳಿಯಿದ್ದರೆ, ಕೊಲೆ ಆರೋಪಿಯನ್ನು ಎನ್‌ಕೌಂಟರ್ ಮಾಡಲು ಆದೇಶ ಹೊರಡಿಸಬೇಕು. ಆತನ ಮನೆ ನೆಲಸಮ ಮಾಡಬೇಕು

ಪ್ರಮೋದ ಮುತಾಲಿಕ್, ಸಂಸ್ಥಾಪಕ ಅಧ್ಯಕ್ಷ, ಶ್ರೀರಾಮಸೇನಾ ಸಂಘಟನೆ

ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿ ಮಿತಿ ಮೀರುತ್ತಿದೆ. ಇದು ಲವ್ ಜಿಹಾದ್ ಪ್ರಕರಣವಲ್ಲ. ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದು, ಅದನ್ನು ಯಾರೂ ನಂಬಬಾರದು

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಪೊಲೀಸ್ ಭದ್ರತೆಯಲ್ಲಿ ಅಂತ್ಯಕ್ರಿಯೆ

ಹುಬ್ಬಳ್ಳಿ: ನೇಹಾ ಪಾರ್ಥೀವ ಶರೀರದ ಅಂತ್ಯಕ್ರಿಯೆ ಪೊಲೀಸ್ ಭದ್ರತೆಯಲ್ಲಿ ನೆರವೇರಿತು. ಬಸವನಗರದ ಬಿಡ್ನಾಳ್‌ನಲ್ಲಿನ ಮನೆಯಿಂದ ಮಂಟೂರು ರಸ್ತೆಯಲ್ಲಿನ ಹಿಂದೂ ರುದ್ರಭೂಮಿಗೆ ತೆರಳುವ ಮಾರ್ಗದ ಘಂಟಿಕೇರಿ ವೃತ್ತದ ಬಳಿ ಶವಯಾತ್ರೆ ಬರುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ ಮಹಿಳೆಯರು, 'ಆರೋಪಿಯನ್ನು ನಮಗೆ ಒಪ್ಪಿಸಿ, ನಾವು ಆತನಿಗೆ ಶಿಕ್ಷೆ ಕೊಡುತ್ತೇವೆ' ಎಂದರು. ಅವರನ್ನು ಪೊಲೀಸರು ಸಮಾಧಾನ ಪಡಿಸಿ, ಶವಯಾತ್ರೆಗೆ ಅನುವು ಮಾಡಿಕೊಟ್ಟರು. ಮಂಟೂರು ರಸ್ತೆಯ ಕಲಬುರ್ಗಿ ಮಠದ ಬಳಿಯಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

'ಕೊಲೆ ಲವ್ ಜಿಹಾದ್ ಅಲ್ಲ'

ತುಮಕೂರು: 'ಹುಬ್ಬಳ್ಳಿ ಕಾಲೇಜೊಂದರ ಆವರಣದಲ್ಲಿ ನಡೆದ ವಿದ್ಯಾರ್ಥಿನಿ ಕೊಲೆ ಪ್ರಕರಣ ಲವ್ ಜಿಹಾದ್ ಅಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಜಿ.ಪರಮೇಶ್ವರ

ನಗರದಲ್ಲಿ ಶುಕ್ರವಾರ ಮಾತನಾಡಿ, 'ನಮಗೆ ಸಿಕ್ಕ ಮಾಹಿತಿ ಪ್ರಕಾರ ವಿದ್ಯಾರ್ಥಿನಿ ಮತ್ತು ಆರೋಪಿ ಪರಸ್ಪರ ಪ್ರೀತಿಸುತ್ತಿದ್ದರು. ನಂತರ ವಿದ್ಯಾರ್ಥಿನಿ ದೂರವಾಗಲು ಪ್ರಯತ್ನಿಸಿದಾಗ ಕೊಲೆ ನಡೆದಿದೆ. ಮಗಳ ಹಿಂದೆ ಹೋಗುತ್ತಿದ್ದ ತಾಯಿ ಮೇಲೂ ಹಲ್ಲೆಯಾಗಿದ್ದು, ಅವರನ್ನು ರಕ್ಷಿಸಲಾಗಿದೆ. ಆರೋಪಿ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು' ಎಂದರು.

'ಈ ಘಟನೆಯಲ್ಲಿ ಲವ್ ಜಿಹಾದ್ ಕಾಣಿಸಿಲ್ಲ. ನನ್ನನ್ನು ಬಿಟ್ಟು ಬೇರೆ ಮದುವೆ ಮಾಡಿಕೊಳ್ಳುತ್ತಾಳೆ' ಎಂದು ಆರೋಪಿ ವಿದ್ಯಾರ್ಥಿನಿ ಮೇಲೆ ಹಲ್ಲೆ ಮಾಡಿದ್ದಾನೆ. ಇಂತಹ ವಿಚಾರದಲ್ಲಿ ಕಾಂಗ್ರೆಸ್ ಅನ್ನು ದೂಷಣೆ ಮಾಡುವುದೇ ಬಿಜೆಪಿ ಕೆಲಸ. ಚುನಾವಣೆ ಸಂದರ್ಭದಲ್ಲಿ ಎಲ್ಲ ವಿಚಾರಗಳನ್ನು ರಾಜಕೀಯ ದೃಷ್ಟಿಯಿಂದ ನೋಡುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಅತ್ಯಂತ ಖಂಡನೀಯ. ಇಂತಹ ಪ್ರಕರಣದ ಆರೋಪಿಗೆ ಎನ್‌ಕೌಂಟರ್ ಮಾಡಲು ಕಾನೂನು ಜಾರಿಯಾಗಬೇಕು

ಸಂತೋಷ ಲಾಡ್, ಜಿಲ್ಲಾ ಉಸ್ತುವಾರಿ ಸಚಿವ

ಈ ಪ್ರಕರಣ ಲವ್ ಜಿಹಾದ್‌ನ ಪ್ರತ್ಯಕ್ಷ ಸಾಕ್ಷಿ. ಕಾಂಗ್ರೆಸ್ ಪಕ್ಷದ ತುಷ್ಟೀಕರಣ ನೀತಿಯಿಂದ ಇಂಥ ಪ್ರಕರಣಗಳು ಪದೇ ಪದೇ ಸಂಭವಿಸುತ್ತಿವೆ. ಇಂಥ ಪ್ರಕರಣಗಳ ಹಿಂದೆ ಯಾರ ಕೈವಾಡ ಇದೆ ಎಂಬುದರ ಬಗ್ಗೆ ತನಿಖೆ ಆಗಬೇಕು

ಜಗದೀಶ ಶೆಟ್ಟರ್, ಬಿಜೆಪಿ ಮುಖಂಡ

ಸುದ್ದಿ 2 ನಿಮಿಷ

ವಾಹನಕ್ಕೆ ವಿದ್ಯುತ್ ತಂತಿ ಸ್ಪರ್ಶ: ನಟ ದರ್ಶನ್ ಪಾರು

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಶುಕ್ರವಾರ ನಟ ದರ್ಶನ್ ಪ್ರಚಾರ ಮಾಡುವ ವೇಳೆ ಪ್ರಚಾರ ವಾಹನಕ್ಕೆ ವಿದ್ಯುತ್ ತಂತಿ ಸ್ಪರ್ಶಿಸಿದ ಪರಿಣಾಮ ಕ್ಷಣಕಾಲ ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು. ವಿದ್ಯುತ್ ಸರಬರಾಜು ಇರಲಿಲ್ಲವಾದ್ದರಿಂದ ದರ್ಶನ್ ಹಾಗೂ ಅವರೊಂದಿಗಿದ್ದವರು ಅಪಾಯದಿಂದ ಪಾರಾದರು.

ಅಗ್ರಹಾರಬಾಚಹಳ್ಳಿಯಲ್ಲಿ ಪ್ರಚಾರ ನಡೆಸುವ ವೇಳೆ ಮನೆಯೊಂದರ ಸಮೀಪ ನೇತಾಡುತ್ತಿದ್ದ ತಂತಿ ವಾಹನಕ್ಕೆ ಸ್ಪರ್ಶಿಸಿತು. ಅದರಿಂದ ದರ್ಶನ್ ಸೇರಿದಂತೆ ವಾಹನದಲ್ಲಿದ್ದ ಮುಖಂಡರು, ಕಾರ್ಯಕರ್ತರು ತೀವ್ರ ಗಾಬರಿಯಾದರು. ದರ್ಶನ್ ಕೂಡ ಭಯದಿಂದ ಕೆಳಗಿಳಿದರು. ಆತಂಕಗೊಂಡು ಪ್ರಚಾರವನ್ನು ಅರ್ಧಕ್ಕೆ ನಿಲ್ಲಿಸಿ ಬೆಂಗಳೂರಿಗೆ ತೆರಳಿದರು.

ಕೆ.ಆರ್.ಪೇಟೆ ಪಟ್ಟಣ ಸೇರಿದಂತೆ ಹಲವು ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಪ್ರಚಾರ ನಿಗದಿಯಾಗಿತ್ತು. ದರ್ಶನ್ ಅವರಿಗಾಗಿ ಅಪಾರ ಸಂಖ್ಯೆಯ ಜನರು, ಅಭಿಮಾನಿಗಳು ಕಾಯುತ್ತಿದ್ದರು. ನಂತರ ನಿರಾಸೆ ವ್ಯಕ್ತಪಡಿಸಿದರು.

ವೃದ್ಧೆಯ ಮತ ಚಲಾಯಿಸಿದ ಬೂತ್ ಏಜೆಂಟ್

ಕಾಸರಗೋಡು: ವಯೋವೃದ್ಧರಿಗೆ ಮನೆಯಿಂದಲೇ ಮತಚಲಾಯಿಸುವ ಪ್ರಕ್ರಿಯೆ ವೇಳೆ ಕಾಸರಗೋಡು ಲೋಕಸಭೆ ಕ್ಷೇತ್ರದ ಕಲ್ಯಾಶೇರಿಯಲ್ಲಿ ವಂಚನೆ ಎಸಗಿದ ಆರೋಪದಲ್ಲಿ ಕರ್ತವ್ಯದಲ್ಲಿದ್ದ 4 ಮಂದಿ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಕಲ್ಯಾಶೇರಿಯ ಪಾರಕವು ನಿವಾಸಿ 92 ವರ್ಷದ ದೇವಿ ಎಂಬುವರಿಗೆ ಮನೆಯಲ್ಲೇ ಮತದಾನಕ್ಕೆ ಅವಕಾಶ ನೀಡಲಾಗಿತ್ತು. ಅವರ ಬದಲಾಗಿ ಕಲ್ಯಾಶೇರಿಯ ಸಿಪಿಎಂ ಶಾಖೆಯ ಮಾಜಿ ಕಾರ್ಯದರ್ಶಿ ಮತ್ತು ಬೂತ್ ಏಜೆಂಟ್ ಗಣೇಶನ್ ಎಂಬುವರು ಮತದಾನ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಸಿಸಿಟಿವಿ ಕ್ಯಾಮೆರಾದಲ್ಲಿ ಈ ದೃಶ್ಯ ಸೆರೆಯಾಗಿದ್ದು, ಇದನ್ನು ಪರಿಶೀಲಿಸಿ ಅಂದು ಕರ್ತವ್ಯದಲ್ಲಿದ್ದ 4 ಮಂದಿಯನ್ನು ಅಮಾನತುಗೊಳಿಸಲಾಗಿದೆ ಎಂದು ಕಣ್ಣೂರು ಜಿಲ್ಲಾಧಿಕಾರಿ ಕೆ.ವಿಜಯನ್ ತಿಳಿಸಿದರು.

ವಿಶೇಷ ಮತದಾನ ಅಧಿಕಾರಿ ಸಹಿತ 4 ಮಂದಿಯನ್ನು ಅಮಾನತುಗೊಳಿಸಲಾಗಿದೆ. ಮುಂದಿನ ಕ್ರಮಗಳಿಗಾಗಿ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕಣ್ಣಪುರಂ ಠಾಣೆಯಲ್ಲೂ ಈ ಸಂಬಂಧ ಪ್ರಕರಣ ದಾಖಲಾಗಿದೆ.

'ಸಿ.ಎಂ ಹೇಳಿಕೆ ನೋವು ತಂದಿದೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಗಳನ್ನು ಕಳೆದುಕೊಂಡ ದುಃಖದಲ್ಲಿ ನಾವಿದ್ದೇವೆ. ಇಂತಹ ಸಂಕಷ್ಟದಲ್ಲೂ ಮುಖ್ಯಮಂತ್ರಿ ಕೊಲೆ ವೈಯಕ್ತಿಕ ಎಂದು ಹೇಳಿಕೆ ನೀಡಿದ್ದು ಖಂಡನೀಯ. ನಾವು ಆರೋಪಿ ಫಯಾಜ್‌ನ ಸಂಬಂಧಿಕರೇ? ಅವನೊಂದಿಗೆ ಸಂಬಂಧ ಬೆಳೆಸಿದ್ದೇವೆಯೇ? ನನ್ನದೇ ಪಕ್ಷದ ಮುಖ್ಯಮಂತ್ರಿ ಇಂತಹ ಹೇಳಿಕೆ ನೀಡಿದ್ದು ನೋವು ತಂದಿದೆ' ಎಂದು ನೇಹಾ ತಂದೆ, ಹು–ಧಾ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯ ನಿರಂಜನಯ್ಯ ಹಿರೇಮಠ ಬೇಸರ ವ್ಯಕ್ತಪಡಿಸಿದ್ದಾರೆ. ಶಾಸಕ ಯತ್ನಾಳ ಅವರು ಮನೆಗೆ ಬಂದು ನೈತಿಕ ಬೆಂಬಲ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಹತ್ಯೆ ಸಾಮಾನ್ಯವಾಗಿದೆ. ಪೊಲೀಸರು ಸರಿಯಾಗಿ ಕರ್ತವ್ಯ ನಿರ್ವಹಿಸಬೇಕು. ಇಲ್ಲದಿದ್ದರೆ ಕರ್ನಾಟಕ ರಾಜ್ಯವು ಬಿಹಾರ ರಾಜ್ಯವಾಗಲಿದೆ

ಬಸವರಾಜ ಬೊಮ್ಮಾಯಿ, ಶಾಸಕ

'ಬಿಜೆಪಿ ಕಾರ್ಯಕರ್ತರ ಖರ್ಚಿಗೂ ಕಾಸಿಲ್ಲ'

ಶ್ರೀರಂಗಪಟ್ಟಣ: 'ಲೋಕಸಭೆ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಧಾರಾಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಬಿಜೆಪಿ– ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಕಡೆಯಿಂದ ಬಿಜೆಪಿ ಕಾರ್ಯಕರ್ತರ ಓಡಾಟದ ಖರ್ಚಿಗೂ ಕಾಸು ಕೊಡದಿರುವುದರಿಂದ ಪ್ರಚಾರ ಕಷ್ಟವಾಗಿದೆ' ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಕೆ.ಎಸ್.ನಂಜುಂಡೇಗೌಡ ಸಮಸ್ಯೆ ತೋಡಿಕೊಂಡರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಬಿಜೆಪಿ ಮತ್ತು ಜೆಡಿಎಸ್ ಮುಖಂಡರ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿ, 'ಬಿಜೆಪಿ– ಜೆಡಿಎಸ್ ಮೈತ್ರಿ ಕೂಟದ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ಪರ ಜನರಿಗೆ ಒಲವಿದೆ. ಆದರೆ ಅದು ಮತವಾಗಿ ಪರಿವರ್ತನೆಯಾಗಬೇಕಾದರೆ ಎರಡೂ ಪಕ್ಷದ ಕಾರ್ಯಕರ್ತರು ಪ್ರತಿ ಮತದಾರರನ್ನು ಭೇಟಿ ಮಾಡಿ ಮತ ಕೇಳಬೇಕು. ಅದಕ್ಕಾಗಿ ಪಕ್ಷದ ಉತ್ಸಾಹಿ ಕಾರ್ಯಕರ್ತರಿಗೆ ನಿತ್ಯದ ಖರ್ಚಿಗಾದರೂ ಹಣ ಕೊಡಿಸಬೇಕು' ಎಂದು ವೇದಿಕೆಯಲ್ಲಿದ್ದ ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಅಲ್ಕೋಡ್ ಹನುಮಂತಪ್ಪ ಅವರಲ್ಲಿ ಮನವಿ ಮಾಡಿದರು.

ಕೊಡಗಿನ ಸಿದ್ದಾಪುರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ

ಕಾರು ಡಿಕ್ಕಿಯಾಗಿ ಬಿಜೆಪಿ ಕಾರ್ಯಕರ್ತ ಸಾವು, ಘಟನೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ವಾಲ್ನೂರು ಗ್ರಾಮದ ಸಮೀಪ ಗುರುವಾರ ರಾತ್ರಿ ಕಾರು ಡಿಕ್ಕಿ ಹೊಡೆದು ಬಿಜೆಪಿ ಕಾರ್ಯಕರ್ತ ರಾಮಪ್ಪ (60) ಎಂಬುವವರು ಮೃತಪಟ್ಟ ಘಟನೆಯು, ಶುಕ್ರವಾರ ಸಿದ್ದಾಪುರ ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಲು ಕಾರಣವಾಯಿತು.

ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಬಜರಂಗದಳದ ಕಾರ್ಯಕರ್ತರು ಗ್ರಾಮಕ್ಕೆ ಬಂದು ಘಟನೆಯನ್ನು ಖಂಡಿಸಿದರು. ಕೆಲವು ಕಾರ್ಯಕರ್ತರು ಪ್ರತಿಭಟನೆ ಆರಂಭಿಸಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಸವಾರರು ಪರದಾಡಿದರು.

ಪರಿಸ್ಥಿತಿಯನ್ನು ಗಮನಿಸಿದ ಜಿಲ್ಲಾಡಳಿತ ತಕ್ಷಣವೇ ಸಿದ್ದಾಪುರ, ವಾಲ್ನೂರು, ಅರೆಕಾಡು, ನೆಲ್ಲಿಹುದಿಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತು. ಸ್ಥಳಕ್ಕೆ ಬಂದ ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂತರ್‌ಗೌಡ ಅವರು ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಆದರೆ, ಒಪ್ಪದ ಕಾರ್ಯಕರ್ತರು, 'ಮೃತ ರಾಮಪ್ಪ ಕುಟುಂಬದವರಿಗೆ ₹ 25 ಲಕ್ಷ ಪರಿಹಾರ ನೀಡಬೇಕು, ಪ್ರಕರಣದ ಎಲ್ಲ ಆರೋಪಿಗಳನ್ನೂ ಬಂಧಿಸಬೇಕು' ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಬಂದ ಬಿಜೆಪಿ ಮುಖಂಡ ಸಿ.ಟಿ.ರವಿ ಕಾರ್ಯಕರ್ತರನ್ನು ಸಮಾಧಾನಪಡಿಸಿದರು. ಪಕ್ಷದಿಂದ ಪರಿಹಾರ ದೊರಕಿರುವ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ವಾಪಸ್ ಪಡೆಯಲಾಯಿತು. ಸ್ಥಳಕ್ಕೆ ಜಿಲ್ಲಾಧಿಕಾರಿ ವೆಂಕಟರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭೇಟಿ ನೀಡಿದ್ದರು.

ಹಿನ್ನೆಲೆ: ಗುರುವಾರ ರಾತ್ರಿ ಪ್ರಚಾರ ಮುಗಿಸಿ ರಸ್ತೆಬದಿ ನಿಂತಿದ್ದ ಬಿಜೆಪಿ ಕಾರ್ಯಕರ್ತರಿಗೆ ಕಾರು ಡಿಕ್ಕಿ ಹೊಡೆದು, ರಾಮಪ್ಪ ಮೃತಪಟ್ಟಿದ್ದರು. ಚಂದ್ರರಾಜು ಮತ್ತು ರತೀಶ ಎಂಬ ಕಾರ್ಯಕರ್ತರು ಗಾಯಗೊಂಡಿದ್ದರು. ಆರೋಪಿ ಶೌಖತ್ ಎಂಬಾತನನ್ನು ಪೊಲೀಸರು ಬಂಧಿಸಿದ್ದು, ಕಾರಿನಲ್ಲಿದ್ದ ಇನ್ನಿಬ್ಬರು ಪರಾರಿಯಾಗಿದ್ದಾರೆ.

'ಬದುಕುವ ಗ್ಯಾರಂಟಿ ನೀಡಿ': ಪ್ರತಿಭಟನೆ ವೇಳೆ ಮಾತನಾಡಿದ ಸಿ.ಟಿ. ರವಿ, 'ರಾಜ್ಯ ಸರ್ಕಾರ ನಮಗೆ ಬದುಕುವ ಗ್ಯಾರಂಟಿ ಕೊಡಬೇಕು' ಎಂದು ಒತ್ತಾಯಿಸಿದರು.

'ಕೇಸರಿ ಶಾಲು ಹಾಕಿಕೊಂಡಿದ್ದಕ್ಕೆ ಕಾರನ್ನು ಉದ್ದೇಶಪೂರ್ವಕವಾಗಿಯೇ ಡಿಕ್ಕಿ ಹೊಡೆಸಲಾಗಿದೆ. ಇದೊಂದು ಹತ್ಯೆ ಎಂಬ ಅನುಮಾನವಿದೆ. ಆರೋಪಿಗಳ ಹಿನ್ನೆಲೆ ಹಾಗೂ ಯಾವ ಮದರಸಾದಲ್ಲಿ ಕಲಿತಿದ್ದಾರೆ ಎಂಬುದರ ಬಗ್ಗೆ ಸಮಗ್ರ ತನಿಖೆ ಆಗಬೇಕು. ಗೃಹಸಚಿವರು ಕೂಲಂಕಷವಾಗಿ ತನಿಖೆಗೆ ಆದೇಶಿಸಬೇಕು' ಎಂದು ಆಗ್ರಹಿಸಿದರು.

ಕೊಡಗಿನ ಸಿದ್ದಾಪುರದಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು

ಚುನಾವಣೆ ನಂತರ ವಿಜಯೇಂದ್ರ ಸ್ಥಾನಕ್ಕೆ ಚ್ಯುತಿ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಲಿಂಗಾಯತರ ಮತ ಪಡೆಯಲೆಂದೇ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಲೋಕಸಭೆ ಚುನಾವಣೆ ನಂತರ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸುವುದಿಲ್ಲ' ಎಂದು ಕೈಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಶುಕ್ರವಾರ ಪ್ರತಿಪಾದಿಸಿದರು.

ಲಿಂಗಾಯತ ಮುಖಂಡರ ಸಭೆಯಲ್ಲಿ ಮಾತನಾಡಿ, '2008ರಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು 20 ತಿಂಗಳ ಮುಖ್ಯಮಂತ್ರಿ ಅವಧಿ ಮುಗಿಸಿದ ನಂತರ ಬಿ.ಎಸ್.ಯಡಿಯೂರಪ್ಪ ಅವರಿಗೆ ಅಧಿಕಾರ ಹಸ್ತಾಂತರಿಸಬೇಕಿತ್ತು. ಆದರೆ ಮಾತು ತಪ್ಪಿದ ಜೆಡಿಎಸ್, ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಿದರು. ಲಿಂಗಾಯತರು ಇದನ್ನು ಅರಿತುಕೊಳ್ಳಬೇಕು' ಎಂದರು.

'ಯಡಿಯೂರಪ್ಪ ಅವರನ್ನು ಬಿಜೆಪಿ 2 ಬಾರಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಿದೆ. ಹೀಗಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋಲಾಯಿತು. ಬಿಜೆಪಿ ನಾಯಕ ಬಿ.ಎಲ್.ಸಂತೋಷ್ ಲಿಂಗಾಯತ ನಾಯಕತ್ವವನ್ನು ಮುಗಿಸಲು ಹೊರಟಿದ್ದು, ಯಡಿಯೂರಪ್ಪ ಅವರನ್ನು ತುಳಿದಿದ್ದಾರೆ. ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಮುದಾಯದ ಹಿತ ಕಾಯಲು ಸಾಧ್ಯ' ಎಂದರು.

'ಬಸವಣ್ಣ, ಅಂಬೇಡ್ಕರ್ ಸಿದ್ಧಾಂತ, ಸಂವಿಧಾನದ ತತ್ವಗಳನ್ನು ಬಿಜೆಪಿ ಒಪ್ಪುವುದಿಲ್ಲ. ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಹಾಕಲು ಆದೇಶಿಸಿದ್ದು, ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು ಕಾಂಗ್ರೆಸ್ ಸರ್ಕಾರ ಎಂಬುದನ್ನು ಲಿಂಗಾಯತ ಸಮುದಾಯ ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ಬಸವಣ್ಣನವರ ಕಾಯಕ, ದಾಸೋಹ ತತ್ವಗಳನ್ನು ಒಪ್ಪುವುದಿಲ್ಲ' ಎಂದರು.

ಗದಗ: ನಾಲ್ವರ ಬರ್ಬರ ಹತ್ಯೆ

ಪ್ರಜಾವಾಣಿ ವಾರ್ತೆ

ಗದಗ: ಇಲ್ಲಿನ ಗದಗ ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಅವರ ಮನೆಯಲ್ಲೇ ಅವರ ಪುತ್ರ ಸೇರಿ ನಾಲ್ವರನ್ನು ಗುರುವಾರ ಮಧ್ಯರಾತ್ರಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

'ಕಾರ್ತಿಕ್ ಬಾಕಳೆ (27), ಸಂಬಂಧಿಕರಾದ ಪರಶುರಾಮ (58), ಅವರ ಪತ್ನಿ ಲಕ್ಷ್ಮಿಬಾಯಿ (50) ಮತ್ತು ಪುತ್ರಿ ಆಕಾಂಕ್ಷಾ (17) ಕೊಲೆಯಾದವರು. ದಾಸರ ಓಣಿಯಲ್ಲಿರುವ ಮನೆಯ ಹಿಂಬದಿಯ ಕಿಟಕಿಯಿಂದ ಒಳನುಗ್ಗಿ ದುಷ್ಕರ್ಮಿಗಳು ಕೃತ್ಯವೆಸಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕಾಶ್ ಬಾಕಳೆ ಹಾಗೂ ಸುನಂದಾ ಬಾಕಳೆ ಅವರ ಪುತ್ರ ಕಾರ್ತಿಕ ಬಾಕಳೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿದ್ದರು. ಕೊಪ್ಪಳದ ಭಾಗ್ಯನಗರ ನಿವಾಸಿ ಪರುಶುರಾಮ ಅವರು ಪ್ರಕಾಶ್ ಬಾಕಳೆ ಅವರ ಮೊದಲನೇ ಪತ್ನಿಯ ಅಣ್ಣ. ಅವರು ಪತ್ನಿ ಲಕ್ಷ್ಮಿಬಾಯಿ ಹಾಗೂ ಪುತ್ರಿ ಆಕಾಂಕ್ಷಾ ಜೊತೆಗೆ ಏಪ್ರಿಲ್ 17ರಂದು ಲಕ್ಷ್ಮೇಶ್ವರದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಏಪ್ರಿಲ್ 18ರಂದು ಕೊಪ್ಪಳಕ್ಕೆ ಮರಳಬೇಕಿದ್ದ ಅವರು, ರೈಲು ತಪ್ಪಿದ ಕಾರಣ ಮನೆಯಲ್ಲೇ ಉಳಿದುಕೊಂಡರು.

'ಮನೆಯ ಮೊದಲ ಮಹಡಿಯಲ್ಲಿನ ಕೋಣೆಯಲ್ಲಿ ಕಾರ್ತಿಕ್ ಮತ್ತು ಪರುಶುರಾಮ ಹಾಗೂ ನೆಲಮಹಡಿಯಲ್ಲಿನ ಕೋಣೆಯಲ್ಲಿ ಲಕ್ಷ್ಮಿಬಾಯಿ ಮತ್ತು ಆಕಾಂಕ್ಷಾ ಮಲಗಿದ್ದರು. ಕೋಣೆಯ ಬಾಗಿಲುಗಳಿಗೆ ಚಿಲಕ ಹಾಕಿರಲಿಲ್ಲ. ಕೋಣೆಗಳಿಗೆ ನುಗ್ಗಿದ ದುಷ್ಕರ್ಮಿಗಳು ನಾಲ್ವರನ್ನು ಚಾಕುವಿನಿಂದ ಇರಿದು ಕೊಂದಿದ್ದಾರೆ. ನಂತರ ಕೆಳಮಹಡಿಯ ಮತ್ತೊಂದು ಕೋಣೆಯೊಳಗೆ ನುಗ್ಗಲು ಪ್ರಯತ್ನಿಸಿದ್ದಾರೆ. ಆದರೆ, ಚಿಲಕ ಹಾಕಿದ್ದರಿಂದ ಬಾಗಿಲು ತೆರೆಯಲು ಆಗಲಿಲ್ಲ. ಗದ್ದಲ ಕೇಳಿ ಬಂದ ಕೂಡಲೇ ಪ್ರಕಾಶ್ ಬಾಕಳೆ ಅವರು ಪೊಲೀಸ್ ಠಾಣೆಗೆ ಕರೆ ಮಾಡಿದ್ದಾರೆ. ಅಷ್ಟರಲ್ಲಿ ಹಂತಕರು ಅಲ್ಲಿಂದ ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪರುಶುರಾಮ, ಆಕಾಂಕ್ಷಾ, ಲಕ್ಷ್ಮಿಬಾಯಿ



ಕಾರ್ತಿಕ್ ಬಾಕಳೆ

ಹಲವು ಆಯಾಮಗಳಲ್ಲಿ ತನಿಖೆ: ಐಜಿಪಿ

'ಇದು ಗಂಭೀರ ಪ್ರಕರಣ. ಆರೋಪಿಗಳ ಪತ್ತೆ ಮತ್ತು ತನಿಖೆಗೆ ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ. ಬೇರೆ ಬೇರೆ ಆಯಾಮಗಳಲ್ಲಿ ತನಿಖೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ವಿಕಾಶ್ ಕುಮಾರ್ ವಿಕಾಶ್ ತಿಳಿಸಿದರು.

'ಕೃತ್ಯವು ದರೋಡೆಗಾಗಿ ನಡೆದಂತೆ ಇಲ್ಲ. ಮನೆಯಲ್ಲಿ ಚಿನ್ನಾಭರಣ ಕಳವು ಆಗಿಲ್ಲ. ಘಟನೆಯಲ್ಲಿ ನಾಲ್ವರ ಕೊಲೆಯಾಗಿದ್ದು, ಇನ್ನಿಬ್ಬರನ್ನೂ ಕೊಲೆ ಮಾಡುವ ಉದ್ದೇಶ ಹಂತಕರಿಗೆ ಇದ್ದಿರಬಹುದು. ಪ್ರಕಾಶ್ ಬಾಕಳೆ ಅವರ ಸಂಬಂಧಿಕರ ಹಿನ್ನೆಲೆ ಪರಿಶೀಲಿಸಲಾಗುತ್ತಿದೆ. ಕೊಲೆಗೆ ನಿಖರ ಕಾರಣ ಏನು ಎಂಬುದು ಇನ್ನೂ ತಿಳಿದುಬಂದಿಲ್ಲ. ಎಲ್ಲ ಆಯಾಮದಿಂದಲೂ ತನಿಖೆ ನಡೆಸಿದ್ದೇವೆ' ಎಂದು ತಿಳಿಸಿದರು.

ಚಿತ್ರದುರ್ಗ; ಯುವತಿಗೆ ಡ್ರಾಪ್ ಯುವಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ಅನ್ಯಕೋಮಿನ ಯುವತಿಯೊಬ್ಬಳನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದ ಯುವಕನೊಬ್ಬನ ಮೇಲೆ ಯುವತಿಯ ಪರಿಚಯದ ಗುಂಪು ಹಲ್ಲೆ ನಡೆಸಿರುವ ಘಟನೆ ಗುರುವಾರ ರಾತ್ರಿ ನಗರದ ಹೊರವಲಯದಲ್ಲಿ ಸಂಭವಿಸಿದೆ.

ನಗರದ ಲಕ್ಷ್ಮಿ ಬಜಾರ್‌ನ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಈರಜ್ಜನಹಟ್ಟಿಯ ಉಮೇಶ್ ಮತ್ತು ಚೇಳುಗುಡ್ಡದ ಯುವತಿ ರಾತ್ರಿ ಕೆಲಸ ಮುಗಿಸಿ ಮನೆಗೆ ಹೊರಟಿದ್ದರು. ಮಾರ್ಗ ಮಧ್ಯೆ ಡ್ರಾಪ್ ನೀಡುವುದಾಗಿ ಯುವತಿಯನ್ನು ಉಮೇಶ್ ತಮ್ಮ ಬೈಕ್‌ನಲ್ಲಿ ಕೂರಿಸಿಕೊಂಡಿದ್ದರು. ಹೊಳಲ್ಕೆರೆ ರಸ್ತೆಯಲ್ಲಿ ಸಾಗುತ್ತಿದ್ದಾಗ ದ್ವಿಚಕ್ರ ವಾಹನ ಅಡ್ಡಗಟ್ಟಿದ ಗುಂಪೊಂದು ಹಲ್ಲೆ ನಡೆಸಿದೆ. ಗಾಯಗೊಂಡಿರುವ ಉಮೇಶ್ ಅವರನ್ನು ಸ್ಥಳೀಯರು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದರು. ಹಲ್ಲೆಗೆ ಸಂಬಂಧಿಸಿದಂತೆ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಡ್ರಾಪ್ ನೀಡಿದ ಯುವಕನ ವಿರುದ್ಧ ಯುವತಿಯು ನಂತರ ಕೋಟೆ ಠಾಣೆಯಲ್ಲಿ ಕಿರುಕುಳದ ದೂರು ದಾಖಲಿಸಿದ್ದಾರೆ. 'ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದಾಗ ಉಮೇಶ್ ಬೈಕ್‌ನಲ್ಲಿ ಬಂದರು. ಕನಕ ವೃತ್ತದವರೆಗೆ ಡ್ರಾಪ್ ನೀಡುವುದಾಗಿ ಹೇಳಿ ಬೈಕ್‌ನಲ್ಲಿ ಕೂರಿಸಿಕೊಂಡರು. ಆದರೆ, ಕನಕ ವೃತ್ತದಲ್ಲಿ ಬೈಕ್ ನಿಲ್ಲಿಸದೇ ಅಸಭ್ಯವಾಗಿ ವರ್ತಿಸಿದರು. ಗಾಬರಿಗೊಂಡು ಕೂಗಿದಾಗ ನನ್ನ ಅಣ್ಣನ ಸ್ನೇಹಿತರು ನೆರವಿಗೆ ಬಂದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ವಿಷಯ ತಿಳಿದು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ತಡರಾತ್ರಿ ಜಮಾಯಿಸಿದ ಸಂಘ ಪರಿವಾರದ ಕಾರ್ಯಕರ್ತರು, ಹಲ್ಲೆ ನಡೆಸಿದ ಗುಂಪನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಹಲ್ಲೆ ಪ್ರಕರಣದಿಂದ ನಗರದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಅವರ ಪುತ್ರ ಉಮೇಶ್ ಕಾರಜೋಳ ಆಸ್ಪತ್ರೆಗೆ ಭೇಟಿ ನೀಡಿ ಯುವಕನ ಆರೋಗ್ಯ ವಿಚಾರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಜೆಎಸ್‌ಡಬ್ಲ್ಯು ಎನರ್ಜಿ ಅಧಿಕಾರಿಗೆ ಆನ್‌ಲೈನ್‌ನಲ್ಲಿ ₹1.21 ಕೋಟಿ ವಂಚನೆ

ಬಳ್ಳಾರಿ: ಒಂದು ಲಕ್ಷ ಹೂಡಿಕೆ ಮಾಡಿದರೆ ಶೇ 480ರಷ್ಟು ಲಾಭಾಂಶ ನೀಡುವುದಾಗಿ ನಂಬಿಸಿ ಜೆಎಸ್‌ಡಬ್ಲ್ಯು ಎನರ್ಜಿ ಲಿಮಿಟೆಡ್‌ನ ಹಿರಿಯ ಅಧಿಕಾರಿಗೆ ಆನ್‌ಲೈನ್‌ನಲ್ಲಿ ₹1.21 ಕೋಟಿ ವಂಚನೆ ಆಗಿದೆ. ಈ ಸಂಬಂಧ ಬಳ್ಳಾರಿಯ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರಿ ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಕಾಣಿಸಿದ್ದ 'ಶೇರ್ ಹೋಲ್ಡರ್ಸ್ ಇನ್ವೆಸ್ಟ್‌ಮೆಂಟ್ ಗ್ರೂಪ್' ಎಂಬ ಜಾಹೀರಾತು ಕ್ಲಿಕ್ಕಿಸಿದ್ದರು. ಅದರೊಳಗೆ ಪ್ರವೇಶಿಸಿದ್ದ ಅವರನ್ನು ವಾಟ್ಸ್‌ಆ್ಯಪ್ ಗ್ರೂಪ್‌ವೊಂದಕ್ಕೆ ಸೇರಿಸಲಾಗಿತ್ತು. ಗ್ರೂಪ್ ಸೂಚನೆಯಂತೆ ಆನ್‌ಲೈನ್ ಖಾತೆಯೊಂದನ್ನು ಅಧಿಕಾರಿ ರಚಿಸಿದ್ದರು. ಒಂದು ಲಕ್ಷ ಹೂಡಿಕೆ ಮಾಡಿದರೆ ಶೇ 480ರಷ್ಟು ಲಾಭ ನೀಡುವುದಾಗಿ ಗ್ರೂಪ್‌ನಲ್ಲಿ ಅವರಿಗೆ ಆಮಿಷ ಒಡ್ಡಲಾಗಿತ್ತು' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ವಂಚಕರ ಮಾತುಗಳನ್ನು ನಂಬಿದ ಅಧಿಕಾರಿ ಫೆ.20ರಿಂದ ಮಾರ್ಚ್ 16ರ ವರೆಗೆ ಹಂತ ಹಂತವಾಗಿ ವಂಚಕರಿಗೆ ₹1.21 ಕೋಟಿ ಹಣ ಪಾವತಿಸಿದ್ದಾರೆ. ನಂತರ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಅವರು ಏಪ್ರಿಲ್ 17ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಾಮಪತ್ರ ಹಿಂಪಡೆಯಲು ಏ. 22 ಕೊನೆಯ ದಿನ

ಹಂತ–2; 337 ಅಭ್ಯರ್ಥಿಗಳಿಂದ ನಾಮಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡಿನ ಶಿವಮೊಗ್ಗ, ಕರಾವಳಿಯ ಉತ್ತರ ಕನ್ನಡ, ಮಧ್ಯ ಕರ್ನಾಟಕದ ದಾವಣಗೆರೆ ಸೇರಿದಂತೆ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 14 ಕ್ಷೇತ್ರ ಗಳಲ್ಲಿನ ನಾಮಪತ್ರ ಸಲ್ಲಿಕೆಗೆ ಶುಕ್ರವಾರ ತೆರೆ ಬಿದ್ದಿದೆ. ನಾಮಪತ್ರ ವಾಪಸ್‌ಗೆ ಅವಕಾಶವಿದ್ದು, ಆರಂಭಿಕ ಹಂತದ ಸವಾಲಿನ ಚಿತ್ರಣ ರೂಪ ಪಡೆದಂತಾಗಿದೆ.

ನಾಮಪತ್ರ ಸಲ್ಲಿಸುವ ಕೊನೆಯ ದಿನವಾದ ಏ.19ರಂದು 137 ಅಭ್ಯರ್ಥಿಗಳು ಸೇರಿದಂತೆ ಇಲ್ಲಿಯವರೆಗೆ 337 ಅಭ್ಯರ್ಥಿಗಳು 503 ನಾಮಪತ್ರ ಸಲ್ಲಿಸಿದ್ದಾರೆ. ಶನಿವಾರ (ಏ.20) ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯುವ ಅವಧಿ ಏ. 22ಕ್ಕೆ ಮುಕ್ತಾಯವಾಗಲಿದೆ. ಮೇ 7ರಂದು ಮತದಾನ ನಡೆಯಲಿದೆ.

309 ನಾಮಪತ್ರ ಸಲ್ಲಿಸಿದ ಪುರುಷರು

28 ನಾಮಪತ್ರ ಸಲ್ಲಿಸಿದ ಮಹಿಳೆಯರು

337 ಒಟ್ಟು ಅಭ್ಯರ್ಥಿಗಳು

ಪಕ್ಷ	ಕಣದಲ್ಲಿನ ಅಭ್ಯರ್ಥಿಗಳು
ಕಾಂಗ್ರೆಸ್	14
ಬಿಜೆಪಿ	14

ಏ. 12ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಆರಂಭದಲ್ಲಿ ಭರಾಟೆ ಇರಲಿಲ್ಲ. ಕೊನೆಯ ಮೂರು ದಿನಗಳಲ್ಲಿ ಹಲವು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ತೀವ್ರ ಸ್ಪರ್ಧೆ ಇರುವ ಕ್ಷೇತ್ರಗಳಲ್ಲಿ ಭಾರಿ ಜನ ಸೇರಿಸಿದ ಅಭ್ಯರ್ಥಿಗಳು, ತಮ್ಮ ಬಲವನ್ನೂ ಪ್ರದರ್ಶಿಸಿದರು.

ಬಿಜೆಪಿ–ಜೆಡಿಎಸ್ ಮಧ್ಯೆ ಮೈತ್ರಿಯಾಗಿದ್ದರೂ, ಜೆಡಿಎಸ್ ಎರಡನೇ ಹಂತದಲ್ಲಿ ಮತದಾನ ನಡೆಯುವ ಯಾವ ಕ್ಷೇತ್ರದಲ್ಲೂ ಸ್ಪರ್ಧಿಸಿಲ್ಲ. ಹಾಗಾಗಿ, ಎಲ್ಲ 14 ಕ್ಷೇತ್ರಗಳಲ್ಲೂ ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳು ಸೆಣಸಲಿದ್ದಾರೆ. ಶಿವಮೊಗ್ಗದಲ್ಲಿ ಕೆ.ಎಸ್. ಈಶ್ವರಪ್ಪ (ಬಿಜೆಪಿ), ರಾಯಚೂರಿನಲ್ಲಿ ಬಿ.ವಿ. ನಾಯಕ (ಬಿಜೆಪಿ) ದಾವಣಗೆರೆಯಲ್ಲಿ ವಿನಯ್‌ಕುಮಾರ್ (ಕಾಂಗ್ರೆಸ್) ಬಂಡಾಯ ಅಭ್ಯರ್ಥಿಗಳಾಗಿ, ಧಾರವಾಡದಲ್ಲಿ ದಿಂಗಾಲೇಶ್ವರ ಶ್ರೀ ಪಕ್ಷೇತರರಾಗಿ ಕಣಕ್ಕೆ ಇಳಿದಿದ್ದಾರೆ.

ನಾಮಪತ್ರ ವಾಪಸ್‌ಗೆ ಸೋಮವಾರದ ವರೆಗೆ ಸಮಯವಿದೆ. ಬಂಡಾಯ ಅಭ್ಯರ್ಥಿಗಳನ್ನು ಮನವೊಲಿಸುವ ಕೆಲಸಕ್ಕೆ ಆಯಾ ಪಕ್ಷದ ನಾಯಕರು ಮುಂದಾಗಿದ್ದಾರೆ. ಒಂದು ವೇಳೆ ಬಂಡಾಯ ಹಾಗೂ ಪಕ್ಷೇತರ ಅಭ್ಯರ್ಥಿಗಳು ಹಿಂದೆ ಸರಿದಿರೆ, ಕಣ ಚಿತ್ರಣ ಬದಲಾಗಿದೆ.

ಕಣದ ಪ್ರಮುಖ ಹುರಿಯಾಳುಗಳು	ಕ್ಷೇತ್ರ	ಪಕ್ಷ
ಪ್ರಲ್ಹಾದ ಜೋಶಿ	ಧಾರವಾಡ	ಬಿಜೆಪಿ
ಭಗವಂತ ಖೂಬಾ	ಬೀದರ್	ಬಿಜೆಪಿ
ಜಗದೀಶ ಶೆಟ್ಟರ	ಬೆಳಗಾವಿ	ಬಿಜೆಪಿ
ಬಸವರಾಜ ಬೊಮ್ಮಾಯಿ	ಹಾವೇರಿ	ಬಿಜೆಪಿ
ಪಿ.ಸಿ.ಗದ್ದಿಗೌಡರ್	ಬಾಗಲಕೋಟೆ	ಬಿಜೆಪಿ
ಬಿ.ವೈ.ರಾಘವೇಂದ್ರ	ಶಿವಮೊಗ್ಗ	ಬಿಜೆಪಿ
ಗೀತಾ ಶಿವರಾಜ್‌ಕುಮಾರ್	ಶಿವಮೊಗ್ಗ	ಕಾಂಗ್ರೆಸ್
ಕೆ.ಎಸ್. ಈಶ್ವರಪ್ಪ	ಶಿವಮೊಗ್ಗ	ಪಕ್ಷೇತರ
ರಮೇಶ್ ಜಿಗಜಿಣಗಿ	ವಿಜಯಪುರ	ಬಿಜೆಪಿ
ಬಿ.ಶ್ರೀರಾಮುಲು	ಬಳ್ಳಾರಿ	ಬಿಜೆಪಿ
ರಾಧಾಕೃಷ್ಣ ದೊಡ್ಡಮನಿ	ಕಲಬುರಗಿ	ಕಾಂಗ್ರೆಸ್
ವಿಶ್ವೇಶ್ವರ ಹೆಗಡೆ ಕಾಗೇರಿ	ಉತ್ತರ ಕನ್ನಡ	ಬಿಜೆಪಿ
ದಿಂಗಾಲೇಶ್ವರ ಶ್ರೀ	ಧಾರವಾಡ	ಪಕ್ಷೇತರ

ಮಂಡ್ಯದಲ್ಲಿ ಪ್ರಚಾರಕ್ಕೆ ಸೂಚನೆ ಬಂದಿಲ್ಲ: ಸುಮಲತಾ

ಉಡುಪಿ: 'ಮಂಡ್ಯದಲ್ಲಿ ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ಪರ ಪ್ರಚಾರ ಮಾಡುವಂತೆ ಇದುವರೆಗೂ ಸೂಚನೆ ಬಂದಿಲ್ಲ. ಬಂದರೆ, ಖಂಡಿತ ಎನ್‌ಡಿಎ ಪರ ಪ್ರಚಾರಕ್ಕೆ ಹೋಗುತ್ತೇನೆ' ಎಂದು ಮಂಡ್ಯದ ಸಂಸದೆ ಸುಮಲತಾ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಂಡ್ಯದಲ್ಲಿ ಪ್ರಚಾರ ಮಾಡುತ್ತಿಲ್ಲ ಎಂದು ಅನಗತ್ಯವಾಗಿ ಚರ್ಚೆ ಮಾಡಲಾಗುತ್ತಿದೆ. ಯಾವ ಅಭ್ಯರ್ಥಿಯ ಪರ ಪ್ರಚಾರ ಮಾಡಬೇಕು ಎಂದು ಪಕ್ಷ ಸೂಚಿಸುತ್ತದೆಯೋ ಅವರ ಪರ ಪ್ರಚಾರ ಮಾಡುತ್ತೇನೆ' ಎಂದರು.

'ನಟ ದರ್ಶನ್‌ಗೆ ನಿರ್ದಿಷ್ಟ ಪಕ್ಷದ ಪರವಾಗಿ ಪ್ರಚಾರ ಮಾಡುವಂತೆ ಎಂದೂ ಹೇಳಿಲ್ಲ, ಹೇಳುವುದೂ ಇಲ್ಲ. ದರ್ಶನ್ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ಮಾಡುತ್ತಿರುವುದು ಹೊಸದಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್, ರೈತ ಸಂಘ, ಬಿಜೆಪಿ ಪರ ಪ್ರಚಾರ ಮಾಡಿದ್ದರು. ಮಂಡ್ಯದಲ್ಲಿ ನನ್ನ ಪರವಾಗಿಯೂ ಪ್ರಚಾರ ಮಾಡಲು ಕರೆದಿರಲಿಲ್ಲ. ಸ್ವಇಚ್ಛೆಯಿಂದ ದರ್ಶನ್ ಹಾಗೂ ಯಶ್ ಪ್ರಚಾರಕ್ಕೆ ಬಂದಿದ್ದರು' ಎಂದು ಹೇಳಿದರು.

ಸ್ಪರ್ಧೆಗೆ ಇಳಿದ 'ಮೌನ' ಅಭ್ಯರ್ಥಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಕುಡಿಯುವ ನೀರನ್ನು ಮಾರಾಟ ವಸ್ತುವಾಗಿರಿಸುವುದು ಸೇರಿ ವಿವಿಧ ಜನ ವಿರೋಧಿ ನೀತಿಗಳನ್ನು ವಿರೋಧಿಸಿ 19 ವರ್ಷಗಳಿಂದ ಮೌನಾಚರಣೆ ಮತ್ತು ಉಪವಾಸ ಮಾಡುವ ಬೆಂಗಳೂರಿನ ಅಂಬ್ರೋಸ್ ಡಿ ಮೆಲ್ಲೋ ಬಾಗಲಕೋಟೆ ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಅಂಬ್ರೋಸ್ ಡಿ ಮೆಲ್ಲೋ

2005ರಿಂದ ಮೌನವಾಗಿರುವ ಅವರು, ನಿತ್ಯ ಸಂಜೆ 5 ಗಂಟೆಯವರೆಗೆ ಉಪವಾಸ ಇರುತ್ತಾರೆ. 'ಕುಡಿಯುವ ನೀರು ಮಾರಾಟ, ಖರೀದಿ ನಿಲ್ಲಬೇಕು. ಶಿಕ್ಷಣ ಪ್ರತಿಯೊಬ್ಬರ ಹಕ್ಕು ಆಗಬೇಕು. ಸಾರ್ವಜನಿಕ ಸ್ವಚ್ಛತೆ ಬಗ್ಗೆ ಜಾಗೃತಿ ಆಗಬೇಕು' ಎಂಬುದು ಸೇರಿ ವಿವಿಧ ವಿಷಯಗಳ ಬಗ್ಗೆ ಮೌನವಾಗಿ ಹೋರಾಟ ನಡೆಸಿದ್ದಾರೆ. .

ಪ್ರಶ್ನೆ ಕೇಳಿದರೆ ಸ್ಲೇಟ್ ಮೇಲೆ ಬರೆದು ಉತ್ತರಿಸುತ್ತಾರೆ. ಅವರು ಈವರೆಗೆ ವಿಧಾನಸಭೆ, ಲೋಕಸಭೆ ಸೇರಿ 13 ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ. 'ಮೌನ ವ್ರತವನ್ನು ಯಾವಾಗ ಅಂತ್ಯಗೊಳಿಸುವಿರಿ' ಎಂಬ ಪ್ರಶ್ನೆಗೆ, 'ಸಂಸತ್ತಿನಲ್ಲಿ ಮಾತನಾಡುವ ಮೂಲಕ ಅಂತ್ಯಗೊಳಿಸಲು ನಿರ್ಧರಿಸಿದ್ದೇನೆ' ಎಂದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಧಾರಾವಾಹಿಗಳಲ್ಲಿ ಖಳನಾಯಕಿಯರೇಕೆ ಹೀಗೆ?

ಆಳ-ಅಗಲ
ನಕ್ಸಲರ ನಿಗ್ರಹ ಮತ್ತು ಪುನರ್ವಸತಿ ಬದಲಾಯಿತೇ ಸರ್ಕಾರದ ಆದ್ಯತೆ?

ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಏರ್‌ಟ್ಯಾಕ್ಸಿ ಸೇವೆಗೆ ಸಿದ್ಧತೆ 12

‘ವೈದ್ಯರ ಸೂಚನೆಯಂತೆಯೇ ಆಹಾರ’ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,088	22,147	₹75,830 (ಬೆಂಗಳೂರು)	₹85,700 (ಬೆಂಗಳೂರು)	83.48

ಚಿಕ್ಕಬಳ್ಳಾಪುರ, ಬೆಂಗಳೂರಲ್ಲಿ ಮೋದಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ನಾಲ್ಕು ಲೋಕಸಭಾ ಕ್ಷೇತ್ರಗಳು, ಚಿಕ್ಕಬಳ್ಳಾ ಪುರ ಮತ್ತು ಕೋಲಾರ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಪ್ರಚಾರ ನಡೆಸಲಿದ್ದಾರೆ.

ರಾಜ್ಯದಲ್ಲಿ ಇದೇ 26ರಂದು 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಮತದಾನ ನಡೆಯಲಿದೆ. ಈಗಾಗಲೇ ಅವರು ಮೈಸೂರಿನಲ್ಲಿ ಸಾರ್ವಜನಿಕ ಸಭೆ ಮತ್ತು ಮಂಗ ಳೂರಿನಲ್ಲಿ ರೋಡ್ ಶೋ ನಡೆಸಿದ್ದಾರೆ.

ಚಿಕ್ಕಬಳ್ಳಾಪುರ ಮತ್ತು ಕೋಲಾರ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಚಿಕ್ಕಬಳ್ಳಾಪುರದಲ್ಲಿ ಮಧ್ಯಾಹ್ನ 3ಕ್ಕೆ, ಬೆಂಗಳೂರು ಉತ್ತರ, ದಕ್ಷಿಣ, ಕೇಂದ್ರ ಮತ್ತು ಗ್ರಾಮಾಂತರ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಬೆಂಗಳೂರು ಅರಮನೆ ಮೈದಾನದಲ್ಲಿ ಸಂಜೆ 5ಕ್ಕೆ ಸಾರ್ವಜನಿಕ ಸಭೆಗಳು ನಡೆಯಲಿವೆ.

7ನೇ ಪುಟ ನೋಡಿ

‘ಲೋಕ’ಚುನಾವಣೆ: ಹಲವೆಡೆ ಹಿಂಸಾಚಾರ, ಕಾರ್ಯಕರ್ತರ ಮಧ್ಯೆ ಘರ್ಷಣೆ

ಹಂತ 1: ಮತದಾನ ಶೇ 62

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ವಿವಿಧ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆ, ಮಣಿಪುರದ ಕೆಲವೆಡೆ ಗುಂಡಿನ ದಾಳಿ ಹಾಗೂ ಛತ್ತೀಸಗಢದಲ್ಲಿ ನೆಲಬಾಂಬ್ ಸ್ಫೋಟದಂತಹ ಘಟನೆಗಳ ನಡುವೆ ಶುಕ್ರವಾರ ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ನಡೆದಿದ್ದು, ಶೇ 62ಕ್ಕೂ ಅಧಿಕ ಪ್ರಮಾಣದ ಮತದಾನವಾಗಿದೆ.

ಒಟ್ಟು 102 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆದಿದ್ದು, ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೇ ಮತದಾರರು ತಮ್ಮ ಸಂವಿಧಾನ ದತ್ತ ಹಕ್ಕನ್ನು ಚಲಾಯಿಸಿದ್ದಾರೆ. ಶುಕ್ರವಾರ ಸಂಜೆ 7 ಗಂಟೆ ಹೊತ್ತಿಗೆ ಲಭ್ಯವಾಗಿರುವ ಮಾಹಿತಿಯಂತೆ, ಶೇ 62.37ರಷ್ಟು ಮತದಾನವಾಗಿದ್ದು, ಚಲಾವಣೆಯಾದ ಮತಗಳ ಕುರಿತು ಶನಿವಾರ ಅಂತಿಮ ಅಂಕಿ-ಅಂಶ ಸಿಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

13ನೇ ಪುಟ ನೋಡಿ

ಬಹಿಷ್ಕಾರ, ಸಂಘರ್ಷ ಇತ್ಯಾದಿ

- ಪೂರ್ವ ನಾಗಾಲ್ಯಾಂಡ್‌ನ ಆರು ಜಿಲ್ಲೆಗಳಲ್ಲಿ ಯಾರೊಬ್ಬರೂ ಮತ ಚಲಾಯಿಸಿಲ್ಲ
- ಛತ್ತೀಸಗಢದ ಬಿಜಾಪುರ ಜಿಲ್ಲೆಯ ಬೈರಮಗಢ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಕ್ಸಲರು ಇಟ್ಟಿದ್ದ ಕಚ್ಚಾಬಾಂಬ್ ಸ್ಫೋಟಗೊಂಡ ಪರಿಣಾಮ ಸಿಆರ್‌ಪಿಎಫ್ ಯೋಧರೊಬ್ಬರು ಗಾಯಗೊಂಡಿದ್ದಾರೆ; ಜಿಲ್ಲೆಯ ಗುಲ್ಗಾಂ ಗ್ರಾಮದ ಸಮೀಪ ಗ್ರೆನೇಡ್ ಲಾಂಚರ್‌ಗೆ ಸಿಡಿಮದ್ದು ತುಂಬುವ ಕೋಶವೊಂದು ಆಕಸ್ಮಿಕವಾಗಿ ಸ್ಫೋಟಿಸಿದ ಪರಿಣಾಮ ಸಿಆರ್‌ಪಿಎಫ್ ಯೋಧರೊಬ್ಬರು ಗಾಯಗೊಂಡಿದ್ದಾರೆ.
- ಪಶ್ಚಿಮ ಬಂಗಾಳದ ಮೂರು ಲೋಕಸಭಾ ಕ್ಷೇತ್ರದ ವಿವಿಧೆಡೆ ಟಿಎಂಸಿ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ
- ಇದೇ ಮೊದಲ ಬಾರಿಗೆ ಛತ್ತೀಸಗಢದ ಬಸ್ತಾರ್ ಜಿಲ್ಲೆಯ 56 ಗ್ರಾಮಗಳ ಜನರು ತಮ್ಮ ಗ್ರಾಮಗಳಲ್ಲಿಯೇ ಸ್ಥಾಪಿಸಿದ್ದ ಮತಗಟ್ಟೆಗಳಲ್ಲಿ ಹಕ್ಕು ಚಲಾಯಿಸಿದ್ದಾರೆ
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಬುಡಕಟ್ಟು ಜನರು ಭಾರಿ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದಿದ್ದರು. ಗ್ರೇಟ್ ನಿಕೋಬಾರ್‌ನ ಶೊಂಪೇನ್ ಬುಡಕಟ್ಟು ಜನರು ಇದೇ ಮೊದಲ ಬಾರಿಗೆ ಮತ ಚಲಾವಣೆ ಮಾಡಿದ್ದು ವಿಶೇಷ
- ಅರುಣಾಚಲ ಪ್ರದೇಶದ ಅಂಜಾವ್ ಜಿಲ್ಲೆಯ ಮಾಲೋಗಾಮ್ ಎಂಬ ಹಳ್ಳಿಯಲ್ಲಿ ಸೊಖೇಲಾ ತಯಾಂಗ್ ಎಂಬ ಒಬ್ಬರೇ ಮಹಿಳೆ ಮತ ಚಲಾಯಿಸಿದರು. ಇಡೀ ಹಳ್ಳಿಯಲ್ಲಿನ ಏಕೈಕ ಮತದಾರರು ಇವರು

ಮಣಿಪುರ: ಕೆಲವೆಡೆ ಗುಂಡಿನ ದಾಳಿ

ಇಂಫಾಲ್: ಇನ್ನರ್ ಮಣಿಪುರ ಲೋಕಸಭಾ ಕ್ಷೇತ್ರದ ಎರಡು ಸ್ಥಳಗಳಲ್ಲಿ ಗುಂಡಿನ ದಾಳಿ ನಡೆದಿವೆ. ಆದರೆ ಯಾರೊಬ್ಬರಿಗೂ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಷ್ಣುಪುರ ಜಿಲ್ಲೆಯ ಮೊಯಿರಾಂಗ್ ಕಂಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇವಿಎಂ ಯಂತ್ರವನ್ನು ಸುಟ್ಟು ಹಾಕಿದ್ದು, 65 ವರ್ಷದ ವೃದ್ಧರ ಮೇಲೆ ಅಪರಿಚಿತ ಬಂದೂಕುಧಾರಿ ಗುಂಡು ಹಾರಿಸಿದ್ದಾನೆ ಎಂದು ಮೂಲಗಳು ಹೇಳಿವೆ. ತಮ್ನಾಪೊಕ್ಪಿಯಲ್ಲಿ ಶಸ್ತ್ರಸಜ್ಜಿತ ವ್ಯಕ್ತಿಗಳು ಮತಗಟ್ಟೆ ಬಳಿ ಗಾಳಿಯಲ್ಲಿ ಹಲವು ಸುತ್ತು ಗುಂಡು ಹಾರಿಸಿ ಮತದಾರರನ್ನು ಓಡಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಲಾಯಿತು ಎಂದು ಎಂದು ಪೊಲೀಸರು ಹೇಳಿದ್ದಾರೆ.

13ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ವಿದ್ಯಾರ್ಥಿನಿ ನೇಹಾ ಕೊಲೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಬಿವಿಬಿ ಕಾಲೇಜು ಆವರಣದಲ್ಲಿ ಗುರುವಾರ ಸಂಜೆ ನಡೆದ ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆಯನ್ನು ಖಂಡಿಸಿ, ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು. ‘ಆರೋಪಿ ಫಯಾಜ್‌ಗೆ ಗಲ್ಲುಶಿಕ್ಷೆ ವಿಧಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಬಹುತೇಕ ಕಡೆ ಪ್ರತಿಭಟನಕಾರರು ಆರೋಪಿಯ ಭಾವಚಿತ್ರ ಸುಟ್ಟು ಹಾಕಿ, ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದರು.

ಆರೋಪಿಯ ಊರಾದ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನ-ವಳ್ಳಿಯಲ್ಲಿ ವಿವಿಧ ಸಂಘಟನೆಯವರು ಎರಡು ಗಂಟೆ ರಾಜ್ಯ ಹೆದ್ದಾರಿ ಬಂದ್ ಮಾಡಿದರು. ಕೃತ್ಯದ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಮುನವಳ್ಳಿಯಲ್ಲಿ ಮೂರು ದಿನ ಶೋಕಾಚರಣೆ ಘೋಷಿಸಲಾಗಿದ್ದು, ಶುಕ್ರವಾರ ವಹಿವಾಟು ಸಂಪೂರ್ಣ ಸ್ತಬ್ಧಗೊಂಡಿತ್ತು.

ಮಳೆಯಲ್ಲಿ ಸವಾರಿ...

ದಾವಣಗೆರೆಯ ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಸಂಜೆ ಮಳೆ ಸುರಿಯಿತು. ರಾಜ್ಯದ ಇತರ ಭಾಗಗಳಲ್ಲಿಯೂ ಮಳೆಯಾಯಿತು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ವಿವರ 07

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗಾಗಿ ಶಿಕ್ಷಣದಲ್ಲಿ

ಪ್ರದರ್ಶನ, ದೃಶ್ಯ ಕಲೆಗಳ ಬಳಕೆ

ADVERTORIAL

21ನೇ ಶತಮಾನದಲ್ಲಿ, ಶಿಕ್ಷಣವು ಕ್ರಿಯಾತ್ಮಕವಾಗಿ ಸಾಕಷ್ಟು ವಿಕಸನಗೊಂಡಿದೆ, ವೈಯಕ್ತಿಕಗೊಳಿಸಿದ ಕಲಿಕೆಯ ವಿಧಾನಗಳು ಮಹತ್ವ ಪಡೆಯುತ್ತಿವೆ. ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಈ ಚಳವಳಿಯ ಮುಂಚೂಣಿಯಲ್ಲಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವಗಳನ್ನು ಹೆಚ್ಚಿಸಲು ಹಲವು ಬಗೆಯ ಕಲಾ ಶಿಕ್ಷಣವನ್ನು ಸಂಯೋಜಿಸುತ್ತದೆ. **ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ಶೈಕ್ಷಣಿಕ–ಪ್ರದರ್ಶನ ಮತ್ತು ದೃಶ್ಯ ಕಲೆಗಳ ವಿಭಾಗದ ಉಪಾಧ್ಯಕ್ಷರಾದ ಡಾ. ಮಾಧುರಿ ಸಾಗಲೆ** ಅವರು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಪೋಷಿಸುವಲ್ಲಿ ಈ ಉಪಕ್ರಮಗಳು ಎಷ್ಟು ಮಹತ್ವ ಪಡೆದಿವೆ ಎಂದು ವಿವರಿಸುತ್ತಾರೆ.

‘ಆರ್ಕಿಡ್ಸ್ ಸಂಸ್ಥೆಯಲ್ಲಿ, ನಮ್ಮ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಹಯೋಗವನ್ನು ಬೆಳೆಸಲು ಕಲಾ ಶಿಕ್ಷಣದ ಪರಿವರ್ತಕ ಶಕ್ತಿಯಲ್ಲಿ ನಾವು ಸಾಕಷ್ಟು ನಂಬಿಕೆ ಇರಿಸುತ್ತೇವೆ’ ಎಂದು ಡಾ. ಸಾಗಲೆ ಹೇಳುತ್ತಾರೆ. ಉದಾಹರಣೆಗೆ, ಕುಂಬಾರಿಕೆ ಮತ್ತು ಬಟ್ಟೆ ತಯಾರಿಕೆ ವಿದ್ಯಾರ್ಥಿಗಳ ಸೃಜನಶೀಲತೆ, ಏಕಾಗ್ರತೆ, ಸಾಂಸ್ಕೃತಿಕ ಶ್ರೇಷ್ಠತೆ ಮತ್ತು ತಂಡದ ಶ್ರಮವನ್ನು ಪ್ರಚೋದಿಸುವ ಅನುಭವಗಳನ್ನು ನೀಡುತ್ತವೆ. ಈ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ತಮ್ಮನ್ನು ತಾವು ವ್ಯಕ್ತಪಡಿಸುವುದಕ್ಕೆ ಮತ್ತು ಪರಿಶೋಧನೆ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಒದಗಿಸುತ್ತವೆ, ಹೊಸ ರೀತಿಯಿಂದ ಯೋಚಿಸಲು ಮತ್ತು ಸಮಸ್ಯೆಗಳನ್ನು ಸೃಜನಾತ್ಮಕವಾಗಿ ಪರಿಹರಿಸಲು ಅವರನ್ನು ಪ್ರೋತ್ಸಾಹಿಸುತ್ತವೆ’

ಅಲ್ಲದೆ, ವಿದ್ಯಾರ್ಥಿಗಳ ಕಲಾತ್ಮಕ ಪ್ರತಿಭೆಯನ್ನು ಪ್ರದರ್ಶಿಸುವುದಕ್ಕಾಗಿ ಆರ್ಕಿಡ್ಸ್ ಸಂಸ್ಥೆಯು ಪ್ರಾಜೆಕ್ಟ್ **ವೋಕ್ಸ್ ಸಿಂಫನಿ** ಅನ್ನು ಪ್ರಾರಂಭಿಸಿತು. ಈ ಉಪಕ್ರಮವನ್ನು ಪ್ರಾರಂಭಿಸಿದಲ್ಲಿಂದ ಏಕವ್ಯಕ್ತಿ ರೆಕಾರ್ಡಿಂಗ್‌ಗಳಿಂದ ಡ್ಯುಯೆಟ್ ಡೈರೀಸ್ ಮತ್ತು ಗ್ರೂಪ್ ರೆಕಾರ್ಡಿಂಗ್ ಚಟುವಟಿಕೆಗಳನ್ನು ಕಂಡಿದೆ. ಮುಂಬೈ, ಪುಣೆ, ಬೆಂಗಳೂರು, ಹೈದರಾಬಾದ್ ಮತ್ತು ಚೆನ್ನೈ ವಲಯಗಳಲ್ಲಿನ ಆರ್ಕಿಡ್ಸ್ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳ ಒಟ್ಟು 61 ರೆಕಾರ್ಡಿಂಗ್‌ಗಳು ಮತ್ತು 34 ಎವಿ ಪ್ರೊಡಕ್ಷನ್‌ಗಳು ನಡೆದಿವೆ. “ಆರ್ಕಿಡ್ಸ್ ಸಂಸ್ಥೆಯಲ್ಲಿ, ಇಮ್ಯಾಜಿನ್ ಹಬ್ ಲ್ಯಾಬ್ ಮಾದರಿಯ ಉಪಕ್ರಮಗಳ ಮೂಲಕ ನಾವು ಕಲಾ ಶಿಕ್ಷಣಕ್ಕೆ ಆದ್ಯತೆ ನೀಡುತ್ತೇವೆ”, ಎಂದು ಡಾ. ಸಾಗಲೆ ವಿವರಿಸಿದರು. ಈ ಪ್ರಯೋಗಾಲಯಗಳು ವಿದ್ಯಾರ್ಥಿಗಳಿಗೆ ಹೊಸ ರೀತಿಯಲ್ಲಿ ಆಲೋಚಿಸುವುದನ್ನು ಕಲಿಯಲು, ಹೊಸತನ್ನು ರಚಿಸಲು ಮತ್ತು ಅನ್ವೇಷಿಸಲು, ಸೃಜನಶೀಲತೆಯನ್ನು ಬೆಳೆಸಲು ಮತ್ತು ಅವರ ಸಮಗ್ರ ಯೋಗಕ್ಷೇಮವನ್ನು ವೃದ್ಧಿಸಲು ಅಮೂಲ್ಯವಾದ ಅವಕಾಶಗಳನ್ನು ಒದಗಿಸುತ್ತವೆ”.

ಕಿರುಚಿತ್ರ ನಿರ್ಮಾಣವನ್ನು ರಂಗಭೂಮಿಯ ಪಠ್ಯಕ್ರಮದಲ್ಲಿ ಸಂಯೋಜಿಸುವುದು ಆರ್ಕಿಡ್ಸ್ ಸಂಸ್ಥೆಯು ಸ್ವೀಕರಿಸಿದ ಮತ್ತೊಂದು ಹೊಸ ವಿಧಾನವಾಗಿದೆ. “ಬರವಣಿಗೆ, ನಿರ್ದೇಶನ, ನಟನೆ, ಛಾಯಾಗ್ರಹಣ, ಸಂಕಲನ ಮತ್ತು ಧ್ವನಿ ವಿನ್ಯಾಸ ಮುಂತಾದ ವಿವಿಧ ವಿಭಾಗಗಳನ್ನು ಇದು ಒಳಗೊಂಡಿದೆ, ಕಲೆ ಮತ್ತು ತಂತ್ರಜ್ಞಾನದ ವಿವಿಧ ಅಂಶಗಳನ್ನು ಒಳಗೊಂಡು ಕಲಿಕೆಯ ಸಮಗ್ರ ಅನುಭವವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ರಂಗಭೂಮಿಯು ಪ್ರಾಥಮಿಕವಾಗಿ ನೇರ ಪ್ರದರ್ಶನದ ಮೇಲೆ ಕೇಂದ್ರೀಕರಿಸಿದರೆ, ಕಿರುಚಿತ್ರ ತಯಾರಿಕೆಯನ್ನು ಪರಿಚಯಿಸುವುದು ವಿದ್ಯಾರ್ಥಿಗಳನ್ನು ವಿಭಿನ್ನ ಮಾಧ್ಯಮದ ಮೂಲಕ ಕಥೆ ಹೇಳುವುದನ್ನು ಅನ್ವೇಷಿಸಲು ಪ್ರೋತ್ಸಾಹಿಸುತ್ತದೆ, ಪ್ರಯೋಗ ಮತ್ತು ಸೃಜನಶೀಲತೆಯನ್ನು ಬೆಳೆಸುತ್ತದೆ” ಎಂದು ಡಾ. ಸಾಗಲೆ ನುಡಿದರು.

ಒಟ್ಟಾರೆಯಾಗಿ, ಪ್ರದರ್ಶನ ಮತ್ತು ದೃಶ್ಯ ಕಲೆಗಳ ಮೂಲಕ ಸಮಗ್ರ ಶಿಕ್ಷಣಕ್ಕೆ ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ತೋರುತ್ತಿರುವ ಬದ್ಧತೆಯು ಕ್ರಿಯಾತ್ಮಕ ಜಗತ್ತಿನಲ್ಲಿ ಯಶಸ್ಸಿಗೆ ಸಿದ್ಧವಾಗಿರುವ ಸುಸಂಗತ ವ್ಯಕ್ತಿಗಳನ್ನು ಪೋಷಿಸುವುದಕ್ಕಾಗಿ ಸಂಸ್ಥೆಯು ಸಮರ್ಪಣಾ ಭಾವದಿಂದ ಕೆಲಸ ಮಾಡುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ಆರ್ಕಿಡ್ಸ್ ಮಾದರಿಯ ಸಂಸ್ಥೆಗಳು ಶಿಕ್ಷಣಕ್ಕೆ ನವೀನ ವಿಧಾನಗಳನ್ನು ಪರಿಚಯಿಸುತ್ತಲೇ ಇರುತ್ತವೆ. ಇದರಿಂದ ಕಲಾ ಶಿಕ್ಷಣದ ಭವಿಷ್ಯವು ಉಜ್ವಲವಾಗಿರುತ್ತದೆ, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಸೃಜನಶೀಲತೆಯು ವಿಸ್ತರಿಸಲು ಅವಕಾಶವನ್ನು ಮತ್ತು ಅವರ ಸಾಮರ್ಥ್ಯಕ್ಕೆ ಅವಕಾಶವನ್ನು ಒದಗಿಸುವ ಅದ್ಭುತ ಜಗತ್ತು ಇದೆಂಬ ಭರವಸೆ ನೀಡುತ್ತದೆ.

ನಗರದಲ್ಲಿ ನಿತ್ಯ 60 ಲಕ್ಷ ಲೀಟರ್ ನೀರು ಮಾರಾಟ

ಸಂಸ್ಕರಿತ ನೀರಿಗೆ ಬೇಡಿಕೆ

● ಸ್ನೇಹ ರಮೇಶ್

ಬೆಂಗಳೂರು: ಕಾವೇರಿ ಹಾಗೂ ಕೊಳವೆ ಬಾವಿ ನೀರನ್ನು ಕಟ್ಟಡ ನಿರ್ಮಾಣ ಹಾಗೂ ಇತರೆ ಚಟುವಟಿಕೆಗಳಿಗೆ ಬಳಸದಂತೆ ಜಲಮಂಡಳಿ ನಿರ್ಬಂಧಿಸಿ 45 ದಿನಗಳು ಕಳೆದಿದ್ದು, ಸಂಸ್ಕರಿತ ನೀರಿನ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ.

ಜಲಮಂಡಳಿ ಈ ಮೊದಲು ಪ್ರತಿನಿತ್ಯ 60 ಸಾವಿರ ಲೀಟರ್ ಸಂಸ್ಕರಿತ ನೀರನ್ನು ಮಾರಾಟ ಮಾಡುತ್ತಿತ್ತು. ಇದೀಗ ಈ ಪ್ರಮಾಣ 60 ಲಕ್ಷ ಲೀಟರ್‌ಗೆ (6 ಎಂಎಲ್‌ಡಿ) ತಲುಪಿದೆ.

ಸಂಸ್ಕರಿತ ನೀರಿನ ಬಳಕೆಗೆ ಸೂಚನೆ ನೀಡಿದ್ದರಿಂದ, ಅದರಿಂದ ಉಳಿದ ನೀರನ್ನು ಕೊರತೆ ಇರುವ ಪ್ರದೇಶಗಳಿಗೆ ಸರಬರಾಜು ಮಾಡಲು ಸಾಧ್ಯವಾಯಿತು ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

‘ಸಂಸ್ಕರಿತ ನೀರನ್ನು ಕುಡಿಯುವುದಕ್ಕೆ ಹೊರತಾಗಿ ಬಳಸುವುದೇ ಮುಂದಿನ ಯೋಜನೆ. ಈ ಹಿಂದೆ ಇದರ ಬಗ್ಗೆ ಅರಿವು ಇರಲಿಲ್ಲ. ಇದೀಗ, ಎಲ್ಲೆಡೆ ಜಾಗೃತಿ ಮೂಡಿಸಿರುವುದರಿಂದ ಸಂಸ್ಥೆಗಳಿಂದಲೂ ಬೇಡಿಕೆ ಪ್ರಮಾಣ ಹೆಚ್ಚಾಗಿದೆ. ಇದರಿಂದ ಕಾವೇರಿ ಹಾಗೂ ಕೊಳವೆಬಾವಿ ನೀರಿನ ಮೇಲಿನ ಅವಲಂಬನೆ ಕಡಿಮೆಯಾಗಿದೆ’ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

‘ಪ್ರಸ್ತುತ ಕಟ್ಟಡ ನಿರ್ಮಾಣ ಕ್ಷೇತ್ರದಿಂದ ಸಂಸ್ಕರಿತ ನೀರಿಗೆ ಬೇಡಿಕೆ ಇದೆ. ಐಟಿ ಕಂಪನಿಗಳು ಹಾಗೂ ವಾಣಿಜ್ಯ ಸಂಸ್ಥೆಗಳೂ ಸಂಸ್ಕರಿತ ನೀರು ಬಳಸುವಂತೆ ಜಲಮಂಡಳಿ ಸೂಚಿಸುತ್ತಿದೆ. ಜಲಮಂಡಳಿ ಇದೀಗ 1,200 ಎಂಎಲ್‌ಡಿ ಸಂಸ್ಕರಿತ ನೀರನ್ನು ಉತ್ಪಾದಿಸುತ್ತಿದೆ. ಅಧಿಕ ನೀರು ಬಳಸುವ ಗ್ರಾಹಕರೂ ತಮ್ಮಲ್ಲೇ ಸಂಸ್ಕರಿಸುತ್ತಿರುವ ನೀರನ್ನು ಇದೀಗ ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಂತಹ ಗ್ರಾಹಕರಿಗೆ ನಾವು ಪೂರೈಸುತ್ತಿರುವ ನೀರಿನಲ್ಲಿ ಶೇ 20ರಷ್ಟು ಕಡಿತಗೊಳಿಸಿದ್ದೇವೆ. ಹೀಗಾಗಿ ಅವರಿಗೆ ಸಂಸ್ಕರಿಸಿದ ನೀರಿನ ಮೌಲ್ಯದ ಅರಿವಾಗಿದೆ’ ಎಂದು ಹಿರಿಯ ಅಧಿಕಾರಿಗಳು ತಿಳಿಸಿದರು.

ಜಲಮಂಡಳಿ ಈವರೆಗೂ ಸಂಸ್ಕರಿಸಿದ ನೀರನ್ನು ಟ್ಯಾಂಕರ್ ಮೂಲಕ ಪೂರೈಸುತ್ತಿದೆ. ಮುಂದಿನ ದಿನಗಳಲ್ಲಿ, ಕೈಗಾರಿಕೆಗಳು ಹಾಗೂ ಎಲ್ಲಿ ಹೆಚ್ಚಿನ ಪ್ರಮಾಣದ ನೀರಿನ ಬೇಡಿಕೆ ಇದೆಯೋ ಆ ಪ್ರದೇಶಗಳಿಗೆ ಪೈಪ್‌ಲೈನ್ ಮೂಲಕ ಸಂಸ್ಕರಿಸಿದ ನೀರನ್ನು ಪೂರೈಸಲು ಯೋಜಿಸಲಾಗಿದೆ. ಅಧಿಕ ಪ್ರಮಾಣದಲ್ಲಿ ನೀರು ಬಳಸುವವರೂ ಪೈಪ್‌ಲೈನ್ ಮೂಲಕ ಸಂಸ್ಕರಿಸಿದ ನೀರು ಪೂರೈಸಬೇಕೆಂದು ಬೇಡಿಕೆ ಇರಿಸಿದ್ದು, ಇದು ಮುಂದಿನ ದಿನಗಳಲ್ಲಿ ಹೆಚ್ಚಾಗಲಿದೆ ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.

ಜಲಮಂಡಳಿ ತನ್ನ ಎಸ್‌ಟಿಪಿಗಳಿಂದ ಸಂಸ್ಕರಿಸಿದ ನೀರನ್ನು ಪೂರೈಸುವ ಜೊತೆಗೆ, ಅಪಾರ್ಟ್‌ಮೆಂಟ್‌ಗಳಲ್ಲಿರುವ ಸಂಸ್ಕರಿಸಿದ ನೀರನ್ನು ಮಾರಾಟ ಮಾಡುವ ಸೌಲಭ್ಯವನ್ನೂ ಕಲ್ಪಿಸಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ಸಂಸ್ಕರಿಸಿದ ನೀರನ್ನು ಮಾರಾಟ ಮಾಡಲು ರಾಜ್ಯ ಸರ್ಕಾರದ ಇತ್ತೀಚೆಗೆ ಅನುಮತಿ ನೀಡಿತ್ತು.

ಮುಖ್ಯಾಂಶಗಳು

- ಸಂಸ್ಕರಿತ ನೀರಿಗೆ ಹೆಚ್ಚಿದ ಬೇಡಿಕೆ
- ಕಟ್ಟಡ ನಿರ್ಮಾಣ ಕ್ಷೇತ್ರದಿಂದ ಬೇಡಿಕೆ
- ಮುಂದೆ ಪೈಪ್‌ಲೈನ್ ಮೂಲಕ ಪೂರೈಕೆ
- ಕಾವೇರಿ ನೀರಿನ ಮೇಲೆ ಅವಲಂಬನೆ ಕಡಿಮೆ

ಕಟ್ಟಡ ನಿರ್ಮಾಣಕ್ಕೆ 10 ಎಂಎಲ್‌ಡಿ ಸಂಸ್ಕರಿತ ನೀರು ಲಭ್ಯ: ಜಲಮಂಡಳಿ

ಬೆಂಗಳೂರು: ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ 10 ಎಂಎಲ್‌ಡಿ ಸಂಸ್ಕರಿಸಿದ ನೀರು ಸರಬರಾಜು ಮಾಡಲು ಜಲಮಂಡಳಿ ಸಿದ್ಧವಿದೆ ಎಂದು ಅಧ್ಯಕ್ಷ ಡಾ. ವಿ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಕ್ರೆಡೈ ಹಾಗೂ ಬೆಂಗಳೂರು ಅಪಾರ್ಟ್‌ಮೆಂಟ್ ಅಸೋಸಿಯೇಷನ್ (ಬಿಎಎಫ್) ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಜಲಮಂಡಳಿ 10 ಎಂಎಲ್‌ಡಿ ಸಂಸ್ಕರಿಸಿದ ನೀರು ಸರಬರಾಜು ವ್ಯವಸ್ಥೆ ಹೊಂದಿದ್ದು, ಬಿಎಎಫ್ ತನ್ನಲ್ಲಿರುವ ಸಂಸ್ಕರಿಸಿದ ನೀರಿನ ಲಭ್ಯತೆ ಬಗ್ಗೆ ಮಾಹಿತಿ ನೀಡಬೇಕು. ಕಟ್ಟಡ ಕಾಮಗಾರಿಗಳಿಗೆ ಬೇಕಾಗಿರುವ ನೀರಿನ ಬೇಡಿಕೆಯನ್ನು ಕ್ರೆಡೈ ಸಲ್ಲಿಸಬೇಕು ಎಂದು ರಾಮ್‌ಪ್ರಸಾತ್ ಸೂಚಿಸಿದರು.

‘ಕಟ್ಟಡ ಕಾಮಗಾರಿಗಳಿಗೆ ಸಂಸ್ಕರಿಸಿದ ನೀರು ಪೂರೈಸುವ ಉದ್ದೇಶ ಬಹಳ ಉತ್ತಮವಾಗಿದೆ. ನಮಗೆ ನೀಡುತ್ತಿರುವ ನೀರಿನ ಬೆಲೆ ಬಹಳ ಕಡಿಮೆಯಿದೆ. ನಾವು ಗುಣಮಟ್ಟದ ನೀರಿಗೆ ಇನ್ನೂ ಹೆಚ್ಚಿನ ದರ ನೀಡಲು ಸಿದ್ಧರಿದ್ದೇವೆ. ಆದರೆ, ನೀರು ಸಾಗಣೆ ಹಾಗೂ ಸಂಗ್ರಹದ್ದೇ ಸಮಸ್ಯೆ. ಕೆಲವು ಸಂದರ್ಭದಲ್ಲಿ ನೀರಿನಲ್ಲಿ ಕ್ಲೋರಿನ್‌ನಂತಹ ರಾಸಾಯನಿಕಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದೆ. ಹೆಚ್ಚು ಬೇಡಿಕೆ ಇರುವ ಕಡೆಗಳಲ್ಲಿ ಪೈಪ್‌ಲೈನ್ ಮೂಲಕ ಸಂಸ್ಕರಿಸಿದ ನೀರು ಸರಬರಾಜು ಮಾಡಬೇಕು’ ಎಂದು ಕ್ರೆಡೈ ಬೆಂಗಳೂರಿನ ಅಧ್ಯಕ್ಷ ರಾಮ್ ಮೈಸೂರು ಮನವಿ ಮಾಡಿದರು.

‘ಕ್ರೆಡೈ ಹಾಗೂ ಬಿಎಎಫ್ ಮಧ್ಯೆ ಸಂಸ್ಕರಿಸಿದ ನೀರು ಸಾಗಿಸುವ ‘ಫೆಸಿಲಿಟೇಟರ್’ ಆಗಿ ಜಲಮಂಡಳಿ ಕಾರ್ಯನಿರ್ವಹಿಸಲಿದೆ. ನಮ್ಮಲ್ಲಿ ಲಭ್ಯವಿರುವ ಹೆಚ್ಚುವರಿ ನೀರು ಮಾರಾಟ ಮಾಡಲು ಅವಕಾಶ ನೀಡಿರುವುದು ಉತ್ತಮ ಬೆಳವಣಿಗೆ’ ಎಂದು ಬಿಎಎಫ್ ಅಧ್ಯಕ್ಷ ವಿಕ್ರಮ್ ರಾಯ್ ಹೇಳಿದರು.

ಕೆಂಗೇರಿಯಲ್ಲಿ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಗೇರಿ, ಯಲಹಂಕ ಸೇರಿದಂತೆ ವಿವಿಧೆಡೆ ಶುಕ್ರವಾರ ಸಂಜೆ ಸಾಧಾರಣ ಮಳೆಯಾಗಿದೆ.

ಕೆಂಗೇರಿಯ ಕೊಮ್ಮಘಟ್ಟ ವ್ಯಾಪ್ತಿಯಲ್ಲಿ ಹಾಗೂ ಯಲಹಂಕ ಸಮೀಪದ ಹುಣಸಮಾರನಹಳ್ಳಿ ಸುತ್ತ ಸಾಧಾರಣ ಮಳೆಯಾಗಿದೆ.

ದಾಬಸ್‌ಪೇಟೆ ವರದಿ: ಸೋಂಪುರ ಹೋಬಳಿಯಾದ್ಯಂತ ಶುಕ್ರವಾರ ಸಂಜೆ ಸಾಧಾರಣ ಮಳೆಯಾಗಿದೆ. ಸಂಜೆ 4.20ಕ್ಕೆ ಆರಂಭವಾದ ಮಳೆ 5 ಗಂಟೆವರೆಗೆ ಬಂದಿದೆ. ಮಳೆಗಿಂತ ಗಾಳಿ ಹೆಚ್ಚಾಗಿತ್ತು.

ಐದು ತಿಂಗಳಿನಿಂದ ಮಳೆ ಬಂದಿರಲಿಲ್ಲ. ಜನರು ಬಿಸಿಲ ಬೇಗೆಗೆ ಬಸವಳಿದಿದ್ದರು. ಗಿಡ–ಮರ ಬಾಡುತ್ತಿದ್ದವು. ಕೆರೆಗಳು ನೀರಿಲ್ಲದೆ ಬತ್ತಿದ್ದವು. ಈಗ ಬಂದಿರುವ ಮಳೆ ತುಸು ಸಮಾಧಾನ ತರಿಸಿದೆ ಎಂದು ರೈತ ರಾಜಣ್ಣ ತಿಳಿಸಿದರು.

ಅರಮನೆ ಮೈದಾನದಲ್ಲಿ ಸರ್ವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆ ವಿಸ್ತರಿಸಲು ಬಿಬಿಎಂಪಿ ಸಿಬ್ಬಂದಿ ಅರಮನೆ ಮೈದಾನದಲ್ಲಿನ 15 ಎಕರೆ 39 ಗುಂಟೆ ಭೂಮಿಯ ಸರ್ವೆ ನಡೆಸಿದರು.

ಸರಿಯಾದ ವಿಸ್ತೀರ್ಣ ವರದಿ (ಸಿಡಿಆರ್)ಯನ್ನು ಸಿದ್ಧಪಡಿಸಲು ಈ ಸರ್ವೆ ಕೈಗೊಳ್ಳಲಾಯಿತು. ಇದು ಎಷ್ಟು ಭೂಮಿಗೆ ಪರಿಹಾರ ನೀಡಬೇಕು ಎಂಬುದನ್ನು ನಿರ್ಧರಿಸಲು ಸಹಕಾರಿ ಆಗುತ್ತದೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ಅಧಿಕಾರಿಗಳು ಇತರ ಇಲಾಖೆಗಳ ಸಿಬ್ಬಂದಿಯೊಂದಿಗೆ ಸರ್ವೆ ಉಪಕರಣಗಳೊಂದಿಗೆ ಸಮೀಕ್ಷೆ ನಡೆಸಿದರು. ‘ಅರಮನೆ ಅಡ್ಡರಸ್ತೆ ಹಾಗೂ ಮೇಖ್ರಿ ವೃತ್ತದ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಈ ಹಿಂದೆ ಅರಮನೆ ಮೈದಾನವನ್ನು ಎರಡು ಬಾರಿ ಉಪಯೋಗಿಸಿಕೊಳ್ಳಲಾಗಿದೆ. ಇದೀಗ ನಾವು ಕಾಂಪೌಂಡ್‌ನಿಂದ ರಸ್ತೆವರೆಗಿರುವ ಖಾಲಿ ಭೂಮಿಯನ್ನು ನಾವು ಅಳತೆ ಮಾಡುತ್ತಿದ್ದೇವೆ’ ಎಂದು ಅಧಿಕಾರಿಗಳು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಗೊಂಡ ನಿವೇಶನಗಳ ಸ್ವಾಧೀನ ನೀಡುವ ಮುನ್ನ ಸಿಡಿಆರ್ ಮೂಲಕ ವರದಿಗಳನ್ನು ತಯಾರಿಸುತ್ತದೆ. ಅದರಂತೆ ಬಿಬಿಎಂಪಿ ಅರಮನೆ ಮೈದಾನದ ಭೂಮಿಯ ಸರ್ವೆ ನಡೆಸುತ್ತಿದೆ.

ಬಿಬಿಎಂಪಿ ಅಧಿಕಾರಿಗಳು ಇತರೆ ಇಲಾಖೆಗಳ ಸಿಬ್ಬಂದಿಯೊಂದಿಗೆ ಅರಮನೆ ಮೈದಾನದಲ್ಲಿ ಸರ್ವೆ ನಡೆಸಿದರು

ಸುಳ್ಳು ಸುದ್ದಿ ಹಬ್ಬಿಸಿದ ಆರೋಪ: ದೂರು

ಕುದೂರು (ರಾಮನಗರ): ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದಲ್ಲಿ ಶುಕ್ರವಾರ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರ ಚುನಾವಣಾ ಪ್ರಚಾರ ಸಂದರ್ಭದಲ್ಲಿ ‘ಪಾಕಿಸ್ತಾನ್ ಕೀ ಜೈ’ ಎಂದು ಘೋಷಣೆ ಕೂಗಲಾಗಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ ಆರೋಪದ ಮೇಲೆ ಐವರ ವಿರುದ್ಧ ಕುದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Textile Co-Operative Bank Ltd.,
Administrative Office : Devanga Market, 2nd Floor,
Sri Devara Dasimayya Road, (J.M. Road), Bengaluru-560 002.
ESTD.: 1963 Ph: 48521054; Email: textilecbl@gmail.com

NOTICE TO CUSTOMERS AND GENERAL PUBLIC

This is to inform you that the existing premises of our MAIN BRANCH, which is presently located at Devanga Market, 1st Floor, Sri Devara Dasimaiah Road (J.M. Road), Bengaluru – 560 002 will be shifted to below mentioned address **effective from Thursday the 2nd May 2024.**

No.47, Sri Devara Dasimaiah Road (J.M.Road), Bengaluru – 560 002.

We look forward to serving you at our new branch premises. In case of any queries or assistance, please feel free to contact our Branch Manager. You can also email / call us on mainbranch@tcbl.co.in/ Ph. No.: 9945112152.

By the order of Board of Directors
Chief Executive Officer (I/c)

ನಾಡಗೀತೆ ವಿವಾದ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲಿ 2 ನಿಮಿಷ 30 ಸೆಕೆಂಡ್‌ಗಳ ಕಾಲ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಕೋರಲಾದ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ರಾಜ್ಯ ಸರ್ಕಾರ 2023ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಕೋರಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ತೀರ್ಪು ಕಾಯ್ದಿರಿಸಿತು.

ಗೋವಾ ಪ್ರವಾಸಕ್ಕೆ ಹೋಗಿದ್ದ ವ್ಯಕ್ತಿ ನಾಪತ್ತೆ

ಪಣಜಿ (ಪಿಟಿಐ): ದೂಧ್‌ಸಾಗರ ಜಲಪಾತ ನೋಡಲು ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ 62 ವರ್ಷದ ವ್ಯಕ್ತಿ ಕಾಣೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಬ್ದುಲ್ ರಫೀಕ್ ಹಾಗೂ ಅವರ ಪತ್ನಿ, ಜೀಪ್ ಒಂದನ್ನು ಬಾಡಿಗೆಗೆ ಪಡೆದು ದಕ್ಷಿಣ ಗೋವಾದಲ್ಲಿ ಇರುವ ಜಲಪಾತ ನೋಡಲು ಹೋಗಿದ್ದರು. ಗುರುವಾರ ಮಧ್ಯಾಹ್ನದಿಂದ ಅಬ್ದುಲ್ ರಫೀಕ್ ಕಾಣೆಯಾಗಿದ್ದಾರೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

‘ಬಿಜೆಪಿ ಗೆದ್ದರೆ ಸಂಸದೀಯ ವ್ಯವಸ್ಥೆಗೆ ಧಕ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತವು ಸಂಸದೀಯ ವ್ಯವಸ್ಥೆಯನ್ನು ಹೊಂದಿದೆಯೇ ಹೊರತು ವ್ಯಕ್ತಿ ಕೇಂದ್ರಿತ ಅಧ್ಯಕ್ಷೀಯ ಮಾದರಿ ಅಲ್ಲ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ 400 ಸೀಟು ಲಭಿಸಿದರೆ ಸಂಸದೀಯ ವ್ಯವಸ್ಥೆಗೆ ಧಕ್ಕೆ ಬರಲಿದೆ’ ಎಂದು ಸಾಮಾಜಿಕ ಚಿಂತಕ ಸುಧೀಂದ್ರ ಕುಲಕರ್ಣಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಶುಕ್ರವಾರ ಆಯೋಜಿಸಿದ್ದ ‘ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮ ಹಾಗೂ ಪತ್ರಕರ್ತರು’ ವಿಶೇಷ ಉಪನ್ಯಾಸ ಮತ್ತು ಸಂವಾದದಲ್ಲಿ ಅವರು ಮಾತನಾಡಿದರು.

ಬಿಜೆಪಿ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಮಾಧ್ಯಮ ಸ್ವಾತಂತ್ರ್ಯಕ್ಕೆ ಮತ್ತು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ಬರಲಿದೆ ಎಂದರು.

ನಗರದಲ್ಲಿ ಶುಕ್ರವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಸಾಮಾಜಿಕ ಚಿಂತಕ ಸುಧೀಂದ್ರ ಕುಲಕರ್ಣಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ, ಪತ್ರಕರ್ತ ಅನಂತ ಚಿನಿವಾರ ಹಾಗೂ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್. ನರಸಿಂಹಮೂರ್ತಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಎಲ್ಲವೂ ಸರಿಯಾಗುತ್ತದೆ ಎಂಬ ಭ್ರಮೆ ಬೇಡ. ಕಾಂಗ್ರೆಸ್ ಅವನತಿಯತ್ತ ಸಾಗಲು ಅದರ ನಾಯಕತ್ವ ಜನಮನ್ನಣೆ ಗಳಿಸದಿರುವುದು ಒಂದು ಕಾರಣವಾದರೆ, ಸುಧಾರಣೆಗೆ ಒಡ್ಡಿಕೊಳ್ಳದಿರುವುದೂ ಸೇರಿದಂತೆ ಅನೇಕ ಕಾರಣವಿದೆ. ಆದರೆ, ಕಾಂಗ್ರೆಸ್ ಆಡಳಿತದ ಕಾಲದಲ್ಲಿ ಈ ರೀತಿಯ ವ್ಯಕ್ತಿ ಕೇಂದ್ರಿತ ರಾಜಕಾರಣ ಇರಲಿಲ್ಲ. ಪ್ರಶ್ನೆ ಮಾಡುವ ಸ್ವಾತಂತ್ರ್ಯ ಇತ್ತು ಎಂದು ವಿಶ್ಲೇಷಿಸಿದರು.

ಎಚ್‌ಡಿಕೆ ವಿರುದ್ಧದ ನೋಟಿಸ್‌ಗೆ ಹೈಕೋರ್ಟ್ ತಡೆ

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳಿಂದ ಹಳ್ಳಿಯ ತಾಯಂದಿರು ದಾರಿ ತಪ್ಪಿದ್ದಾರೆ’ ಎಂದು ಹೇಳಿದ್ದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರಿಗೆ ರಾಜ್ಯ ಮಹಿಳಾ ಆಯೋಗ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆ ನೀಡಿದೆ.

ಇದನ್ನು ಪ್ರಶ್ನಿಸಿ ಕುಮಾರಸ್ವಾಮಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಎ.ವಿ.ನಿಶಾಂತ್, ‘ಆರೋಪಕ್ಕೆ ಸಂಬಂಧಿಸಿದಂತೆ ಆಯೋಗವು ಕುಮಾರಸ್ವಾಮಿ ಅವರಿಗೆ ನೋಟಿಸ್ ನೀಡಿ ಖುದ್ದು ಹಾಜರಾಗಲು ಸೂಚಿಸಿದೆ. ಆದರೆ, ಈ ನೋಟಿಸ್ ಪೂರ್ವಗ್ರಹ ಪೀಡಿತ ಭಾವನೆಯಿಂದ ಕೂಡಿದ್ದು, ಇದನ್ನು ರದ್ದುಗೊಳಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ನೋಟಿಸ್‌ಗೆ ತಡೆ ನೀಡಿ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

‘ಮಹಿಳಾ ಆಯೋಗದ ಅಧ್ಯಕ್ಷರು ಜಾರಿ ಮಾಡಿರುವ ನೋಟಿಸ್‌ಗೆ ಅರ್ಜಿ ಇತ್ಯರ್ಥವಾಗುವವರೆಗೂ ತಡೆ ವಿಧಿಸಲಾಗಿದೆ’ ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

Fashion & Lifestyle

Exhibition cum SALE

2 DAYS only

April 20th & 21st

Saturday and Sunday
Timings -10 AM to 10 PM

Contact : 9845836702

Prices Starting from Rs. 99/- only

All types of New Branded 100% Fresh Stock will be sold on upto 90% Off on MRP

Buy Branded Garments, Shoes & Ladies Bags here at much lower than Online Prices

HANDLOOM SPECIAL COUNTER

Bed Sheets, Pillows, Home Decor, Bags, Purse & more than 100 other varieties available at Unbelievable Prices!!...

Half Sleeve T-Shirts, Shorts, Gents undergarments, Panty, Legging, Cotton Tops MRP upto ₹300/- to ₹ 800/- NOW AT Rs. 100/- Only

MENS WEAR

Shirts, T-shirts, Cotton Pants, Jeans, Hawaiian Shirt, Formal Shoes, Flip Flops, Shorts, Sport Shoes, Vest, Belt, Socks, Waistcoat, Shorts.

LADIES WEAR

Kurtis, Purse, Undergarments, Scarf, T-shirts, Shirts (Casual/Formal), Pants, Track Pant, Night Suit Set, Hand Bag, Wallet, Jeans, Western Tops, Backpack, Ethnic wear, Ladies shorts, Denim shorts.

KIDS WEAR

Shirt, T-shirt, Shoes, Footwear, Tops, Boy jeans, Girls jeans, Girls tops, Boys shorts, Boys denim shorts, Tops & T-Shirts, Dungarees, Rompers & Jumpsuits, Dresses, Trousers & Jeans, Culottes & Leggings.

VENUE :
Sheraton Grand Bangalore Hotel at Brigade Gateway
HALL NAME : CERES
26/1, Dr. Rajkumar Road Malleswaram, Rajajinagar, Bengaluru-560 055

ನಿಷೇಧ ನಾಳೆ

ಬೆಂಗಳೂರು: ಮಹಾವೀರ ಜಯಂತಿ ಪ್ರಯುಕ್ತ ಏ. 21ರಂದು ಬಿಬಿಎಂಪಿ ವ್ಯಾಪ್ತಿಯ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪ

‘ರಾಷ್ಟ್ರಪತಿ ಆಡಳಿತ ಹೇರಲು ಸಂಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಹುಯಿಲೆಬ್ಬಿಸಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಬಿಜೆಪಿ ಸಂಚು ನಡೆಸುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

‘ಹುಬ್ಬಳ್ಳಿಯ ಯುವತಿ ಕೊಲೆ ಪ್ರಕರಣ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದಕ್ಕೆ ಸಾಕ್ಷಿ’ ಎಂಬ ಬಿಜೆಪಿ ನಾಯಕರ ಆರೋಪದ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ರಾಷ್ಟ್ರಪತಿ ಆಡಳಿತ ಹೇರಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಅವರ ಪಕ್ಷದ ನಾಯಕರು ಈ ರೀತಿಯ ಹುನ್ನಾರ, ನಾಟಕ ಮಾಡುತ್ತಿದ್ದಾರೆ. ಆ ರೀತಿ ಆಗಲು ನಾವು ಬಿಡುವುದಿಲ್ಲ. ತಪ್ಪು ಮಾಡಿರುವವರ ವಿರುದ್ಧ ನಿಷ್ಪಕ್ಷಪಾತವಾಗಿ ಕಾನೂನು ಕ್ರಮ ಜರುಗಿಸುತ್ತೇವೆ’ ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿ ಇಲ್ಲ ಎಂಬ ಬಿಜೆಪಿಯವರ ಆರೋಪದಲ್ಲಿ ಹುರುಳಿಲ್ಲ. ಬಿಜೆಪಿಯವರು ಗುಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದಲ್ಲಿರುವಷ್ಟು ಉತ್ತಮವಾದ ಕಾನೂನು ಸುವ್ಯವಸ್ಥೆ ಬೇರೆ ಯಾವ ರಾಜ್ಯಗಳಲ್ಲೂ ಇಲ್ಲ ಎಂದು ಹೇಳಿದರು.

'ಕರ್ನಾಟಕ ಬಿಹಾರ ಆಗುತ್ತದೆ' ಎನ್ನುವ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿಕೆ ಬಗ್ಗೆ ಕೇಳಿದಾಗ, ‘ಅವರ ಕಾಲದಲ್ಲಿಯೂ ಅನೇಕ ಕೃತ್ಯಗಳು ನಡೆದಿದ್ದವು. ಎಲ್ಲರ ಕಾಲದಲ್ಲೂ ವೈಯಕ್ತಿಕ ಕಾರಣಗಳಿಗೆ ಇವು ನಡೆಯುತ್ತಿರುತ್ತವೆ. ಆದರೆ ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ. ಈ ವಿಚಾರವಾಗಿ ಹಸ್ತಕ್ಷೇಪ ಮಾಡುವುದಿಲ್ಲ. ಪೊಲೀಸರು ತಮ್ಮ ಕೆಲಸ ಮಾಡಲಿದ್ದಾರೆ’ ಎಂದು ಉತ್ತರಿಸಿದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪೊಲೀಸರು ಲಾಠಿ ಬೀಸಿ ಎಬಿವಿಪಿ ಕಾರ್ಯಕರ್ತರನ್ನು ಚದುರಿಸಿದರು

ವಿದ್ಯಾರ್ಥಿನಿ ಕೊಲೆ: ಪ್ರತಿಭಟನೆ

ಬೆಂಗಳೂರು: ಹುಬ್ಬಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿ ನೇಹಾ ಕೊಲೆ ಪ್ರಕರಣ ಖಂಡಿಸಿ, ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶುಕ್ರವಾರ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಆರೋಪಿಯನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ಬ್ಯಾಂಕ್ ವೃತ್ತದಲ್ಲೇ ರಸ್ತೆತಡೆ ನಡೆಸಲು ಮುಂದಾದರು. ಇದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ಮತ್ತೆ ಮುಂದಕ್ಕೆ ಸಾಗಿ ಧರಣಿಗೆ ಕುಳಿತರು. ಆಗ ಪೊಲೀಸರು ಲಾಠಿ ಬೀಸಿ ಗುಂಪು ಚದುರಿಸಿದರು. ಉಳಿದವರನ್ನು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

ರಾಷ್ಟ್ರೀಯ ವಿಚಾರ ಸಂಕಿರಣ ಇಂದು

ಬೆಂಗಳೂರು: ‘ಏರೋನಾಟಿಕ್ಸ್ ಸೊಸೈಟಿ ಆಫ್ ಇಂಡಿಯಾ ಸಹಯೋಗದಲ್ಲಿ ಇದೇ 20 ರಂದು (ಶನಿವಾರ) ‘ಏರೋ ಗ್ಯಾಸ್ ಟರ್ಬೈನ್ ಎಂಜಿನ್ ಬಳಕೆ ಹಾಗೂ ಭಾರತೀಯರ ಪ್ರಯತ್ನಗಳು’ ಕುರಿತು ರಾಷ್ಟ್ರೀಯ ವಿಚಾರಸಂಕಿರಣ ನಡೆಯಲಿದೆ’ ಎಂದು ಸೊಸೈಟಿ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಏರೊಸ್ಪೇಸ್ ಪ್ರೊಪಲ್ಶನ್ (ಎಸ್‌ಎಎಪಿ) ಮಾಜಿ ನಿರ್ದೇಶಕ ಟಿ. ಮೋಹನ್ ರಾವ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಚ್‌ಎಎಲ್ ಹಳೆಯ ಮ್ಯಾನೇಜ್‌ಮೆಂಟ್ ಅಕಾಡೆಮಿ ಸಭಾಂಗಣದಲ್ಲಿ ವಿಚಾರಸಂಕಿರಣ ನಡೆಯಲಿದೆ’ ಎಂದು ತಿಳಿಸಿದರು.

15 ಗಂಟೆಗೂ ಹೆಚ್ಚು ಸಮಯ ವಿಮಾನ ವಿಳಂಬ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈಗೆ ತೆರಳಬೇಕಿದ್ದ ವಿಮಾನ 15 ಗಂಟೆ ವಿಳಂಬವಾಗಿದೆ. ಅಲ್ಲಿ ಸುರಿದ ಮಳೆಯಿಂದಾಗಿ ವಿಮಾನ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ.

ಗುರುವಾರ ಬೆಳಿಗ್ಗೆ 10.30ಕ್ಕೆ ದುಬೈಗೆ ತೆರಳಬೇಕಿದ್ದ ಎಮಿರೆಟ್ಸ್ ಏರ್‌ಲೈನ್ಸ್ ವಿಮಾನ 15 ಗಂಟೆ ವಿಳಂಬವಾಗಿದ್ದು ವಿಮಾನಯಾನ ಸಂಸ್ಥೆ ಸರಿಯಾಗಿ ಮಾಹಿತಿ ನೀಡಿಲ್ಲ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

300ಕ್ಕೂ ಅಧಿಕ ಪ್ರಯಾಣಿಕರು ಟರ್ಮಿನಲ್ 2ರಲ್ಲಿ ಕಾಯುತ್ತಿದ್ದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಘಟನೆ ವಿವರಿಸಿ ಪೋಸ್ಟ್ ಮಾಡಿದ ನಟಿ

ಹರ್ಷಿಕಾ, ಭುವನ್ ಮೇಲೆ ಹಲ್ಲೆಗೆ ಯತ್ನ

ಪ್ರಜಾವಾಣಿ ವಾರ್ತೆ


ಹರ್ಷಿಕಾ

ಭುವನ್

ಬೆಂಗಳೂರು: ಇಲ್ಲಿನ ಫ್ರೇಜರ್‌ಟೌನ್‌ನಲ್ಲಿ ಕಾರು ಪಾರ್ಕಿಂಗ್ ವಿಚಾರಕ್ಕೆ ನಟಿ ಹರ್ಷಿಕಾ ಪೂಣಚ್ಚ ಹಾಗೂ ನಟ ಭುವನ್ ಪೊನ್ನಣ್ಣ ದಂಪತಿ ಮೇಲೆ ಗುಂಪೊಂದು ಹಲ್ಲೆ ನಡೆಸಲು ಮುಂದಾಗಿದ್ದು, ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಘಟನೆ ಕುರಿತು ಹರ್ಷಿಕಾ ಅವರು ಸಾಮಾಜಿಕ ಜಾಲತಾಣದಲ್ಲಿ ಬರಹ ಪ್ರಕಟಿಸಿದ್ದು ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

'ಪೊಲೀಸ್ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಘಟನೆ ಕುರಿತು ಪೋಸ್ಟ್ ಮಾಡುತ್ತಿದ್ದೇನೆ. ಭವಿಷ್ಯದಲ್ಲಿ ಯಾವುದೇ ಮಹಿಳೆ ಅಥವಾ ಕುಟುಂಬಕ್ಕೆ ನಗರದಲ್ಲಿ ಈ ರೀತಿಯ ಕೆಟ್ಟ ಅನುಭವ ಆಗಬಾರದು' ಎಂದು ಅವರು ಹೇಳಿದ್ದಾರೆ.

ಹರ್ಷಿಕಾ ಪೋಸ್ಟ್‌ನಲ್ಲಿ ಏನಿದೆ?: 'ಊಟಕ್ಕೆಂದು ಫ್ರೇಜರ್‌ಟೌನ್ ಸಮೀಪದ ಹೋಟೆಲ್‌ಗೆ ಹೋಗಿದ್ದ ವೇಳೆ, ನಮ್ಮ ಮೇಲೆ ಗುಂಪೊಂದು ಹಲ್ಲೆಗೆ ಪ್ರಯತ್ನಿಸಿತು' ಎಂದು ಬರೆದುಕೊಂಡಿದ್ದಾರೆ.

'ಬೆಂಗಳೂರಿನಲ್ಲಿ ಸ್ಥಳೀಯರಾದ ನಾವು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಮೂಡಿದೆ. ನನಗಾದ ಭಯಾನಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ. ಪೊಲೀಸರು ಹಾಗೂ ಕುಟುಂಬಸ್ಥರ ಜೊತೆಗೆ ಮಾತನಾಡಿದ ನಂತರ ಆ ವಿಷಯವನ್ನು ಅಲ್ಲಿಗೆ ಬಿಡಲು ನಿರ್ಧರಿಸಿದ್ದೆ. ನನ್ನ ಅನುಭವದಿಂದ ಬೇರೆಯವರಿಗೆ ಸಹಾಯವಾಗಬಹುದೆಂದು ಪೋಸ್ಟ್ ಮಾಡುತ್ತಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

'ಮಸೀದಿ ರಸ್ತೆಯಲ್ಲಿರುವ ರೆಸ್ಟೋರೆಂಟ್‌ವೊಂದಕ್ಕೆ ಸಂಜೆ ಊಟಕ್ಕೆ ತೆರಳಿದ್ದೆವು. ಪಾರ್ಕಿಂಗ್ ಪ್ರದೇಶದಿಂದ ಕಾರು ತೆಗೆಯುವ ಸಂದರ್ಭದಲ್ಲಿ ಇಬ್ಬರು ಗಲಾಟೆ ನಡೆಸಿದರು. ಕಾರನ್ನು ಮುಂದಕ್ಕೆ ತೆಗೆದುಕೊಳ್ಳುವಾಗ ಅಡ್ಡ ಬಂದು ನಿಂದಿಸಿದರು' ಎಂದು ಘಟನೆ ವಿವರಿಸಿದ್ದಾರೆ.

'ಭುವನ್ ಮುಖಕ್ಕೆ ಹೊಡೆಯಲು ಮುಂದಾದರು. ಆದರೂ ನಾವು ತಾಳ್ಮೆ ವಹಿಸಿದೆವು. ಆಗ ಇಬ್ಬರು ಚಿನ್ನದ ಸರ ಕಸಿದುಕೊಳ್ಳಲು ಪ್ರಯತ್ನಿಸಿದರು. ನಾವು ಕನ್ನಡದಲ್ಲಿ ಮಾತನಾಡಿದ್ದು ಅವರ ಆಕ್ರೋಶಕ್ಕೆ ಕಾರಣವಾಗಿತ್ತು. ನಿಮ್ಮ ಕನ್ನಡ ಸ್ಟೈಲ್ ನೀವೇ ಇಟ್ಟುಕೊಳ್ಳಿ ಎಂದು ಬೆದರಿಕೆ ಹಾಕಿದರು' ಎಂದು ಹೇಳಿದ್ದಾರೆ.

'ತಕ್ಷಣವೇ ಮುಂದಕ್ಕೆ ಹೋಗಿ ಸ್ಥಳದಲ್ಲಿದ್ದ ಪೊಲೀಸರಿಗೆ ಮಾಹಿತಿ ನೀಡಿದೆವು. ಅಲ್ಲಿದ್ದ ಪೊಲೀಸ್ ಅಧಿಕಾರಿಯೊಬ್ಬರು ನೆರವಿಗೆ ಬರಲಿಲ್ಲ. ಈ ಘಟನೆಯಿಂದ ನಾನು ಸಂಪೂರ್ಣ ಮಾನಸಿಕ ಆಘಾತಕ್ಕೆ ಒಳಗಾಗಿದ್ದೇನೆ' ಎಂದು ಹೇಳಿದ್ದಾರೆ.

'ಶಾಂತಿಯುತವಾಗಿ ಜೀವನ ನಡೆಸುತ್ತಿರುವ ಜನರೊಂದಿಗೆ ಇಂತಹ ಗಲಾಟೆ ಸೃಷ್ಟಿಸುವ ಹಕ್ಕು ಯಾರಿಗೂ ಇಲ್ಲ. ನಾವು ಪಾಕಿಸ್ತಾನ ಅಥವಾ ಅಫ್ಗಾನಿಸ್ತಾನದಲ್ಲಿ ಇದ್ದೇವೆಯೇ? ನಮ್ಮ ಊರಿನಲ್ಲಿ ಕನ್ನಡ ಮಾತನಾಡುವುದೇ ತಪ್ಪಾ' ಎಂದು ಹರ್ಷಿಕಾ ಪ್ರಶ್ನಿಸಿದ್ದಾರೆ.

> ಘಟನೆ ಸಂಬಂಧ ಯಾರೂ ದೂರು ನೀಡಿಲ್ಲ. ದೂರು ಕೊಟ್ಟರೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಹರ್ಷಿಕಾ ಪೂಣಚ್ಚ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಮಾಹಿತಿ ಆಧರಿಸಿ ಪೊಲೀಸರು ಅವರನ್ನು ಸಂಪರ್ಕಿಸಿದ್ದರು. ದೂರು ನೀಡಲು ಕೇಳಲಾಯಿತು. ಆದರೆ, ಅವರು ಠಾಣೆಗೆ ಬಂದಿಲ್ಲ
>
> **ಕುಲದೀಪ್ ಕುಮಾರ್ ಜೈನ್,** ಡಿಸಿಪಿ, ಪೂರ್ವ ವಿಭಾಗ

ರೈಸ್ ಪುಲ್ಲಿಂಗ್ ದಂಧೆ ₹ 69.79 ಲಕ್ಷ ವಶ

ಬೆಂಗಳೂರು: ರೈಸ್ ಪುಲ್ಲಿಂಗ್ ಹೆಸರಿನಲ್ಲಿ ತಾಮ್ರದ ನಕಲಿ ಪಾತ್ರೆ ತೋರಿಸಿ ಜನರಿಗೆ ವಂಚನೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಂಜಾಬ್‌ನ ಸನ್ನಿಗಿಲ್, ತಮಿಳುನಾಡಿನ ಅಬ್ದುಲ್ ಮತ್ತು ನಗರದ ಶಿವಶಂಕರ್ ಬಂಧಿತ ಆರೋಪಿಗಳು 'ಬಂಧಿತರಿಂದ ₹69.79 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಜಯನಗರದ 6ನೇ ಬ್ಲಾಕ್ ಯಡಿಯೂರು ಕೆರೆ ಬಳಿ ರೈಸ್ ಪುಲ್ಲಿಂಗ್ ಪಾತ್ರೆಯ ಮಾರಾಟದ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ರೈಸ್ ಪುಲ್ಲಿಂಗ್ ಅನ್ನು ದಂಧೆಯಾಗಿ ಮಾಡಿಕೊಂಡಿದ್ದರು. ತಾಮ್ರದ ಪಾತ್ರೆಗೆ ಭಾರಿ ಬೆಲೆಯಿದೆ, ಮನೆಯಲ್ಲಿ ಇಟ್ಟುಕೊಂಡರೆ ಅದೃಷ್ಟ ಬರಲಿದೆ ಎಂದೂ ಗ್ರಾಹಕರಿಗೆ ನಂಬಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳನ್ನು ಹೆಚ್ಚಿನ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿ 5 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದು ತನಿಖೆ ಮುಂದುವರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪೊಲೀಸರ ಮೇಲೆ ನೈಜೀರಿಯಾ ಪ್ರಜೆಗಳ ದಾಳಿ

ಪ್ರಜಾವಾಣಿ ವಾರ್ತೆ

ಗಾಯಗೊಂಡಿರುವ ಪೊಲೀಸರು

ಪೊಲೀಸ್ ಜೀಪಿನ ಗಾಜು ಪುಡಿಯಾಗಿದೆ

ಬೆಂಗಳೂರು: ಬಂಧನ ಕಾರ್ಯಾಚರಣೆಗೆ ತೆರಳಿದ್ದ ಸಿಸಿಬಿ ಪೊಲೀಸರು ಹಾಗೂ ಹೊಯ್ಸಳ ಸಿಬ್ಬಂದಿ ಮೇಲೆ ನೈಜೀರಿಯಾ ಪ್ರಜೆಗಳು ಮಾರಕಾಸ್ತ್ರ, ದೊಣ್ಣೆ ಹಾಗೂ ಕಲ್ಲಿನಿಂದ ದಾಳಿ ನಡೆಸಿ ಕೊಲೆಗೆ ಯತ್ನಿಸಿದ್ದು, ನಾಲ್ವರು ಪೊಲೀಸರು ಗಾಯಗೊಂಡಿದ್ದಾರೆ.

ಮಾವಳ್ಳಿಪುರದ ಬಾಡಿಗೆ ಮನೆಯಲ್ಲಿ ನೆಲೆಸಿದ್ದ ನೈಜೀರಿಯಾ ಪ್ರಜೆಗಳು, ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿದ್ದಾರೆ ಎಂಬ ಆರೋಪದ ಮೇರೆಗೆ ಅವರ ಬಂಧನಕ್ಕೆ ಸಿಸಿಬಿ ತಂಡ ತೆರಳಿತ್ತು. ಆಗ ಪೊಲೀಸರ ಮೇಲೆ ದಾಳಿ ನಡೆದಿದ್ದು ಸಿಸಿಬಿ ಇನ್‌ಸ್ಪೆಕ್ಟರ್ ಸುಬ್ರಹ್ಮಣ್ಯ ಸ್ವಾಮಿ, ರಾಜೀವ್ ಸೇರಿದಂತೆ ನಾಲ್ವರು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ.

ಗಾಯಗೊಂಡವರು ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲ್ಲೆ ನಡೆಸಿರುವ ದೃಶ್ಯವು ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಪೊಲೀಸ್ ವಾಹನದ ಮೇಲೂ ಕಲ್ಲು ತೂರಾಟ ಮಾಡಲಾಗಿದ್ದು ಗಾಜು ಪುಡಿಯಾಗಿದೆ.

'ಬಾಗಲಗುಂಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಒಬ್ಬ ವಿದೇಶಿ ಪ್ರಜೆಯನ್ನು ಬಂಧಿಸಿ, 4 ಕೆ.ಜಿ ತೂಕದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಆತ ನೀಡಿದ ಮಾಹಿತಿ ಮೇರೆಗೆ ಪ್ರಕೃತಿ ಲೇಔಟ್‌ನ ಮನೆಯಲ್ಲಿ ನೆಲೆಸಿದ್ದವರ ಬಂಧನಕ್ಕೆ ತೆರಳಿದ್ದೆವು. ಸಿಂಗನಾಯನಹಳ್ಳಿ ಬಳಿಯ ಭಗಿನಿ ರೆಸ್ಟೋರೆಂಟ್‌ನಲ್ಲಿ ತಂಗಿದ್ದ ಆರೋಪಿಯನ್ನು ಮಾವಳ್ಳಿಪುರದ ಬಳಿ ವಶಕ್ಕೆ ಪಡೆಯಲು ಮುಂದಾದ ವೇಳೆ ಆತ ವಿರೋಧ ವ್ಯಕ್ತಪಡಿಸಿದ. ಸಿಸಿಬಿ ಅಧಿಕಾರಿಗಳೆಂದು ಪರಿಚಯಿಸಿಕೊಂಡೆವು. ತಕ್ಷಣವೇ ಆತ ಕರೆ ಮಾಡಿ ಉಳಿದವರನ್ನು ಸ್ಥಳಕ್ಕೆ ಕರೆಸಿಕೊಂಡ. ಬೈಕ್‌ನಲ್ಲಿ ಬೇರೆ ಬೇರೆ ಕಡೆಯಿಂದ 10ಕ್ಕೂ ಹೆಚ್ಚು ಮಂದಿ ಬಂದು, ದಾಳಿ ನಡೆಸಿದರು' ಎಂದು ಪೊಲೀಸರು ತಿಳಿಸಿದರು.

'ಸಿಸಿಬಿ ಪೊಲೀಸರು ಎಂದು ತಿಳಿಸಿದರೂ ಏಕಾಏಕಿ ಹಲ್ಲೆ ನಡೆಸಿದ್ದಾರೆ. ರಾತ್ರಿ 11.30ರ ಸುಮಾರಿಗೆ ಸಿಸಿಬಿ ಪೊಲೀಸರು ಕಂಟ್ರೋಲ್ ರೂಂಗೆ ಕಾಲ್ ಮಾಡಿ ವಿಚಾರ ಮುಟ್ಟಿಸಿದ್ದರು. ವಿಚಾರ ತಿಳಿದು ರಾಜಾನುಕುಂಟೆ ಪೊಲೀಸರು ಸ್ಥಳಕ್ಕೆ ತೆರಳಿದ್ದರು. ಅವರ ಮೇಲೆಯೂ ದಾಳಿ ನಡೆಸಿದ್ದಾರೆ' ಎಂದು ಬೆಂಗಳೂರು ಗ್ರಾಮಾಂತರದ ಎಸ್.ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

22 ಬ್ಯಾಂಕ್‌ಗಳಿಗೆ ₹10 ಕೋಟಿ ವಂಚನೆ

ಸಾಲ ಪಡೆದು ಮನೆ– ನಿವೇಶನ ಖರೀದಿ: ಆರೋಪಿಗಳು ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಒಂದೇ ಸ್ವತ್ತಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ 22 ವಿವಿಧ ಬ್ಯಾಂಕ್‌ಗಳಿಗೆ ಸಲ್ಲಿಸಿ ₹10 ಕೋಟಿಗೂ ಅಧಿಕ ಸಾಲ ಪಡೆದು ವಂಚಿಸಿದ್ದ ಒಂದೇ ಕುಟುಂಬದ ಐವರು ಸೇರಿದಂತೆ ಆರು ಮಂದಿಯನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

ಬಾಣಸಿಗರಾಗಿ ಕೆಲಸ ಮಾಡುತ್ತಿದ್ದ ನಾಗೇಶ್ ಭಾರದ್ವಾಜ್, ಆತನ ಪತ್ನಿ ಸುಮಾ, ಇವರ ಸಂಬಂಧಿ ಶೋಭಾ, ಈಕೆಯ ಪತಿ ಶೇಷಗಿರಿ, ಸತೀಶ್ ಹಾಗೂ ಸುಮಾಳ ಸ್ನೇಹಿತೆ ವೇದಾ ಬಂಧಿತರು.

'ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗೆ 10 ದಿನಗಳ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಸಾಲ ಪಡೆದು ಹಣ ಹೂಡಿಕೆ ಮಾಡಿರುವ ಸ್ಥಳಗಳ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಬೇಗೂರು ಗ್ರಾಮದ ಜಾಗದಲ್ಲಿ ಕಟ್ಟಡವಿರುವುದಾಗಿ ನಾಗೇಶ್ ಹಾಗೂ ಸುಮಾ ದಂಪತಿ ನಕಲಿ ದಾಖಲೆ ಸೃಷ್ಟಿಸಿದ್ದರು. ನಕಲಿ ದಾಖಲೆಗಳನ್ನೇ ಜಯನಗರ 3ನೇ ಬ್ಲಾಕ್‌ನಲ್ಲಿರುವ ಕೋ-ಆಪರೇಟಿವ್ ಬ್ಯಾಂಕ್‌ಗೆ ಅಡಮಾನವಿಟ್ಟು ಬ್ಯಾಂಕ್‌ನಿಂದ ಕಂತುಸಾಲ ಹಾಗೂ ಯಂತ್ರೋಪಕರಣ ಸಾಲವೆಂದು ₹1.30 ಕೋಟಿ ಪಡೆದುಕೊಂಡಿದ್ದರು. ನಂತರ ಸಾಲವನ್ನು ಮರುಪಾವತಿಸದೇ ವಂಚನೆ ಮಾಡಿದ್ದರು. ನಂತರ ಬ್ಯಾಂಕ್ ವ್ಯವಸ್ಥಾಪಕರು ದೂರು ನೀಡಿದ್ದರು. ಆ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು. 'ಪ್ರಕರಣ ದಾಖಲಾದ ಮೇಲೆ ತನಿಖೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ಅಡುಗೆ ಭಟ್ಟ ನಾಗೇಶ್ ಭಾರದ್ವಾಜ್, ಆತನ ಪತ್ನಿ ಸುಮಾಳನ್ನು ಮೊದಲು ಬಂಧಿಸಲಾಯಿತು. ವಿಚಾರಣೆ ವೇಳೆ ನಕಲಿ ದಾಖಲೆ ಸೃಷ್ಟಿಸಿ ವಿವಿಧ ಬ್ಯಾಂಕ್‌ಗಳಲ್ಲಿ ₹10 ಕೋಟಿ ಸಾಲ ಪಡೆದಿರುವುದು ಗೊತ್ತಾಗಿದೆ. ಈ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಉಳಿದವರನ್ನೂ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಆರೋಪಿಗಳು ಒಂದೇ ಸ್ವತ್ತಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಲವು ಬ್ಯಾಂಕ್‌ಗಳಿಗೆ ಸಲ್ಲಿಸಿದ್ದರು. ಇವರ ಕೃತ್ಯಕ್ಕೆ ನೋಂದಾಣಾಧಿಕಾರಿಗಳ ಕಚೇರಿ ಸಿಬ್ಬಂದಿ ಹಾಗೂ ಬ್ಯಾಂಕ್ ಅಧಿಕಾರಿಗಳೂ ನೆರವು ನೀಡಿದ್ದ ಮಾಹಿತಿ ಸಿಕ್ಕಿದೆ. ಅವರನ್ನೂ ಶೀಘ್ರದಲ್ಲೇ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಪೊಲೀಸರು ಹೇಳಿದರು.

'ಆರೋಪಿಗಳ ವಂಚನೆಗೆ ಸಂಬಂಧಿಸಿದಂತೆ 6 ಬ್ಯಾಂಕ್‌ಗಳಿಂದ ಮಾತ್ರ ದೂರು ದಾಖಲಾಗಿದೆ. ಉಳಿದ ಬ್ಯಾಂಕ್‌ಗಳಿಂದ ಮಾಹಿತಿ ಪಡೆಯಲಾಗುತ್ತಿದೆ. ಆರೋಪಿಗಳು ವಂಚನೆ ನಡೆಸಿರುವ ಹಣದಲ್ಲಿ ನಿವೇಶನ ಹಾಗೂ ಮನೆ ಖರೀದಿಸಿದ್ದಾರೆ. ಉಳಿದ ಹಣವನ್ನು ಎಲ್ಲಿ ಹೂಡಿಕೆ ಮಾಡಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು 2014ರಿಂದಲೂ ವಿವಿಧ ಬ್ಯಾಂಕ್‌ಗಳಲ್ಲಿ ಕಂತು ಸಾಲ, ಯಂತ್ರೋಪಕರಣ ಹೆಸರಿನಲ್ಲಿ ಸಾಲ ಪಡೆದುಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೊರಿಯರ್ ಬಾಯ್ ಸೇರಿ ಇಬ್ಬರ ಕೊಲೆ

ಬೆಂಗಳೂರು: ನಗರದಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕೊರಿಯರ್ ಬಾಯ್ ಸೇರಿದಂತೆ ಇಬ್ಬರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.

ಹಲಸೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಮ್ಮಲೂರು ಸಮೀಪದ ಬಿಡಿಎ ಉದ್ಯಾನದಲ್ಲಿ ಸತೀಶ್‌ಕುಮಾರ್ (32) ಎಂಬುವರನ್ನು ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿಯಾಗಿದ್ದಾರೆ.

'ಶಿವಾಜಿನಗರದ ಸತೀಶ್‌ಕುಮಾರ್, ಕೊರಿಯರ್ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ರಾತ್ರಿ ಅವರ ತಲೆಯ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿಹಾಕಿ ಕೊಲೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಉದ್ಯಾನದಲ್ಲಿ ರಾತ್ರಿ ಯುವಕರು ಪಾರ್ಟಿ ನಡೆಸುತ್ತಿದ್ದರು. ಆಗ ನಡೆದ ಗಲಾಟೆಯಲ್ಲಿ ಸತೀಶ್ ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಮೂವರನ್ನು ವಶಕ್ಕೆ ಪಡೆದುಕೊಳ್ಳಲಾಗಿದ್ದು ವಿಚಾರಣೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ನಾಲ್ವರು ಆರೋಪಿಗಳ ಬಂಧನ: ಹೆಣ್ಣೂರಿನಲ್ಲಿ ಸ್ನೇಹಿತರೇ ಯುವಕನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ.

ಹೆಣ್ಣೂರಿನ ಕೀರ್ತಿ ಅಲಿಯಾಸ್ ಕಿರಿಕ್ ಕೀರ್ತಿ (28) ಕೊಲೆಯಾದ ಯುವಕ. ಕೃತ್ಯ ನಡೆಸಿದ ಆರೋಪದ ಮೇರೆಗೆ ಕಿಶೋರ್, ನಿರ್ಮಲ್, ವೆಂಕಟರಾಜು ಹಾಗೂ ಸಂತೋಷ್ ಎಂಬುವರನ್ನು ಬಂಧಿಸಲಾಗಿದೆ.

'ಕೀರ್ತಿ ಸಂಬಂಧಿ ಮಹಿಳೆಯೊಬ್ಬರ ಜೊತೆಗೆ ಕಿಶೋರ್ ಅಸಭ್ಯವಾಗಿ ವರ್ತಿಸಿದ್ದ. ಇದರ ಮಾಹಿತಿ ತಿಳಿದಿದ್ದ ಕೀರ್ತಿ, ಕಿಶೋರ್‌ಗೆ ಎಚ್ಚರಿಕೆ ನೀಡಿದ್ದ. ಇದರಿಂದ ಆಕ್ರೋಶಗೊಂಡ ಕಿಶೋರ್ ಕೊಲೆಗೆ ಸಂಚು ರೂಪಿಸಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

REGIONAL INSTITUTE OF EDUCATION
National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: www.riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2024-25.

Sl. No.	Name of the Posts	No. of Post	Date of Interviews & Time
1	Project Assistant (MMTTC)	01	29.04.2024 at 10:00 am
2	Computer Assistant (MMTTC)	01	29.04.2024 at 11:30 am
3	Laboratory Assistant in Psychology	01	29.04.2024 at 02:00 pm
4	Medical Officer (Part-time)	01	29.04.2024 at 04:00 pm

For more details please log on to **www.riemysore.ac.in**

Principal



ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮತ ಯಾಚಿಸಿದ ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಬಿರು ಬಿಸಿಲಲ್ಲೂ 'ಸೌಮ್ಯಾ' ಬಿರುಸಿನ ರ್‍ಯಾಲಿ

• ವರುಣ ಹೆಗಡೆ

ಬೆಂಗಳೂರು: ಯುವಕರೊಂದಿಗೆ ಮಹಿಳೆಯರು, ಹಿರಿಯರು ಜಯಘೋಷ ಕೂಗುತ್ತ ಬೈಕ್ ಮತ್ತು ಸ್ಕೂಟರ್‌ಗಳನ್ನು ಚಲಾಯಿಸಿದರೆ, ಹಿಂದಿನಿಂದ ಜನಪದ ಕಲಾ ತಂಡಗಳು ತಮಟೆ, ಡೊಳ್ಳಿನ ನಾದದೊಂದಿಗೆ ಹೆಜ್ಜೆ ಹಾಕುತ್ತಿದ್ದವು. ಮಲೆ ಮಹಾದೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸುವುದರೊಂದಿಗೆ ದಿನದ ಪ್ರಚಾರ ಆರಂಭಿಸಿದ ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ, ತೆರೆದ ವಾಹನದಲ್ಲಿ ಬೈಕ್‌ಗಳ ಹಿಂದೆ ಸಾಗುತ್ತಲೇ ಮತದಾರರನ್ನು ಸೆಳೆಯಲು ಪ್ರಯತ್ನಿಸಿದರು.

ಕೆ.ಪಿ. ಅಗ್ರಹಾರದ ಐದನೇ ಮುಖ್ಯರಸ್ತೆಯಲ್ಲಿರುವ ಮಲೆ ಮಹಾದೇಶ್ವರ ಸ್ವಾಮಿ ದೇವಸ್ಥಾನದ ಬಳಿ ಬೆಳಿಗ್ಗೆ 8 ಗಂಟೆಯಿಂದಲೇ ಬೈಕ್‌ಗಳು ಬಂದು ಜಮಾಯಿಸಿದವು. ರಸ್ತೆಯ ನಡುವೆಯೇ ಬೈಕ್‌ಗಳನ್ನು ನಿಲ್ಲಿಸಿದ್ದರಿಂದ ಸಾರ್ವಜನಿಕರು ಪರ್ಯಾಯ ರಸ್ತೆಯಲ್ಲಿ ಸಾಗಿದರು. ವೀರಗಾಸೆ, ಡೊಳ್ಳು ಕುಣಿತ, ಡೊಳ್ಳು ಕುಣಿತ ಸೇರಿ ವಿವಿಧ ಜನಪದ ಕುಣಿತಗಳು ರ್‍ಯಾಲಿಯ ಮೆರುಗನ್ನು ಹೆಚ್ಚಿಸಿದವು. ಬೈಕ್ ರ್‍ಯಾಲಿ 9 ಗಂಟೆಗೆ ಪೂರ್ವ ನಿಗದಿಯಾಗಿದ್ದರಿಂದ ದೇವಸ್ಥಾನದ ಸುತ್ತಮುತ್ತ ಪಕ್ಷದ ಕಾರ್ಯಕರ್ತರು ತಮ್ಮ ನಾಯಕರ ಬರುವಿಕೆಗಾಗಿ ರಸ್ತೆಯ ಇಕ್ಕೆಲಗಳಲ್ಲಿ ಕಾದು ಕುಳಿತರು.

ಕೆಂಪಾಪುರ ಅಗ್ರಹಾರದಲ್ಲಿ ಸೌಮ್ಯ ಅವರು ರೋಡ್ ಶೋ ಮೂಲಕ ಮತಯಾಚಿಸಿದರು. ಎಂ.ಕೃಷ್ಣಪ್ಪ, ಪ್ರದೀಪ್ ಕೃಷ್ಣಪ್ಪ ಸಾಥ್ ನೀಡಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಅಭ್ಯರ್ಥಿ ಜತೆ ಒಂದು ದಿನ

9.15ರ ಹೊತ್ತಿಗೆ ಬಂದ ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಹಾಗೂ ಪಕ್ಷದ ಮುಖಂಡ ಪ್ರದೀಪ್ ಕೃಷ್ಣಪ್ಪ, ದೇವಸ್ಥಾನದೊಳಗೆ ಸೌಮ್ಯಾ ರೆಡ್ಡಿ ಅವರ ಬರುವಿಕೆಗಾಗಿ ಕಾದು ಕುಳಿತರು. 9.40ರ ವೇಳೆಗೆ ಬಂದ ಸೌಮ್ಯಾ, ಮಲೆ ಮಹಾದೇಶ್ವರ ಸ್ವಾಮಿ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ದೇವಸ್ಥಾನದ ಹೊರಗಡೆ ಬರುತ್ತಿದ್ದಂತೆಯೇ ಕಾರ್ಯಕರ್ತರು ಅವರಿಗೆ ಮಲ್ಲಿಗೆ ಹೂವಿನ ಹಾರ ಹಾಕಿ, ಪ್ರಚಾರ ಕಾರ್ಯಕ್ಕೆ ಬರಮಾಡಿಕೊಂಡರು. 10 ಗಂಟೆಗೆ ತೆರೆದ ವಾಹನ ಏರಿದ ಅವರು, ರಸ್ತೆಯ ಇಕ್ಕೆಲಗಳಲ್ಲಿನ ನಿವಾಸಿಗಳು, ಅಂಗಡಿಗಳ ಮಾಲೀಕರು, ಸಿಬ್ಬಂದಿಗೆ ಕೈಮುಗಿಯುತ್ತಲೇ ಮತಯಾಚಿಸಿದರು. ಅವರಿಗೆ ಕೃಷ್ಣಪ್ಪ ಸಾಥ್ ನೀಡಿದರು.

ಬಿಸಿಲನ್ನೂ ಲೆಕ್ಕಿಸದೆ ಕಾರ್ಯಕರ್ತರು ಬೈಕ್‌ಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜಯಘೋಷ ಕೂಗುತ್ತ ಸಾಗಿದರು. ತೆರೆದ ವಾಹನದಲ್ಲಿ ಸಾಗಿದ ಸೌಮ್ಯಾ ರೆಡ್ಡಿ ಮತ್ತು ಪಕ್ಷದ ಮುಖಂಡರಿಗೆ ಬಿಸಿಲಿನಿಂದ ರಕ್ಷಿಸಿಕೊಳ್ಳಲು ವಾಹನದ ಮೇಲ್ಭಾಗದಲ್ಲಿ ಬಟ್ಟೆಯನ್ನು ಕಟ್ಟಲಾಗಿತ್ತು. ವಾಹನ ಬರುತ್ತಿದ್ದಂತೆ ಮಹಿಳೆಯರು, ವೃದ್ಧರು, ಮಕ್ಕಳ ಸೇರಿ ವಿವಿಧ ವಯೋಮಾನದವರು ಮನೆಯ ಹೊರಗಡೆ ಬಂದು ರ್‍ಯಾಲಿಯನ್ನು ವೀಕ್ಷಿಸಿದರು. ಸೌಮ್ಯಾ ರೆಡ್ಡಿ ಅವರು ಮಂದಹಾಸದೊಂದಿಗೆ ಅವರಿಗೆ ಕೈ ಬೀಸಿದರು. ಇದೇ ವೇಳೆ ವಾಹನದಲ್ಲಿದ್ದ ಕಾಂಗ್ರೆಸ್ ಮುಖಂಡರು ಮೈಕ್ ಹಿಡಿದು, ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರವನ್ನು ದೂಷಿಸುತ್ತಾ ಕಾಂಗ್ರೆಸ್ ಪರ ಪ್ರಚಾರ ಮಾಡಿದರು.

ಮಠ, ದೇವಸ್ಥಾನಕ್ಕೆ ಭೇಟಿ

ಸೌಮ್ಯಾ ರೆಡ್ಡಿ ಅವರು ರ್‍ಯಾಲಿಗೆ ಬರುವ ಮೊದಲು ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಪೇಜಾವರದ ಸ್ವಾಮೀಜಿ ಅವರ ಆಶೀರ್ವಾದ ಪಡೆದು, ಅವರೊಂದಿಗೆ ಚರ್ಚಿಸಿದರು. ಸಂಜೆ ಜಯನಗರದ ರಾಘವೇಂದ್ರ ಸ್ವಾಮಿ ಮಠ, ಸಾಯಿಬಾಬಾ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

'ಸರ್ವಾಧಿಕಾರಿ ಧೋರಣೆ'

'ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ಸರ್ವಾಧಿಕಾರಿ ಧೋರಣೆ ತಾಳಿದೆ. ಇಲ್ಲಿನ ತೆರಿಗೆ ಹಣವನ್ನು ಬೇರೆ ರಾಜ್ಯಗಳಿಗೆ ನೀಡಲಾಗುತ್ತಿದೆ. ನಮ್ಮ ರಾಜ್ಯವು ಬರದಿಂದ ತತ್ತರಿಸಿದೆ. ಆದರೆ, ಯಾವುದೇ ಪರಿಹಾರವನ್ನು ಕೇಂದ್ರ ಸರ್ಕಾರ ನೀಡಿಲ್ಲ. ಈ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿಯೆತ್ತಲು ಸೌಮ್ಯಾ ರೆಡ್ಡಿ ಅವರನ್ನು ಗೆಲ್ಲಿಸಬೇಕು' ಎಂದು ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಮನವಿ ಮಾಡಿಕೊಂಡರು.

'ತೆರಿಗೆ ವಿಚಾರದಲ್ಲಿ ಮೋಸ'

'ತೆರಿಗೆ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರ ಮೋಸ ಮಾಡಿದೆ. ಮಹಾರಾಷ್ಟ್ರ ಬಳಿಕ ನಮ್ಮ ರಾಜ್ಯವೇ ಅಧಿಕ ತೆರಿಗೆಯನ್ನು ಪಾವತಿಸುತ್ತಿದೆ. ಆದರೆ, ಶೇ 13ರಷ್ಟು ಹಣ ಮಾತ್ರ ಮರಳಿ ಬರುತ್ತಿದೆ. ನಮ್ಮ ಪಾಲು ನಮಗೆ ಸಿಗುವಂತಾಗಲು ಕಾಂಗ್ರೆಸ್ ಬೆಂಬಲಿಸಬೇಕು' ಎಂದು ಸೌಮ್ಯಾ ರೆಡ್ಡಿ ಮನವಿ ಮಾಡಿಕೊಂಡರು.

'ಕ್ಷೇತ್ರದ ಬಿಜೆಪಿ ಸಂಸದರನ್ನು ಕಳೆದ ಐದು ವರ್ಷಗಳಿಂದ ನೋಡಿದ್ದೀರಾ? ಅವರ ಕೊಡುಗೆ ಏನು ಎನ್ನುವುದೂ ತಿಳಿಯದಾಗಿದೆ. ಅವರನ್ನು ಆಯ್ಕೆ ಮಾಡಿದ ಜನರಿಗೆ ಅವರು ಅನ್ಯಾಯ ಮಾಡಿದ್ದಾರೆ. ರಾಜ್ಯ, ಬೆಂಗಳೂರಿನಲ್ಲಿ ಸೌಹಾರ್ದ ಬರಲು ಕಾಂಗ್ರೆಸ್ ಅಗತ್ಯ' ಎಂದರು.

ಸುದ್ದಿ 2 ನಿಮಿಷ

ಬಿಜೆಪಿ ಸಮಾವೇಶ: ವಾಹನ ಸಂಚಾರಕ್ಕೆ ಬದಲಿ ಮಾರ್ಗ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಶನಿವಾರ ನಡೆಯಲಿರುವ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಈ ಹಿನ್ನೆಲೆಯಲ್ಲಿ ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ಅಂದು ಮಧ್ಯಾಹ್ನ 1 ರಿಂದ ರಾತ್ರಿ 7 ಗಂಟೆವರೆಗೆ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ. ಅಲ್ಲದೇ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ಪ್ಯಾಲೇಸ್ ರಸ್ತೆ, ಎಂ.ವಿ. ಜಯರಾಮ್ ರಸ್ತೆ, ವಸಂತನಗರ ರಸ್ತೆ, ಜಯಮಹಲ್ ರಸ್ತೆ, ಸಿ.ವಿ.ರಾಮನ್ ರಸ್ತೆ, ಬಳ್ಳಾರಿ ರಸ್ತೆ, ರಮಣಮಹರ್ಷಿ ರಸ್ತೆ, ನಂದಿದುರ್ಗ ರಸ್ತೆ, ತರಳಬಾಳು ರಸ್ತೆ, ಮೌಂಟ್ ಕಾರ್ಮೆಲ್ ಕಾಲೇಜು ರಸ್ತೆ, ಮೇಖ್ರಿ ವೃತ್ತದಿಂದ ಯಶವಂತಪುರದವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದ್ದು, ಪರ್ಯಾಯ ಮಾರ್ಗ ಬಳಸಲು ಸೂಚಿಸಲಾಗಿದೆ.

ಸರಕು ಸಾಗಣೆ ವಾಹನ ನಿಷೇಧ: ಮಧ್ಯಾಹ್ನ 12ರಿಂದ ರಾತ್ರಿ 9ರ ವರೆಗೆ ಸಿಎಂಟಿಐ ಜಂಕ್ಷನ್, ಮೈಸೂರು ಬ್ಯಾಂಕ್ ಜಂಕ್ಷನ್, ಹೆಬ್ಬಾಳ ಜಂಕ್ಷನ್, ನ್ಯೂ ಬಿಇಎಲ್ ಜಂಕ್ಷನ್, ಬಸವೇಶ್ವರ ಸರ್ಕಲ್, ಓಲ್ಡ್ ಉದಯ ಟಿವಿ ಜಂಕ್ಷನ್, ಹಬ್ ಕ್ರಾಂಪ್ ನಂದಿದುರ್ಗ ರಸ್ತೆ, ಯಶವಂತಪುರ ಗೋವರ್ಧನ್ ಮೂಲಕ ಭಾರೀ ವಾಹನಗಳು ನಗರಕ್ಕೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಜನರ ಸಂಕಷ್ಟ ನಿವಾರಿಸುತ್ತಿರುವ 'ಗ್ಯಾರಂಟಿ'ಗಳು: ರಕ್ಷಾ ರಾಮಯ್ಯ

ಯಲಹಂಕ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಅವರು ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ರೋಡ್ ಶೋ ನಡೆಸಿ ಮತಯಾಚಿಸಿದರು.

ಮಾಜಿ ಶಾಸಕ ಪ್ರಸನ್ನ ಕುಮಾರ್, ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಕೇಶವ ರಾಜಣ್ಣ, ಗೋಪಾಲ್ ಕೃಷ್ಣ, ಮಹಿಳೆಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರೋಡ್ ಶೋನಲ್ಲಿ ಭಾಗಿಯಾದರು. ಎಲ್ಲೆಡೆ ಜೈಕಾರ ಮೊಳಗಿತು. ಕಾರ್ಯಕರ್ತರು ಪುಷ್ಪಾರ್ಚನೆ ಮೂಲಕ ರಕ್ಷಾ ರಾಮಯ್ಯ ಅವರನ್ನು ಸ್ವಾಗತಿಸಿದರು.

ರಕ್ಷಾ ರಾಮಯ್ಯ ಅವರು ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಕ್ಷೇತ್ರದ ವಿವಿಧ ರಸ್ತೆಗಳಲ್ಲಿ ಪ್ರಚಾರ ನಡೆಸಿದರು. ಕೆಂಪೇಗೌಡರ ಪ್ರತಿಮೆ, ಪುನೀತ್ ರಾಜ್ ಕುಮಾರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಬಡಾವಣೆ ರಸ್ತೆ, ಮಸೀದಿ ರಸ್ತೆ, ಡೌನ್ ಬಜಾರ್ ರಸ್ತೆ, ಒಎಂಎಸ್ ರಸ್ತೆ, ಹೊಸಬೀದಿ, ಡೌನ್ ಬಜಾರ್ ರಸ್ತೆ, ಕೆಂಪೇಗೌಡ ಪ್ರತಿಮೆ, ಚಿಕ್ಕಬೊಮ್ಮಸಂದ್ರ ಕ್ರಾಸ್, ಅಟ್ಟೂರು ಮುಖ್ಯರಸ್ತೆ, ಶನಿ ಮಹಾತ್ಮ ದೇವಸ್ಥಾನ ಸುತ್ತಮುತ್ತ ರೋಡ್ ಶೋ ನಡೆಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಪ್ತ ಸಂವಾದದಲ್ಲಿ ತೊಡಗಿರುವುದು (ವಿಡಿಯೊ ತುಣುಕಿನ ಚಿತ್ರ)

ಮತ ಸೆಳೆಯಲು ಸಿ.ಎಂ–ಡಿಸಿಎಂ ಆಪ್ತ ಚರ್ಚೆಯ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಪ್ರಚಾರಕ್ಕೆ ಸಾಮಾಜಿಕ ಮಾಧ್ಯಮಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಮುಂದಾಗಿರುವ ಮುಖ್ಯಮಂತ್ರಿಯವರ ಕಚೇರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರ ಆಪ್ತ ಸಂವಾದದ ವಿಡಿಯೊ ತುಣುಕನ್ನು ಯೂಟ್ಯೂಬ್‌ನಲ್ಲಿ ಅಪ್ಲೋಡ್ ಮಾಡಿದೆ.

ಇಬ್ಬರೂ ನಾಯಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಲೋಕಸಭಾ ಚುನಾವಣೆಯಲ್ಲಿನ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ. ಬಿಜೆಪಿ– ಜೆಡಿಎಸ್ ಮೈತ್ರಿ, ಎನ್‌ಡಿಎ ಮೈತ್ರಿಕೂಟ ಗಳಿಸಬಹುದಾದ ಸ್ಥಾನಗಳ ಸಂಖ್ಯೆ, ಚುನಾವಣೆ ಮೇಲೆ 'ಗ್ಯಾರಂಟಿ' ಯೋಜನೆಗಳ ಪ್ರಭಾವದ ಕುರಿತು ಚರ್ಚಿಸಿದ್ದಾರೆ.

'ನಮಸ್ಕಾರ್ ಸಾರ್ ಹೇಗಿದ್ದೀರಿ' ಎಂದು ಮಾತು ಆರಂಭಿಸುವ ಶಿವಕುಮಾರ್, 'ಕೇರಳಕ್ಕೆ ಹೋಗಿದ್ದೆ. ಅಲ್ಲಿ ಎಲ್ಲ 20 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಕರ್ನಾಟಕದಲ್ಲಿ 20ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. ದೇಶದಲ್ಲಿ ಮೋದಿ ಅಲೆ ಇಲ್ಲ' ಎನ್ನುತ್ತಾರೆ.

'ಆರೋಗ್ಯ ಸುಧಾರಿಸುತ್ತಾ ಇದೆ' ಎಂದು ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ಮಹಾರಾಷ್ಟ್ರದಲ್ಲಿ ಬಿಜೆಪಿ ಅಭ್ಯರ್ಥಿ ನವನೀತ್ ರಾಣಾ ಅವರೇ ಮೋದಿ ಅಲೆ ಇಲ್ಲ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ 15ರಿಂದ 20 ಸ್ಥಾನ ಕಾಂಗ್ರೆಸ್ ಗೆಲ್ಲುವ ವಿಶ್ವಾಸ ನನಗಿತ್ತು. ಈಗ ನೋಡಿದರೆ ಅದಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವ ನಿರೀಕ್ಷೆ ಇದೆ' ಎಂದು ಹೇಳುತ್ತಾರೆ.

'ಮೋದಿ ಹೇಳುತ್ತಿರುವುದೆಲ್ಲ ಸುಳ್ಳು ಎಂಬುದು ಜನರಿಗೆ ಗೊತ್ತಾಗಿದೆ. ಎನ್‌ಡಿಎ 200 ಸ್ಥಾನಗಳನ್ನು ದಾಟುವುದಿಲ್ಲ. ಎಚ್‌.ಡಿ. ದೇವೇಗೌಡರು ದಿಕ್ಕು ತಪ್ಪಿಸುತ್ತಿದ್ದಾರೆ. ನಮ್ಮ ಸರ್ಕಾರ ಪತನವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದಾರೆ. ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಯಾವ ಬದ್ಧತೆಯೂ ಇಲ್ಲ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಜೆಡಿಎಸ್‌ನವರು ತಾಳ್ಮೆ ಕಳೆದುಕೊಂಡಿದ್ದಾರೆ. ಮಂಡ್ಯ, ಹಾಸನ, ಕೋಲಾರದಲ್ಲಿ ಅವರು ಗೆಲ್ಲುವುದಿಲ್ಲ. ಬೆಂಗಳೂರು ಗ್ರಾಮಾಂತರದಲ್ಲೂ ಬಿಜೆಪಿ ಅಭ್ಯರ್ಥಿ ಗೆಲ್ಲುವುದಿಲ್ಲ' ಎಂದು ಶಿವಕುಮಾರ್ ಹೇಳಿದ್ದಾರೆ.

ಬಿಜೆಪಿ ಎರಡಂಕಿ ತಲುಪಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ, ಕೇರಳ, ತೆಲಂಗಾಣ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಿಜೆಪಿ ಯಾವ ರಾಜ್ಯಗಳಲ್ಲೂ ಹತ್ತು ಕ್ಷೇತ್ರಗಳಲ್ಲಿ ಗೆಲ್ಲುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಮಾಲೀಕಯ್ಯ ಗುತ್ತೇದಾರ್ ಮತ್ತು ಶಾರದಾ ಮೋಹನ ಶೆಟ್ಟಿ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಮಾತನಾಡಿದ ಅವರು, 'ದೇಶದಲ್ಲಿ ಬಿಜೆಪಿ ತೊರೆಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಹರ್ಯಾಣದಲ್ಲಿ ಬಿಜೆಪಿಯ ಹಾಲಿ ಸಂಸದರೇ ಕಾಂಗ್ರೆಸ್ ಸೇರಿದ್ದಾರೆ. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 200 ಸ್ಥಾನಗಳನ್ನೂ ಗಳಿಸುವುದಿಲ್ಲ' ಎಂದರು.

ಬಿಜೆಪಿಯ ನಾಯಕರು ಹೇಳುವಂತೆ ಅವರ ಪಕ್ಷ ಲೋಕಸಭಾ ಚುನಾವಣೆಯಲ್ಲಿ 400 ಕ್ಷೇತ್ರಗಳಲ್ಲಿ ಗೆಲ್ಲಲು ಸಾಧ್ಯವಿದ್ದರೆ ಇತರ ಪಕ್ಷಗಳ ನಾಯಕರನ್ನು ಸೇರಿಸಿಕೊಳ್ಳುವ ಅನಿವಾರ್ಯ ಏನಿತ್ತು ಎಂದು ಪ್ರಶ್ನಿಸಿದರು.

'ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ಆ ಎರಡೂ ಪಕ್ಷಗಳ ಕಾರ್ಯಕರ್ತರೇ ವಿರೋಧಿಸುತ್ತಿದ್ದಾರೆ. ಹೀಗಾಗಿ ಆ ಪಕ್ಷಗಳ ಹಲವರು ಕಾಂಗ್ರೆಸ್‌ನತ್ತ ಬರುತ್ತಿದ್ದಾರೆ. ಬಿಜೆಪಿ ಧ್ವನಿ ಕಳೆದುಕೊಂಡಿರುವ ಪಕ್ಷವಾಗಿದೆ. ಕಾಂಗ್ರೆಸ್ ಸೇರಲು ಬಯಸುವ ಎಲ್ಲರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳುವಂತೆ ಸ್ಥಳೀಯ ನಾಯಕರಿಗೆ ಸೂಚನೆ ನೀಡಿದ್ದೇನೆ' ಎಂದು ಶಿವಕುಮಾರ್ ಹೇಳಿದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದು ಖಚಿತ. ಜನರು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳನ್ನು ಬೆಂಬಲಿಸಿ ಮತ ಚಲಾಯಿಸಲಿದ್ದಾರೆ' ಎಂದರು.

'ಬೇಷರತ್ತಾಗಿ ಪಕ್ಷ ಸೇರಿದ್ದಾರೆ'

'ದೀರ್ಘ ಕಾಲ ನಮ್ಮ ಜೊತೆಗಿದ್ದು, ನಂತರ ಬಿಜೆಪಿಗೆ ಹೋಗಿದ್ದ ಮಾಲೀಕಯ್ಯ ಗುತ್ತೇದಾರ್ ಈಗ ಯಾವುದೇ ಬೇಡಿಕೆಗಳಿಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಈ ಹಿಂದೆ ನಾವು ಒಟ್ಟಾಗಿ ಕೆಲಸ ಮಾಡಿದ್ದೇವೆ. ಮಾಲೀಕಯ್ಯ ಪಕ್ಷದ ಅನೇಕ ಹುದ್ದೆಗಳಲ್ಲಿದ್ದರು. ಶಾಸಕ ಎಂ.ವೈ ಪಾಟೀಲ ಮತ್ತು ಕಲಬುರಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಇವರ ಪಕ್ಷ ಸೇರ್ಪಡೆಯನ್ನು ಸ್ವಾಗತಿಸಿದ್ದಾರೆ. ಹಿಂದಿನ ಎಲ್ಲ ಘಟನೆಗಳನ್ನೂ ಮರೆತು ಪಕ್ಷ ಸಂಘಟಿಸಬೇಕು' ಎಂದರು.

ದೀರ್ಘ ಕಾಲ ಕಾಂಗ್ರೆಸ್‌ನಲ್ಲಿದ್ದ ಮಾಲೀಕಯ್ಯ, ನಂತರ ಬಿಜೆಪಿ ಸೇರಿದ್ದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಅಫಜಲಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ಪಕ್ಷೇತರನಾಗಿ ಸ್ಪರ್ಧಿಸಿದ್ದ ತಮ್ಮ ನಿತಿನ್ ಗುತ್ತೇದಾರ್ ಅವರನ್ನು ಬಿಜೆಪಿಗೆ ಸೇರಿಸಿಕೊಂಡಿರುವುದನ್ನು ವಿರೋಧಿಸಿ ಪಕ್ಷಾಂತರ ಮಾಡಿದ್ದಾರೆ.

ಕುಮಟಾ ಕ್ಷೇತ್ರದ ಶಾಸಕರಾಗಿದ್ದ ಶಾರದಾ ಮೋಹನ ಶೆಟ್ಟಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ ಬಳಿಕ ಪಕ್ಷ ತೊರೆದಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಬಳಿಕ ನಾಮಪತ್ರ ಹಿಂಪಡೆದಿದ್ದರು. ಚುನಾವಣೆಯಲ್ಲಿ ತಟಸ್ಥವಾಗಿ ಉಳಿದಿದ್ದರು. ಈಗ ಕಾಂಗ್ರೆಸ್ ನಾಯಕರ ಮನವೊಲಿಕೆ ಬಳಿಕ ಪಕ್ಷಕ್ಕೆ ಮರಳಿದ್ದಾರೆ.

'ಚೊಂಬು' ಜಾಹೀರಾತು: ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳ ಮುಖಪುಟದಲ್ಲಿ ಬಿಜೆಪಿ ಬಗ್ಗೆ ಸುಳ್ಳು ಮತ್ತು ಅವಹೇಳನಕಾರಿ ಜಾಹಿರಾತು ನೀಡಿದೆ' ಎಂದು ಕೆಪಿಸಿಸಿ ಮತ್ತು ಅದರ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಬಿಜೆಪಿಯು ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಈ ಜಾಹಿರಾತು ನೀಡಿರುವ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದೆ.

ಕಾಂಗ್ರೆಸ್ ಪಕ್ಷ ಚೊಂಬು ಹೆಸರಿನಲ್ಲಿ ಜಾಹೀರಾತು ನೀಡಿದೆ. ಇದು ಸುಳ್ಳು ಮಾಹಿತಿಗಳಿಂದ ಕೂಡಿರುವ ಮಾನಹಾನಿಕಾರ ಜಾಹಿರಾತು. ವಂಚಿಸಲಾಗಿದೆ ಮತ್ತು ಮೋಸ ಮಾಡಲಾಗಿದೆ ಎಂಬುದಕ್ಕೆ ಆಡು ಮಾತಿನಲ್ಲಿ ಈ ಪದ ಬಳಸಲಾಗುತ್ತದೆ. ವಿಧಾನಸಭಾ ಚುನಾವಣೆಯಲ್ಲೂ ಇದೇ ರೀತಿ ಸುಳ್ಳು ಮಾಹಿತಿಗಳನ್ನು ಜಾಹಿರಾತುಗಳ ಮೂಲಕ ಹರಡಿತ್ತು. ಈ ಜಾಹಿರಾತಿಗಳಿಗೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿದೆ. ಕಾಂಗ್ರೆಸ್ ಮತ್ತೆ ತನ್ನ ಹಳೇ ಚಾಳಿ ಆರಂಭಿಸಿದೆ ಎಂದು ದೂರಿನಲ್ಲಿ ಬಿಜೆಪಿ ತಿಳಿಸಿದೆ.

ಕಾಂಗ್ರೆಸ್ ಪಕ್ಷ ಸುಳ್ಳು ಮಾಹಿತಿ ಒಳಗೊಂಡ ಜಾಹಿರಾತು ನೀಡುವುದನ್ನು ತಡೆಯಬೇಕು. ಕಾಂಗ್ರೆಸ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಜಯನಗರದಲ್ಲಿ ರೋಡ್ ಶೋ ನಡೆಸಿದರು ಪ್ರಜಾವಾಣಿ ಚಿತ್ರ

ದಿವ್ಯಾ ಹಾಗರಗಿ– ಜಾಧವ್ ನಂಟಿನ ತನಿಖೆಗೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಜತೆ ಕಲಬುರಗಿ ಸಂಸದ ಡಾ. ಉಮೇಶ್ ಜಾಧವ್ ಹೊಂದಿರುವ ನಂಟಿನ ಕುರಿತು ತನಿಖೆ ನಡೆಸುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಕಾಂಗ್ರೆಸ್ ಆಗ್ರಹಿಸಿದೆ.

ದಿವ್ಯಾ ಅವರು ಜಾಧವ್ ಅವರ ಜತೆ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದರು. ಈ ಕುರಿತು ಆಯೋಗಕ್ಕೆ ದೂರು ಸಲ್ಲಿಸಿರುವ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು, 'ಷರತ್ತುಬದ್ಧ ಜಾಮೀನು ಪಡೆದು ಹೊರಗಿರುವ ದಿವ್ಯಾ ಜತೆ ಜಾಧವ್ ಗುರುತಿಸಿಕೊಳ್ಳುತ್ತಿರುವುದರಿಂದ ನ್ಯಾಯದಾನ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ' ಎಂದು ದೂರಿದ್ದಾರೆ.

ಯತ್ನಾಳ ವಿರುದ್ಧದ ಎಫ್‌ಐಆರ್ ಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ' ಎಂಬ ಹೇಳಿಕೆ ನೀಡಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ದಾಖಲಾಗಿದ್ದ ಎರಡು ಪ್ರತ್ಯೇಕ ಎಫ್‌ಐಆರ್ ಮತ್ತು ಅವುಗಳಿಗೆ ಸಂಬಂಧಿಸಿದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಯತ್ನಾಳ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು, ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ಈ ಮಧ್ಯಂತರ ಆದೇಶ ನೀಡಿದ್ದಾರೆ.

ಯತ್ನಾಳ್ ಪರ ವಕೀಲ ವೆಂಕಟೇಶ ಪಿ. ದಳವಾಯಿ, 'ಅರ್ಜಿದಾರರು ಸಚಿವರ ಪತ್ನಿ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ. ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ ಎಂದು ಹೇಳಿದ್ದಾರೆಯೇ ಹೊರತು ಅವರ ಪತ್ನಿಗೆ ಪಾಕಿಸ್ತಾನದವರು ಎಂದಿಲ್ಲ. ಯತ್ನಾಳ ಅವರು ತನ್ನನ್ನು ಪಾಕಿಸ್ತಾನದ ಉಗ್ರಗಾಮಿಗಳಿಗೆ ಹೋಲಿಸಿರುವುದಾಗಿ ಟಬುರಾವ್ ಹೇಳಿರುವುದು ಕೇವಲ ಊಹೆ' ಎಂದು ಪೀಠಕ್ಕೆ ವಿವರಿಸಿದರು.

ಪ್ರತಿವಾದಿಗಳಾದ ವಿಜಯಪುರ ಗಾಂಧಿ ಚೌಕ ಠಾಣೆಯ ಪೊಲೀಸರು, ದೂರುದಾರರಾದ ಸಚಿವ ದಿನೇಶ್ ಗುಂಡೂರಾವ್ ಪತ್ನಿ ಟಬು ರಾವ್ ಮತ್ತು ಚುನಾವಣಾ ಸಂಚಾರಿ ವಿಚಕ್ಷಣಾ ಅಧಿಕಾರಿ ಎಸ್.ಬಿ. ಜಿಡ್ಡಿಮನಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಮೂರ್ತಿಗಳು ಆದೇಶಿಸಿ ವಿಚಾರಣೆ ಮುಂದೂಡಿದರು.

'ಸಂತ್ರಸ್ತರ ಮೇಲೆ ತೇಜಸ್ವಿ ಸೂರ್ಯ ದೌರ್ಜನ್ಯ'

ಬೆಂಗಳೂರು: 'ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ಗುರು ಸಾರ್ವಭೌಮ ಸೌಹಾರ್ದ ಸಹಕಾರಿ ನಿಯಮಿತದಲ್ಲಿ ಇರಿಸಿದ್ದ ಠೇವಣಿ ಕಳೆದುಕೊಂಡು ಸಂತ್ರಸ್ತರಾಗಿರುವವರ ಮೇಲೆ ಸಂಸದ ತೇಜಸ್ವಿ ಸೂರ್ಯ ಹಾಗೂ ಅವರ ಬೆಂಬಲಿಗರು ದೌರ್ಜನ್ಯ ನಡೆಸಿದ್ದಾರೆ' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಆರೋಪಿಸಿದರು.

ಕಾಂಗ್ರೆಸ್ ಮುಖಂಡ ಶಂಕರ್ ಗುಹಾ ದ್ವಾರಕನಾಥ್ ಅವರೊಂದಿಗೆ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ತೇಜಸ್ವಿ ಸೂರ್ಯ ಮತ್ತು ಶಾಸಕ ರವಿ ಸುಬ್ರಮಣ್ಯ ಅವರು ಇತ್ತೀಚೆಗೆ ಸಹಕಾರಿ ಚಿಂತನ–ಮಂಥನ ಸಭೆ ಆಯೋಜಿಸಿದ್ದರು. ಅಲ್ಲಿ ಸಂತ್ರಸ್ತ ಠೇವಣಿದಾರರನ್ನು ಗೂಂಡಾಗಳು ಎಂದು ಅವಮಾನಿಸಿ, ದೌರ್ಜನ್ಯ ನಡೆಸಲಾಗಿದೆ' ಎಂದು ದೂರಿದರು.

'ಈ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದ್ದ ಜನರ ಬದುಕು ಬೀದಿಗೆ ಬಂದಿದೆ. ಸಂಸದರಾಗಿ ನ್ಯಾಯ ದೊರಕಿಸಿಕೊಡಬೇಕಿದ್ದ ತೇಜಸ್ವಿ, ಯಾವುದೇ ಕೆಲಸ ಮಾಡಿಲ್ಲ. ಮಸಾಲೆ ದೋಸೆ ತಿನ್ನುವುದು, ಲಸಿಕೆ ಮಾರುವುದಷ್ಟೇ ತೇಜಸ್ವಿ ಅವರ ಕೆಲಸ. ಕೇಂದ್ರ ಸರ್ಕಾರವೂ ಠೇವಣಿದಾರರ ಹಿತ ರಕ್ಷಿಸುವ ಬದ್ಧತೆ ತೋರಿಲ್ಲ.' ಎಂದು ವಾಗ್ದಾಳಿ ನಡೆಸಿದರು.

'ಗುರು ರಾಘವೇಂದ್ರ ಮತ್ತು ವಶಿಷ್ಠ ಸಹಕಾರಿ ಬ್ಯಾಂಕ್‌ಗಳ ಕಾರ್ಯಕ್ರಮಗಳಲ್ಲಿ ತೇಜಸ್ವಿ ಸೂರ್ಯ ಮತ್ತು ಅವರ ಚಿಕ್ಕಪ್ಪ ರವಿ ಸುಬ್ರಮಣ್ಯ ಮದುಮಕ್ಕಳಂತೆ ಓಡಾಡುತ್ತಿದ್ದರು. ಬ್ಯಾಂಕ್‌ಗಳು ಮುಳುಗಿದ ಬಳಿಕ ಠೇವಣಿದಾರರಿಗೆ ಸುಳ್ಳು ಭರವಸೆ ನೀಡಿ ಅನ್ಯಾಯ ಮಾಡಿದ್ದಾರೆ' ಎಂದು ಶಂಕರ್ ಗುಹಾ ದ್ವಾರಕಾನಾಥ್ ಆರೋಪಿಸಿದರು.

ನಗರದಲ್ಲಿ ಇಂದು

'ಚುನಾವಣಾ ಬಾಂಡ್ ಮತ್ತು ಮುಂದಿನ ಕ್ರಮಗಳ' ಕುರಿತು ರಾಷ್ಟ್ರೀಯ ವಿಚಾರಗೋಷ್ಠಿ: ಪ್ರಶಾಂತ್ ಭೂಷಣ್, ಅಂಜಲಿ ಭಾರದ್ವಾಜ್, ತ್ರಿಲೋಚನ್ ಶಾಸ್ತ್ರಿ, ಹರೀಶ್ ನರಸಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಎಸ್‌.ಸಿ., ಎಸ್‌. ಟಿ. ಗುತ್ತಿಗೆದಾರರ ಸಂಘ, ಸ್ಥಳ: ಅಲೂಮ್ನಿ ಅಸೋಸಿಯೇಷನ್, ಯುವಿಸಿಇ, ಕೆ.ಆರ್. ವೃತ್ತ, ಮಧ್ಯಾಹ್ನ 2



ಪ್ರಶಾಂತ್ ಭೂಷಣ್

'ಚುನಾವಣಾ ಬಾಂಡ್‌ಗಳ' ಕುರಿತು ಸಂವಾದ: ಪ್ರಶಾಂತ್ ಭೂಷಣ್, ಅಂಜಲಿ ಭಾರದ್ವಾಜ್, ಆಯೋಜನೆ: ಜಾಗೃತ ಕರ್ನಾಟಕ, ಜನಾಧಿಕಾರ ಸಂಘರ್ಷ ಪರಿಷತ್, ಬಹುತ್ವ ಕರ್ನಾಟಕ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4

ಸಿ.ಕೆ. ನಾಗರಾಜರಾವ್, ಕೆ.ಪಿ. ರಾವ್, ಕೊರಟಿ ಶ್ರೀನಿವಾಸರಾವ್ ದತ್ತಿ ಉಪನ್ಯಾಸ: 'ಹಾಗಲವಾಡಿ ಪಾಳೇಗಾರರ' ಕುರಿತು ಉಪನ್ಯಾಸ: ಕೃಷ್ಣಾಬಾಯಿ ಹಾಗಲವಾಡಿ, ಅಧ್ಯಕ್ಷತೆ: ದೇವರಕೊಂಡಾರೆಡ್ಡಿ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸಿ. ಸಭಾಂಗಣ, ಎನ್‌.ಆರ್. ಕಾಲೊನಿ, ಸಂಜೆ 5

ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ, ಪ್ರೊ.ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ ಪ್ರದಾನ: ರಮೇಶ್ ಭಟ್, ಉದ್ಘಾಟನೆ: ಎಸ್‌.ಎ. ಚನ್ನೇಗೌಡ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಎಸ್. ರಾಜಶೇಖರ್, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಉಮೇಶ್, ಬಿ. ನಂಜುಂಡಸ್ವಾಮಿ, ಕೆ.ಸಿ. ಶಿವಪ್ಪ, ಕವಿತಾ ಮಿಶ್ರ, ಮಲ್ಲಿಕಾರ್ಜುನ ಕೆಂಕೆರೆ, ನಿಸರ್ಗ ಸಂಗೀತ ವಿದ್ಯಾಲಯ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

'ಅಣ್ಣನ ನೆನಪು ಸಾಕ್ಷ್ಯ ನಾಟಕ ಪ್ರದರ್ಶನ: ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಹನುರಾಮ ಸಂಜೀವ, ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ,ಸಂಜೆ 7

ಮಾಸದ ಮಾತು–3: 'ಎಲ್‌.ಎಸ್‌.ಎಸ್ ಅವರ ಅಂಕಣ ಬರಹಗಳು' ಕುರಿತು ಉಪನ್ಯಾಸ: ಚ.ಹ. ರಘುನಾಥ್, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಉಪಸ್ಥಿತಿ: ನಿತಿನ್ ಷಾ, ಭಾರತಿ ಶೇಷಗಿರಿರಾವ್, ವ.ಚ. ಚನ್ನೇಗೌಡ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಸಂಜೆ 5

ಬೆಂಗಳೂರು ಕರಗೋತ್ಸವ: ದೇವರ ನಾಮ–ಭಜನೆ: ಮಲ್ಲೇಶ್ವರ ಭಜನಾ ಮಂದಿರ, ಸಾಂಸ್ಕೃತಿಕ ಕಾರ್ಯಕ್ರಮಗಳು: ಮಂಜುಶ್ರೀ, ರೋಹಿಣಿ ನಾಟ್ಯಾಲಯ ತಂಡಗಳಿಂದ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ತಿಗಳರಪೇಟೆ, ಸಂಜೆ 5ರಿಂದ

ರೋಟರಿ 'ಡಿಇಐ' ಪ್ರಶಸ್ತಿ ಪ್ರದಾನ: ಅತಿಥಿಗಳು: ಕೆ.ಪಿ. ನಾಗೇಶ್, ನಾಗೇಶ್ ಬಸವನಹಳ್ಳಿ, ಉಪಸ್ಥಿತಿ: ಶ್ರೀನಿವಾಸ್ ಮೂರ್ತಿ, ಆಯೋಜನೆ: ರೋಟರಿ, ಸ್ಥಳ: ದಿ ಡೆನ್, ಐಟಿಪಿಎಲ್, ಸಂಜೆ 6

'ವಜ್ರ ಮಹೋತ್ಸವ ಸಂಭ್ರಮ–2024' ಸಂಗೀತ ಕಾರ್ಯಕ್ರಮ: ಯುಗಳ ಗಾಯನ: ಐಶ್ವರ್ಯ ನಿತ್ಯಾನಂದ, ಅನುರಾಧ ಬದರಿ, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಬಿ.ಎಸ್. ಆನಂದ್, ಮೋರ್ಚಿಂಗ್: ಜಿ. ಲಕ್ಷ್ಮೀನಾರಾಯಣ, ಅಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

'ನಾಟ್ಯನಮಸ್ಯ' ನೃತ್ಯ ಪ್ರದರ್ಶನ: ಪ್ರಸ್ತುತಿ: ಶ್ರೀಗೌರಿ ಉಪಾಧ್ಯಾಯ, ಅತಿಥಿಗಳು: ಅಶೋಕ್ ಕುಮಾರ್, ಕೂರ್ಗಿ ಶಂಕರನಾರಾಯಣ ಉಪಾಧ್ಯಾಯ, ಪೂರ್ಣಿಮಾ ಗುರುರಾಜ್, ಆಯೋಜನೆ: ನಾಟ್ಯಾಂಜಲಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6

70ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ರಾಗ ವೈಭವ್ ಸ್ಕೂಲ್ ಆಫ್ ಮ್ಯೂಸಿಕ್ ವಿದ್ಯಾರ್ಥಿಳಿಂದ, ನಿರ್ದೇಶನ: ವಸುಮತಿ ರಘುನಾಥ್, ಭಜನೆ: ದಿ ಆರ್ಟ್ ಆಫ್ ಲಿವಿಂಗ್ ತಂಡ, ಆಯೋಜನೆ ಹಾಗೂ ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30

ರಾಮನವಮಿ ಸಂಗೀತೋತ್ಸವ–2024: ಸಂಜೆ 5ರಿಂದ 6 ಗಂಟೆ: ಬೆಂಗಳೂರು ವಿ. ಪ್ರವೀಣ್ ಅವರಿಂದ ಸಂಗೀತ ಕಾರ್ಯಕ್ರಮ, ವಿಶೇಷ ಕರ್ನಾಟಕ ಪಿಟೀಲು ಸಂಗೀತ ಕಛೇರಿ: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ಬೆಂಗಳೂರು ವಿ. ಪ್ರವೀಣ್, ಜಿ. ಗುರುಪ್ರಸನ್ನ, ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30ರಿಂದ

ಶ್ರೀರಾಮೋತ್ಸವ: ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಕಛೇರಿ ಜುಗಲ್‌ಬಂದಿ: ಗಾಯನ: ಮಾನಸಿ ಪ್ರಸಾದ್, ರಾಧಿಕಾ ಜೋಶಿ, ಪಿಟೀಲು: ಎಸ್‌.ಪಿ. ಆನಂತಪದ್ಮನಾಭ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಮೃಂದಗ: ರಂಜನಿ ವೆಂಕಟೇಶ್, ತಬಲಾ: ಆದರ್ಶ್ ಶೆಣೈ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯ ರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಭಾರತದಲ್ಲಿರುವುದು ವಿಚಿತ್ರ ಆರ್ಥಿಕ ನೀತಿ: ಪರಕಾಲ ಪ್ರಭಾಕರ್ ವ್ಯಾಖ್ಯಾನ

'ದೀನರಿಗೆ 5 ಕೆ.ಜಿ ಅಕ್ಕಿ, ಸ್ನೇಹಿತರಿಗೆ 5 ಏರ್‌ಪೋರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರಿಗೆ ಐದು ಕೆ.ಜಿ. ಉಚಿತ ಅಕ್ಕಿ ಕೊಟ್ಟು, ಐದು ವಿಮಾನ ನಿಲ್ದಾಣಗಳನ್ನು ಸ್ನೇಹಿತರಿಗೆ ನೀಡುವ ವಿಚಿತ್ರ ಆರ್ಥಿಕ ನೀತಿಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ' ಎಂದು ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಹೇಳಿದರು.

'ಸಮುದಾಯದ ಹಾದಿಯಲ್ಲಿ' ಸಂಘಟನೆಯು 2024ರ ಲೋಕಸಭಾ ಚುನಾವಣೆ–ಪ್ರಚಲಿತ ರಾಷ್ಟ್ರೀಯ ವಿದ್ಯಮಾನಗಳ ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ 'ದೇಶದ ದನಿ' ಉಪನ್ಯಾಸ ಹಾಗೂ ಕರ್ನಾಟಕದ 28 ಸಂಸದರ 'ರಿಪೋರ್ಟ್‌ಕಾರ್ಡ್' ಬಿಡುಗಡೆ ಮಾಡಿ ಮಾತನಾಡಿದರು.

ಅಗತ್ಯವಸ್ತುಗಳ ಬೆಲೆ ಏರಿಕೆ ಬಡ ಹಾಗೂ ಮಧ್ಯಮ ವರ್ಗದ ಜನರ ಬದುಕನ್ನು ಬೀದಿಪಾಲು ಮಾಡಿದೆ. ಜನರ ಕಷ್ಟದ ಬಗ್ಗೆ ಕೇಳುವ ಮನೋಸ್ಥಿತಿ ದೇಶವನ್ನು ಆಳುವ ನಾಯಕರಿಗೆ ಇಲ್ಲ. ಹಸಿವಿನ ಸೂಚ್ಯಂಕದಲ್ಲಿ ಭಾರತ 142 ಸ್ಥಾನದಲ್ಲಿದ್ದರೂ ದೇಶದಲ್ಲಿ ಒಬ್ಬರೂ ಹಸಿವಿನಿಂದ ಬಳಲುತ್ತಿಲ್ಲವೆಂದು ಪ್ರಧಾನಿ ಮೋದಿ ಅವರ ಸಂಪುಟದ ಸಚಿವರೇ ಹೇಳುತ್ತಾರೆ. ಹಸಿವಿನ ಸಮಸ್ಯೆ ಇಲ್ಲದ ಮೇಲೆ 83 ಕೋಟಿ ಜನರಿಗೆ ಐದು ಕೆ.ಜಿ. ಆಹಾರ ಧಾನ್ಯ ಪೂರೈಸುತ್ತಿರುವುದಾದರೂ ಏಕೆ ಎಂದು ಪ್ರಶ್ನಿಸಿದರು.

ಶೇ 40ರಷ್ಟು ಸಂಪತ್ತು ಶೇ 1ರಷ್ಟು ಮಂದಿಯ ಕೈಯಲ್ಲಿರುವ ಆರ್ಥಿಕ ವ್ಯವಸ್ಥೆ ನಮ್ಮದು. ಕೇಂದ್ರ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಶ್ರೀಮಂತರ ಸಾಲ ಮನ್ನಾ ಮಾಡುತ್ತಿರುವುದಲ್ಲದೇ, ಸಾರ್ವಜನಿಕ ಆಸ್ತಿಯನ್ನೂ ಅವರಿಗೆ ನೀಡುತ್ತಿದೆ. ಕಳೆದ 10 ವರ್ಷಗಳಲ್ಲಿ ಅಸಮಾನತೆಯ ಅಂತರ ಗಣನೀಯ ಹೆಚ್ಚಿದೆ ಎಂದರು.

ಸಾಮಾಜಿಕ ಹೋರಾಟಗಾರ ಸಲೀಲ್ ಶೆಟ್ಟಿ, ಲೇಖಕ ಆಕಾರ್ ಪಟೇಲ್, ಪತ್ರಕರ್ತ ಇಂದೂಧರ ಹೊನ್ನಾಪುರ ಇತರರು ಇದ್ದರು.

ಭಯೋತ್ಪಾದಕರ ನಿಯಂತ್ರಣಕ್ಕೆ ಇದ್ದ ಅಕ್ರಮ ಹಣ ವರ್ಗಾವಣೆ ಕಾಯ್ದೆಯನ್ನು ವಿರೋಧ ಪಕ್ಷಗಳಿಗೆ ಲಗಾಮು ಹಾಕಲು ಕೇಂದ್ರ ಸರ್ಕಾರ ಬಳಸುತ್ತಿದೆ
ಆಕಾರ್ ಪಟೇಲ್, ಲೇಖಕ

ಬಿಜೆಪಿ ಸರ್ಕಾರ ಆರ್‌ಟಿಐ ಕಾಯ್ದೆ ದುರ್ಬಲಗೊಳಿಸಿದೆ. 10 ವರ್ಷಗಳಲ್ಲಿ 88 ಸಾವಿರ ಸರ್ಕಾರಿ ಶಾಲೆಗಳು ಮುಚ್ಚಿವೆ. 12 ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ ಇವೆ
ವಿ.ಪಿ. ನಿರಂಜನಾರಾಧ್ಯ, ಶಿಕ್ಷಣ ತಜ್ಞ

ಬೆಂಗಳೂರಿನಲ್ಲಿ ಶುಕ್ರವಾರ 'ಸಮುದಾಯದ ಹಾದಿಯಲ್ಲಿ' ಸಂಘಟನೆ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಪರಕಾಲ ಪ್ರಭಾಕರ್, ಎ.ಆರ್. ವಾಸವಿ, ಮಲ್ಲಿಕಾ ಘಂಟಿ, ನಿರ್ಮಲಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಅಕ್ರಮ ಹಣ ವರ್ಗಾವಣೆ ಶಂಕೆ'

ಚುನಾವಣಾ ಬಾಂಡ್ ದೇಶದ ಇತಿಹಾಸದಲ್ಲೇ ದೊಡ್ಡ ಅಕ್ರಮ. ನಷ್ಟದಲ್ಲಿರುವ, ಅತ್ಯಂತ ಕಡಿಮೆ ಲಾಭ ಗಳಿಸಿದ ಕಂಪನಿಗಳೂ ಆಡಳಿತ ಪಕ್ಷಕ್ಕೆ ಕೋಟ್ಯಂತರ ಹಣ ದೇಣಿಗೆ ನೀಡಿವೆ. ಇದರ ಹಿಂದೆ ಹಿಂದೆ ಅಕ್ರಮ ಹಣ ವರ್ಗಾವಣೆಯ ಹುನ್ನಾರಗಳು ಇರಬಹುದು ಎಂದು ಪರಕಾಲ ಪ್ರಭಾಕರ್ ಶಂಕೆ ವ್ಯಕ್ತಪಡಿಸಿದರು.

ಮಣಿಪುರದಂಥ ಘಟನೆಗಳಿಗೆ ಭಾರತ ವಿಶ್ವದ ಎದುರು ತಲೆ ತಗ್ಗಿಸುವಂತಾಗಿದೆ. ದೇಶದ ಇತರೆ ರಾಜ್ಯಗಳಲ್ಲೂ ಜನರು ನಿತ್ಯವೂ ಇಂತಹ ಸ್ಥಿತಿಯನ್ನೇ ಅನುಭವಿಸುತ್ತಿದ್ದಾರೆ. ಸರ್ಕಾರ ಮಾತ್ರ ಜನರ ಗಮನ ಬೇರೆಡೆ ಸೆಳೆಯುತ್ತಾ ಜನರ ನೋವುಗಳನ್ನು ಹೆಚ್ಚಿಸುತ್ತಲೇ ಸಾಗಿದೆ ಎಂದರು.

ಅತ್ಯುತ್ತಮ ಗೃಹಬಳಕೆಯ ವಾಟರ್ ಪ್ಯೂರಿಫೈಯರ್ ಪ್ರಶಸ್ತಿಗಳು
2007-08
2011-12
2016-17
2023-24
KENT
Mineral RO™
Water Purifiers
HOUSE of PURITY
ಆರೋಗ್ಯ ಕೆಡುವತನಕ
ಕಾಯಬೇಡಿ
ಮನೆಗೆ ತನ್ನಿ
ಇಂದೇ KENT RO ವನ್ನು
ಹೆಚ್ಚುತ್ತಿರುವ ನೀರಿನ ಮಾಲಿನ್ಯದಿಂದ ಜಲಜನ್ಯ ರೋಗಗಳು ಹೆಚ್ಚಾಗುತ್ತಿವೆ.
KENT RO ವಾಟರ್ ಪ್ಯೂರಿಫೈಯರ್ ತಂದು ನಿಮ್ಮ ಕುಟುಂಬವನ್ನು
ರಕ್ಷಿಸಲು ಇದು ಸೂಕ್ತ ಸಮಯ.
50 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಂದ ವಿಶ್ವಾಸಾರ್ಹ
KENT GRAND PLUS
KENT PRIME PLUS
KENT GRAND★
100% ಪರಿಶುದ್ಧ ನೀರು
ಖನಿಜಗಳನ್ನು ಉಳಿಸಿಕೊಳ್ಳುತ್ತದೆ
ನೀರನ್ನು ಆರೋಗ್ಯಕರವಾಗಿಸುತ್ತದೆ
ಟ್ಯಾಂಕ್‌ನಲ್ಲಿ UV LED
ಶುದ್ಧೀಕರಿಸಿದ ನೀರನ್ನು ಶುದ್ಧವಾಗಿರಿಸುತ್ತದೆ
ಶುದ್ಧತೆಯ ಡಿಜಿಟಲ್ ಡಿಸ್‌ಪ್ಲೇ
ಬಹು ಹಂತದ ಶುದ್ಧೀಕರಣ: RO+UV+UF+TDS ಕಂಟ್ರೋಲ್+ ಟ್ಯಾಂಕ್‌ನಲ್ಲಿರುವ UV
IS 16240
CM/L- 8300156259
ಕೇವಲ KENT ನೀಡುತ್ತದೆ
4 YEARS FREE SERVICE*
1 Year Warranty + 3 Years No Service Charge
ಕೆಂಟ್ ಕೊಡುತ್ತದೆ
ಅತಿ ಶುದ್ಧ ಜಲ
*ನಿಯಮಗಳು & ಷರತ್ತುಗಳು ಅನ್ವಯಿಸುತ್ತವೆ
ಡೆಮೊಗಾಗಿ, ಕರೆಮಾಡಿ 9582-123-456 | ವೆಬ್‌ಸೈಟ್: www.kent.co.in | ಸೇವೆಗಾಗಿ, ಕರೆಮಾಡಿ 92-789-12345
• Bangalore • Retail Distributor: Mandakini Marketing • Dealers - Bangalore East: Pure Water House • New Airport Road: S R S Enterprises • Marathahalli: Pearl Infotech • Whitefield: Shanaishachara Enterprises • Banashankari: Novel Aqua Systems • Jayanagar: Aqua World • Bannerghatta Road • Peenya: V N T Enterprises • Begur Road: Universal Pure Water Solutions • Sarjapur Road: Suraksha Waters • Kanakapura Road: Aishwarya Solar • Kaggalipura: SVT Enterprises • Vijayanagara: C1 Business Associates • Chandapura: Sree Lakshmi Venkateshwara Solutions • K.R.Puram: Nayak Electronics • Hebbal: Snowy Drops Water Solutions • Hassan: Anand Marketing; Sri Sai Trade Corporation Technologies; H K S Distributors; Mithun Enterprises • Tumkur: Shree Shiva Ganesh • Nandini Layout: Supreme Technologies • Basaveshwar Nagar: Universal Solution • Madanyankanhalli: Universal Solution • Devanhalli • Nagarbhavi: Bangalore Water Solution • Kolar: SVS Power Solutions; Sri Vinayaka Systems • Yelahanka • Hebbal: Bharat Pure Water • Bommanhalli • Tin Factory: H20 Hub • Basavanagudi: Ruthvik Tejas Synergies • Kadur: New M S A Enterprises • Kengari: VSS Infinity Water Solutions • Magadi Road: Dhruva Water Solution • Immadahalli Main Road: Anjan Reddy Mineral Ro • Mariyappan Palya: Shravani Ro Service
ಇನ್ನಷ್ಟು ತಿಳಿಯಲು ಸ್ಕ್ಯಾನ್ ಮಾಡಿ
ದೇಶಾದ್ಯಂತ ಎಲ್ಲಾ ಪ್ರಮುಖ ಗೃಹೋಪಯೋಗಿ ಅಂಗಡಿಗಳಲ್ಲಿ ಲಭ್ಯವಿದೆ.

ಖಳನಾಯಕಿಯರೇಕೆ ಹೀಗೆ?

ದೀಪಶ್ರೀ ಎಸ್. ಕೂಡ್ಲಿಗಿ

ಒಂದು ಕಥೆಯಲ್ಲಿ ಅತ್ತೆಯೇ ಸೊಸೆಗೆ ವಿಲನ್, ಮತ್ತೊಂದು ಕಥೆಯಲ್ಲಿ ಮಲತಾಯಿಯೇ ಮಗಳಿಗೆ ವೈರಿ, ಮಗದೊಂದರಲ್ಲಿ ಅಕ್ಕ, ತಂಗಿಯರೇ ಅಣ್ಣ ತಮ್ಮನಿಗೆ ವೈರಿ, ಪತ್ನಿಗೆ ತನ್ನ ಗಂಡನೇ ಶತ್ರು. ಇದು ನಾನು ಹೇಳುತ್ತಿರುವ ಕಥೆಯಲ್ಲ. ಪ್ರಸ್ತುತ ಟಿವಿ ಧಾರಾವಾಹಿಗಳ ಕತೆ. ಹೆಣ್ಣನ್ನು ನಾವು ವಿದ್ಯೆಗೆ, ಸಿರಿದೇವತೆಗೆ, ಧಾತ್ರಿಗೆ ಹೋಲಿಸಿದ್ದೇವೆ. ಆದರೆ, ಹೆಣ್ಣನ್ನು ದುಷ್ಮನ್‌ಗಳಂತೆ ತೋರಿಸುವುದೇ ಸದ್ಯದ ಟ್ರೆಂಡ್ ಆಗಿದೆ.

ಹಳೆಕಾಲದ ಧಾರಾವಾಹಿಗಳಲ್ಲಿ ವಿಲನ್ ಪಾತ್ರಗಳನ್ನು ನಿಭಾಯಿಸುತ್ತಿದ್ದವರು ಕೇವಲ ಪುರುಷರಷ್ಟೇ. ಅಲ್ಲಿ ಪುರುಷರದ್ದೇ ಮೇಲುಗೈ ಇತ್ತು. ಬೆರಳೆಣಿಕೆಯಷ್ಟು ಸ್ತ್ರೀಯರದ್ದು. ಆದರೆ, ಇಂದು ಸರ್ವವನ್ನು ಮಹಿಳೆಯರೇ ನಿಭಾಯಿಸುತ್ತಿದ್ದಾರೆ.

ತಾಯಿ, ಅಜ್ಜಿ, ಮಗಳು, ಸೊಸೆ, ಮೊಮ್ಮಗಳು, ಅತ್ತೆ, ನಾದಿನಿ, ಅಕ್ಕ- ತಂಗಿ ಹೀಗೆ ಹೆಣ್ಣುಮಕ್ಕಳೇ ಸ್ಟ್ರಾಂಗ್. ಖಳನಾಯಕರ ಜಾಗವನ್ನು ಖಳನಾಯಕಿಯರು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ. ಮದುವೆ, ಶುಭ ಸಮಾರಂಭ ನಡೆಯುವಾಗ ಅಲ್ಲಿ ಹಾಜರ್. ಸತ್ಕಾರ್ಯಗಳನ್ನು ಕೆಡಿಸುವುದೇ ಅವರ ಉದ್ದೇಶ.

ಪ್ರತಿ ಧಾರಾವಾಹಿಯಲ್ಲಿ ಲೇಡಿ ವಿಲನ್ ಅಥವಾ ಖಳನಾಯಕನಿಗೊಂದು ಜೋಡಿ ಖಳನಾಯಕಿ ಇರುವುದು ಸಾಮಾನ್ಯ ಎನ್ನುವಂತಾಗಿದೆ. ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಮಾತನ್ನು ಸುಳ್ಳು ಮಾಡಬಾರದು ಎಂಬ ಕಾರಣಕ್ಕಾ? ಎಲ್ಲಾ ಪಾತ್ರಗಳನ್ನು ನಿಭಾಯಿಸುವ ಮಹಿಳೆಯರು ವಿಲನ್ ಪಾತ್ರಗಳನ್ನು ಜರೂರಾಗಿ ನಿಭಾಯಿಸುತ್ತಾರೆ ಎಂಬ ಕಾರಣಕ್ಕೋ ತಿಳಿಯುತ್ತಿಲ್ಲ.

ಮೌಲ್ಯಯುಕ್ತ, ಐತಿಹಾಸಿಕ, ಪ್ರಬುದ್ಧ, ಪೌರಾಣಿಕ ಧಾರಾವಾಹಿಗಳು ಕಣ್ಮರೆಯಾಗಿವೆ. ಕಣ್ಮಣಿಗಳನ್ನು ಕಿರಾತಕಿಯರಾಗಿ ತೋರಿಸುವ ಧಾರಾವಾಹಿಗಳು ಹೆಚ್ಚಿವೆ. ಇಲ್ಲಿ ವಿಲನ್‌ಗಳಾಗಿರುವ ಸ್ತ್ರೀ ಪಾತ್ರಧಾರಿಗಳು ದ್ವೇಷಿಸುವುದು ಪುರುಷರನ್ನಷ್ಟೇ ಅಲ್ಲ, ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರನ್ನು.

ಇಲ್ಲಿ ಖಳನಾಯಕಿಯರು ಮನೆಹಾಳು ಮಾಡಲು ನೆಮ್ಮದಿ ಕೆಡಿಸಲು ಬಳಸುವ ತಂತ್ರ ನೋಡಿದರೆ ಕೆಲವೊಮ್ಮೆ ನಗು ಬರುತ್ತದೆ. ಕೆಲವೊಮ್ಮೆ ಅಸಹ್ಯ ಎಂದೆನಿಸುತ್ತದೆ. ಹಾಲಿಗೆ ಉಪ್ಪು ಬೆರೆಸುವುದು, ಮೆಟ್ಟಿಲುಗಳ ಮೇಲೆ ಎಣ್ಣೆ ಸುರಿಯುವುದು, ಕಿಡ್ನ್ಯಾಪ್ ಮಾಡಿಸುವುದು , ರೌಡಿಗಳಿಗೆ ಸುಪಾರಿ ಕೊಟ್ಟು ಕೊಲೆ ಮಾಡಿಸುವುದು...

> ಮೌಲ್ಯಯುಕ್ತ, ಐತಿಹಾಸಿಕ, ಪ್ರಬುದ್ಧ, ಪೌರಾಣಿಕ ಧಾರಾವಾಹಿಗಳು ಕಣ್ಮರೆಯಾಗಿವೆ. ಕಣ್ಮಣಿಗಳನ್ನು ಕಿರಾತಕಿಯರಾಗಿ ತೋರಿಸುವ ಧಾರಾವಾಹಿಗಳು ಹೆಚ್ಚಿವೆ

ದಿನದ 24 ಗಂಟೆಯಲ್ಲಿ 15 ರಿಂದ 20 ಗಂಟೆ ಈ ತರಹದ ಧಾರಾವಾಹಿಗಳದ್ದೇ ದರ್ಬಾರು.

ಧಾರಾವಾಹಿಗಳಲ್ಲಿ ಖಳನಾಯಕಿಯರನ್ನು ನೋಡುವುದೇ ಕಷ್ಟ. ಅವರ ಕೃತಕ ಒಡವೆಗಳು, ಲಕ್ಷಣವಾಗಿ ಉಡದ ಸೀರೆ, ಡ್ರೆಸ್‌ಗಳು, ಗಾಬರಿಗೊಳಿಸುವ ಮೇಕಪ್‌ಗಳು, ನೋಡುವ ವಕ್ರದೃಷ್ಟಿ, ಮುಂಗೂದಲನ್ನು ಪದೇ ಪದೇ ತಿರುಗಿಸುವುದು, ಬಬಲ್ ಗಮ್ ತಿನ್ನುವವರಂತೆ ಬಾಯನ್ನು ಅತ್ತಿಂದಿತ್ತ, ಇತ್ತಿಂದತ್ತ ಹೊರಳಾಡಿಸುವುದು, ಡೈಲಾಗ್ ಇಲ್ಲದಿರುವಾಗ ದೇಹ ಅಲುಗಾಡಿಸುವುದು ಇದಕ್ಕೆಲ್ಲ ಏನೆಂದು ಕರೆಯುತ್ತಾರೆ? ಕಾಲಕ್ಕೆ ತಕ್ಕಂತೆ ಬದಲಾಗಬೇಕು, ಬಲಿಯಾಗಬಾರದು.

ಧಾರಾವಾಹಿಗಳಲ್ಲಿ ಬರುವ ನೈತಿಕತೆಗಿಂತ ಕೆಟ್ಟ ಸಂಗತಿಗಳನ್ನು ಕಲಿಯುವವರೇ ಹೆಚ್ಚು. ಗಂಡಿಗಿಂತ ಹೆಣ್ಣಿನ ಮನಸ್ಸು ತುಂಬಾ ಸೂಕ್ಷ್ಮ ಹಾಗೂ ನಯ ನಾಜೂಕು ಹೀಗಿದ್ದಾಗ ಖಳನಾಯಕಿಯ ಪಾತ್ರ ಮಹಿಳಾ ಪ್ರೇಕ್ಷಕಿಯರ ಮೇಲೆ ಗಾಢವಾದ ಋಣಾತ್ಮಕ ಪ್ರಭಾವ ಬೀರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಮಹಿಳೆಯರು ಹೆಚ್ಚೆಚ್ಚು ಧಾರಾವಾಹಿಗಳನ್ನು ನೋಡಿ ಮನೆ ಕೆಡಿಸುವ ಪಾಠ ಕಲಿಯಲಿ ಎಂಬುದು ನಿರ್ದೇಶಕರ ಹಾಗೂ ನಿರ್ಮಾಪಕರ ಆಶಯವೇ? ಒಂದು ಚಿತ್ರ, ಒಂದು ಕಥೆ, ಒಂದು ಧಾರಾವಾಹಿ ಎಂದರೆ ಅಲ್ಲಿ ಒಳ್ಳೆಯದು ಹಾಗೂ ಕೆಟ್ಟದ್ದು ಎರಡು ಇರುತ್ತದೆ ಎಂಬುದೇನೋ ಸತ್ಯ. ಆದರೆ, ಈ ಧಾರಾವಾಹಿಗಳಲ್ಲಿ ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಟ್ಟದ್ದೇ ಇರುತ್ತದೆ. ಕೆಟ್ಟದ್ದನ್ನೇ ಹೆಚ್ಚು ಪ್ರಚಾರ,ಪ್ರಚೋದನೆ ಮಾಡುವ ಉದ್ದೇಶವೇನಿದೆ? ಎಂಬುದು ಉತ್ತರ ಸಿಗದ ಪ್ರಶ್ನೆ.

ಟಿ.ವಿ ಧಾರಾವಾಹಿಗಳ ವೃದ್ಧೆಯರು ಮಕ್ಕಳೊಂದಿಗೆ ಆಡುತ್ತಾ, ಅವರ ಯೋಗಕ್ಷೇಮ ಬಯಸದೇ ಅವರಿಗೆ ಹಿಡಿಶಾಪ ಹಾಕುತ್ತಾ ಶಪಿಸುತ್ತಾರೆ. ಇಂತಹ ಧಾರಾವಾಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ವೀಕ್ಷಕರನ್ನು ಹೊಂದಿರುವುದೇ ಖೇದಕರ ಸಂಗತಿ.

ಧಾರಾವಾಹಿಗಳಿಂದ ಸಮಾಜಕ್ಕೆ ಸಿಗುವ ಸಂದೇಶ, ಮೌಲ್ಯವಾದರೂ ಏನು? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ. ಧಾರಾವಾಹಿಗಳು ಸಂಬಂಧಗಳನ್ನು ಬೆಸೆಯುವ ಕೊಂಡಿಯಾಗಬೇಕು. ಹೊಸ ಸಂಬಂಧಗಳಿಗೆ ಸೇತುವೆಯಾಗಬೇಕು. ಭದ್ರ ಬುನಾದಿಯಾಗಬೇಕು. ಬದಲಿಗೆ ಸಂಬಂಧ ಕಡಿಯುವ, ಕತ್ತರಿಸುವ ಕೊಡಲಿಯಾಗಬಾರದು.

ಖಳನಾಯಕಿ ಪಾತ್ರವಷ್ಟೆ

ಕೂಡು ಕುಟುಂಬದಲ್ಲಿ ಬೆಳೆದ ನನಗೂ ಸಾಧನಾ ಪಾತ್ರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ನಾನು ಒಂದು ಪಾತ್ರವನ್ನು ಪ್ರತಿನಿಧಿಸುತ್ತಿದ್ದೇನೆ ಅಷ್ಟೇ. ವೈಯಕ್ತಿಕವಾಗಿ ಸಾಧನಾ (ಪಾತ್ರ) ಬಗ್ಗೆ ನನಗೂ ಅಸಮಧಾನವಿದೆ. ತನ್ನತನವನ್ನು ಉಳಿಸಿಕೊಳ್ಳಲು ಆಕೆ ಮಾಡುವ ತಂತ್ರಗಳು ಕೆಲವೊಮ್ಮೆ ನನಗೇ ಹೀಗೂ ಇರಬಹುದಾ ಎನಿಸುತ್ತದೆ. ವೀಕ್ಷಕರು ಧಾರಾವಾಹಿಗಳನ್ನು ನೋಡಿ ಹೇಗೆ ಇರಬೇಕು, ಹೇಗೆ ಇರಬಾರದು ಎಂದು ತಿಳಿದುಕೊಳ್ಳಬೇಕು. ಖಳನಾಯಕಿ ಕೂಡ ಒಂದು ಪಾತ್ರ, ಅದನ್ನು ಮನರಂಜನೆಯ ರೀತಿ ನೋಡಿದರೆ ಕಲಾವಿದರಿಗೂ ಸಾರ್ಥಕ ಭಾವವಿರುತ್ತದೆ.

ಅಮೃತಾ ರಾಮಮೂರ್ತಿ (ಸಾಧನಾ ಪಾತ್ರಧಾರಿ, ಕೆಂಡಸಂಪಿಗೆ)

ಮನರಂಜನೆ ಒಂದು ಜವಾಬ್ದಾರಿ



ಖಳನಾಯಕಿಯಾಗಿ ಪಾತ್ರ ಮಾಡುವಾಗ ಕೆಲವು ಸನ್ನಿವೇಶ ಅತಿ ಎಂದು ಅನಿಸುತ್ತವೆ. ಹೀಗೆಲ್ಲಾ ಮಾಡಿದರೆ ಜನರು ಹೇಗೆ ನೋಡಬಹುದು ಎನ್ನುವ ಸಣ್ಣ ಅಳುಕು ನಮಗೂ ಕಾಡುತ್ತದೆ. ಕಾಲಮಾನಕ್ಕೆ ತಕ್ಕಂತೆ ಪಾತ್ರಗಳಲ್ಲಿಯೂ ಜನ ಬದಲಾವಣೆ ಕೇಳುತ್ತಾರೆ, ಹೀಗಾಗಿ ಜನರೂ ವಿಲನ್ ಪಾತ್ರಗಳನ್ನೇ ಹೆಚ್ಚು ಇಷ್ಟಪಡುತ್ತಾರೆ. ಅಭಿರುಚಿಗೆ ತಕ್ಕಂತೆ ಮನರಂಜನೆ ನೀಡುವುದು ನಮ್ಮ ಜವಾಬ್ದಾರಿ. ಆದರೂ ಕೆಲವೊಮ್ಮೆ ಸೃಷ್ಟಿಸುವ ಸಂದರ್ಭಗಳ ತೀವ್ರತೆಯನ್ನು ಕಡಿಮೆ ಮಾಡಬೇಕಾಗುತ್ತದೆ, ನನ್ನ ಪಾತ್ರದಲ್ಲಿ ನಾನು ಅದನ್ನು ಮಾಡಿದ್ದೇನೆ.

ಅರ್ಚನಾ ಗೌಡ (ಸುಹಾಸಿನಿ ಪಾತ್ರಧಾರಿ, ಗಟ್ಟಿಮೇಳ)

ಕೆಟ್ಟತನದ ಅರಿವಿರಲಿ

ಒಳ್ಳೆಯದು ಇದ್ದಲ್ಲಿ ಕೆಟ್ಟದ್ದು ಇದ್ದೇ ಇರುತ್ತದೆ. ಕೆಟ್ಟದ್ದರ ನಿವಾರಣೆಗೆ ಒಳ್ಳೆಯ ಪಾತ್ರಗಳಿರುತ್ತವೆ. ಅದಕ್ಕೆ ಧಾರಾವಾಹಿ ಹೊರತಲ್ಲ. ಮನರಂಜನೆಗೆಂದು ಖಳನಾಯಕಿಯರ ಪಾತ್ರ ಸೃಷ್ಟಿದ್ದರೂ ಜೀವನ ಸತ್ಯಕ್ಕೆ ಧಾರಾವಾಹಿಗಳು ಹತ್ತಿರವಾಗಿರುತ್ತವೆ. ಖಳನಾಯಕಿಯರ ಪಾತ್ರದಲ್ಲಿ ಹೆಣ್ಣುಮಕ್ಕಳನ್ನೇ ಯಾಕೆ ಹೆಚ್ಚು ತೋರಿಸುತ್ತಾರೆ ಎನ್ನುವ ಪ್ರಶ್ನೆ ಕಾಡುತ್ತದೆ, ಧಾರಾವಾಹಿಗಳಲ್ಲಿ ಹೆಣ್ಣುಮಕ್ಕಳನ್ನೇ ಒಳ್ಳೆಯ ಪಾತ್ರಗಳಲ್ಲೂ ತೋರಿಸುತ್ತಾರೆ ಅದನ್ನು ನೋಡಿ ಅಳವಡಿಸಿಕೊಂಡರೆ ಒಳ್ಳೆಯದು.

ಮಾಲತಿ ಸರದೇಶಪಾಂಡೆ (ಸೀತಾ ಪಾತ್ರಧಾರಿ, ಸತ್ಯ)

ಬದಲಾದ ಮನಸ್ಥಿತಿ

ಧಾರಾವಾಹಿಯಲ್ಲಿ ತೋರಿಸುವ ಪಾತ್ರದಲ್ಲಿರುವಂತೆ ನಿಜ ಜೀವನದಲ್ಲಿ ಇರಲು ಸಾಧ್ಯವಿಲ್ಲ. ಒಬ್ಬ ಹೆಣ್ಣು ಈ ರೀತಿಯೂ ಮಾಡಲು ಸಾಧ್ಯವೇ ಅಂತಾ ಅನಿಸಿದ್ದುಂಟು ನನಗೆ. ಆದರೆ, ಪಾತ್ರಕ್ಕೆ ಪೂರಕವಾಗಿ, ಮನರಂಜನೆಗೆ ನಟಿಸಲೇಬೇಕಾಗುತ್ತದೆ. ಮೇಕಪ್ ಹಾಕಿ ಕ್ಯಾಮೆರಾ ಮುಂದೆ ನಿಂತಾಗ ಪಾತ್ರದಲ್ಲಿ ತೊಡಗಿದಂತೆಯೆ. ಇತ್ತೀಚೆಗೆ ಜನರ ಮನಸ್ಥಿತಿಯೂ ಬದಲಾಗಿದೆ. ಖಳನಾಯಕಿಯಾಗಿ ನಟಿಸುವವರನ್ನು ಅದೇ ಪಾತ್ರ ನೋಡುವುದಕ್ಕಿಂತ ನಟನೆಯನ್ನು ಗುರುತಿಸಿ ಪ್ರಶಂಸಿಸುತ್ತಾರೆ.

ಜಾನ್ಸಿ ಸುಬ್ಬಯ್ಯ (ಮಾನ್ಯತಾ ಪಾತ್ರಧಾರಿ, ರಾಮಾಚಾರಿ)

ನಿರೂಪಣೆ: ಪವಿತ್ರಾ ಭಟ್

ಬೇಸಿಗೆಯ ಧಗೆಗೆ ಹಂದಿ ಮಾಂಸದ ಖಾದ್ಯ

ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

ರಸಸ್ವಾದ

ಪೋರ್ಕ್ ದೊನ್ನೆ ಬಿರಿಯಾನಿ



ಬೇಕಾಗುವ ಸಾಮಗ್ರಿಗಳು: ಪೋರ್ಕ್ 1/2 ಕೆ.ಜಿ (ಕೆಂಪು ಮಾಂಸ ಮಾತ್ರ), ಸೋನಾ ಮಸೂರಿ ಅಕ್ಕಿ 1/2 ಕೆ.ಜಿ, ಶುಂಠಿ 2 ಇಂಚು, ಬೆಳ್ಳುಳ್ಳಿ 3 ಉಂಡೆ, ಕೊತ್ತಂಬರಿಸೊಪ್ಪು 1 ಕಪ್, ಪುದೀನಾ 1 ಕಪ್, ಹಸಿಮೆಣಸಿನಕಾಯಿ 8, ಬಿರಿಯಾನಿ ಮಸಾಲೆ 1 ಚಮಚ, ಗರಂಮಸಾಲೆ 1 ಚಮಚ, ಜೀರಿಗೆ ಪುಡಿ 1/2 ಚಮಚ, ಪೆಪ್ಪರ್ ಪುಡಿ 1/2 ಚಮಚ, ಲವಂಗ 6, ಏಲಕ್ಕಿ 2, ಕಾಳು ಮೆಣಸು 8, ಚಕ್ಕೆ 3 ತುಂಡು, ಸೋಂಪು ಕಾಳು ಸ್ವಲ್ಪ, ಮೊರಾಠಿ ಮೊಗ್ಗು 2, ಅನಾನಸ್ ಹೂ 2, ಪಲಾವ್ ಎಲೆ 3, ಪತ್ರೆ 2 ಎಸಳು, ಕಸೂರಿ ಮೇಥಿ 4 ಚಮಚ, ಈರುಳ್ಳಿ 4, ಟೊಮ್ಯಾಟೊ 6, ಅರಿಶಿನ ಪುಡಿ ಸ್ವಲ್ಪ, ಎಣ್ಣೆ, ತುಪ್ಪ, ಉಪ್ಪು.

ತಯಾರಿಸುವ ವಿಧಾನ: ಶುಂಠಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಪುದೀನಾಗೆ ಸ್ವಲ್ಪ ನೀರು ಹಾಕಿ ರುಬ್ಬಿಕೊಳ್ಳಿ. ಕುಕ್ಕರ್‌ಗೆ ಎಣ್ಣೆ ಸೋಂಪುಕಾಳು, ಮೆಣಸು, ಚಕ್ಕೆ, ಲವಂಗ, ಏಲಕ್ಕಿ, ಅನಾನಸ್ ಹೂ, ಮೊರಾಠಿ ಮೊಗ್ಗು, ಪಲಾವ್ ಎಲೆ, ಈರುಳ್ಳಿ ಹಾಕಿ ಫ್ರೈ ಆದ ನಂತರ ರುಬ್ಬಿದ ಮಿಶ್ರಣ, ಅರಿಶಿನಪುಡಿ, ಉಪ್ಪು ಹಾಕಿ ಹಸಿವಾಸನೆ ಹೋಗುವ ತನಕ ಬೇಯಿಸಿ ನಂತರ ಟೊಮೊಟೊ, ಪೋರ್ಕ್, ಬಿರಿಯಾನಿ ಮಸಾಲೆ, ಗರಂಮಸಾಲೆ, ಜೀರಿಗೆಪುಡಿ, ಪೆಪ್ಪರ್‌ಪುಡಿ ಹಾಕಿ ಸ್ವಲ್ಪ ಫ್ರೈ ಮಾಡಿ ಕುಕ್ಕರ್ ಮುಚ್ಚಳ ಮುಚ್ಚಿ ಎರಡು ವಿಷಲ್ ಹಾಕಿಸಿ ಸ್ವಲ್ಪ ಸಮಯ ಬಿಟ್ಟು ಕುಕ್ಕರ್ ಮುಚ್ಚಳ ತೆಗೆದು ತೊಳೆದ ಅಕ್ಕಿಯನ್ನು ಈ ಮಿಶ್ರಣಕ್ಕೆ ಸೇರಿಸಿ ಒಂದು ಲೋಟ ಅಕ್ಕಿಗೆ ಒಂದೂವರೆವಷ್ಟು ನೀರು, ಕಸೂರಿಮೇಥಿ, ತುಪ್ಪ ಹಾಕಿ ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ.

ಪೋರ್ಕ್ ಡ್ರೈ ಫ್ರೈ

ಬೇಕಾಗುವ ಸಾಮಗ್ರಿಗಳು: ಪೋರ್ಕ್ 1/2 ಕೆ.ಜಿ (ಮಾಂಸ ಮತ್ತು ಚರ್ಬಿ), ಬೆಳ್ಳುಳ್ಳಿ 1 ಉಂಡೆ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ಕರಿಬೇವು 1 ಕಡ್ಡಿ, ಖಾರದ ಪುಡಿ 1 ಚಮಚ, ಧನಿಯಾ ಬೀಜ 1 ಚಮಚ, ಜಾಯಿಕಾಯಿ ಸ್ವಲ್ಪ, ಅರಿಶಿನ ಪುಡಿ ಸ್ವಲ್ಪ, ಪೋರ್ಕ್ ಮಸಾಲೆ 1 ಚಮಚ, ಪೆಪ್ಪರ್ 1/2 ಚಮಚ, ಏಲಕ್ಕಿ 1, ಲವಂಗ 10, ಚಕ್ಕೆ 3 ತುಂಡು, ಈರುಳ್ಳಿ 2, ಟೊಮ್ಯಾಟೊ 1, ಬ್ಯಾಡಗಿ ಮೆಣಸಿನಕಾಯಿ 6, ಹಸಿ ಮೆಣಸಿನಕಾಯಿ 6, ಎಣ್ಣೆ, ಸಾಸಿವೆ, ಉಪ್ಪು.

ತಯಾರಿಸುವ ವಿಧಾನ: ಚೆನ್ನಾಗಿ ತೊಳೆದ ಪೋರ್ಕ್‌ಗೆ ಅರಿಶಿನ ಪುಡಿ, ಖಾರದಪುಡಿ ಮತ್ತು ಸ್ವಲ್ಪ ಉಪ್ಪನ್ನು ಬೆರೆಸಿ ಕುಕ್ಕರ್‌ನಲ್ಲಿ ಬೇಯಿಸಿಕೊಳ್ಳಿ. ಬಾಣಲಿಗೆ ಧನಿಯಾ ಬೀಜ, ಲವಂಗ, ಜಾಯಿಕಾಯಿ, ಪೆಪ್ಪರ್, ಬ್ಯಾಡಗಿ ಮೆಣಸಿನಕಾಯಿ, ಏಲಕ್ಕಿ, ಚಕ್ಕೆಯನ್ನು ಹಾಕಿ ಸಣ್ಣ ಉರಿಯಲ್ಲಿ ಹುರಿದು ಆರಿದ ನಂತರ ಪುಡಿ ಮಾಡಿಟ್ಟುಕೊಳ್ಳಿ. ಫ್ರೈಗೆ ಪ್ಯಾನ್‌ಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ ಕರಿಬೇವು, ಹಸಿಮೆಣಸಿನಕಾಯಿ, ಜಜ್ಜಿದ ಬೆಳ್ಳುಳ್ಳಿ ಹಾಕಿ ಫ್ರೈಗೆ ಮಾಡಿದ ಮೇಲೆ ಬೆಂದ ಮಾಂಸ ನೀರಿನ ಸಮೇತ ಹಾಕಿದ ನಂತರ ಈರುಳ್ಳಿ, ಟೊಮ್ಯಾಟೊ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಪೋರ್ಕ್ ಮಸಾಲೆ ಮತ್ತು ಪುಡಿ ಮಾಡಿದ ಮಸಾಲೆ ಹಾಕಿ ಸ್ವಲ್ಪ ನೀರು ಹಾಕಿ ಮುಚ್ಚಳ ಮುಚ್ಚಿ ಬೇಯಿಸಿ ಕೊನೆಗೆ ಕತ್ತರಿಸಿದ ಕೊತ್ತಂಬರಿ ಮತ್ತು ಪುದೀನ ಉದುರಿಸಿ ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ.

ಹಂದಿಮಾಂಸದ ಸಾರು

ಬೇಕಾಗುವ ಸಾಮಗ್ರಿಗಳು: ಪೋರ್ಕ್ 1 ಕೆ.ಜಿ, ಶುಂಠಿ 2 ಇಂಚು, ಬೆಳ್ಳುಳ್ಳಿ 3 ಉಂಡೆ, ಕೊತ್ತಂಬರಿಸೊಪ್ಪು ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ದನಿಯಾ ಪುಡಿ 3 ಚಮಚ, ಖಾರದ ಪುಡಿ 3 ಚಮಚ, ಅರಿಶಿನ ಪುಡಿ ಸ್ವಲ್ಪ, ಚಕ್ಕೆ 2 ಇಂಚು ಉದ್ದದ್ದು, ಲವಂಗ 5, ಮೆಣಸು 10, ಪತ್ರೆ ಸ್ವಲ್ಪ, ಜಾಯಿಕಾಯಿ ಸ್ವಲ್ಪ, ಹುರಿಗಡಲೆ 1 ಚಮಚ, ಗಸೆಗಸೆ ಸ್ವಲ್ಪ, ಈರುಳ್ಳಿ 3, ಟೊಮ್ಯಾಟೊ 4, ಕಾಯಿ ಅರ್ಧ ಹೋಳು, ಉಪ್ಪು.

ತಯಾರಿಸುವ ವಿಧಾನ: ಈರುಳ್ಳಿ ಖಾರಕ್ಕೆ: ಈರುಳ್ಳಿ, ಕೊತ್ತಂಬರಿ, ಪುದೀನ, ಅರಿಶಿನ ಪುಡಿ, ಶುಂಠಿ, ಬೆಳ್ಳುಳ್ಳಿ ಹಾಕಿ ರುಬ್ಬಿಟ್ಟುಕೊಳ್ಳಿ.

ಮಸಾಲೆಗೆ: ಟೊಮೆಟೊ, ಧನಿಯಾಪುಡಿ, ಖಾರದ ಪುಡಿ, ಕಾಯಿ, ಚಕ್ಕೆ, ಲವಂಗ, ಪತ್ರೆ, ಜಾಯಿಕಾಯಿ, ಹುರಿಗಡಲೆ, ಗಸೆಗಸೆ ಹಾಕಿ ರುಬ್ಬಿಟ್ಟುಕೊಳ್ಳಿ.

ಕುಕ್ಕರ್‌ಗೆ ಚೆನ್ನಾಗಿ ತೊಳೆದ ಪೋರ್ಕ್ ಮತ್ತು ಉಪ್ಪನ್ನು ಹಾಕಿ ಮಾಂಸಕ್ಕೆ ಉಪ್ಪು ಹಿಡಿಯುವ ತನಕ ಫ್ರೈ ಮಾಡಿದ ನಂತರ ಈರುಳ್ಳಿ ಖಾರ ಹಾಕಿ ಕುಕ್ಕರ್ ಮುಚ್ಚಳ ಮುಚ್ಚಿ ಎರಡು ವಿಷಲ್ ಹಾಕಿಸಿ ಸ್ವಲ್ಪ ಸಮಯ ಬಿಟ್ಟು ಕುಕ್ಕರ್ ಮುಚ್ಚಳ ತೆಗೆದು ಮಸಾಲೆ ಹಾಕಿ ಚೆನ್ನಾಗಿ ಬೇಯಿಸಿ (ಒಗ್ಗರಣೆಗೆ ಎಣ್ಣೆಯ ಅವಶ್ಯಕತೆಯಿಲ್ಲ.

ಪೋರ್ಕ್ ಡ್ರೈ

ಬೇಕಾಗುವ ಸಾಮಗ್ರಿಗಳು: ಪೋರ್ಕ್ 1/2 ಕೆ.ಜಿ (ಮಾಂಸ ಮತ್ತು ಚರ್ಬಿ), ಶುಂಠಿ ಪೇಸ್ಟ್ 1 ಚಮಚ, ಬೆಳ್ಳುಳ್ಳಿ 1 ಉಂಡೆ, ಖಾರದ ಪುಡಿ 2 ಚಮಚ, ಧನಿಯಾ ಪುಡಿ 2 ಚಮಚ, ಪೋರ್ಕ್ ಮಸಾಲೆ 1 ಚಮಚ, ಅರಿಶಿನ ಪುಡಿ ಸ್ವಲ್ಪ, ಈರುಳ್ಳಿ 2, ಕರಿಬೇವು 2 ಕಡ್ಡಿ, ಕೊತ್ತಂಬರಿಸೊಪ್ಪು ಸ್ವಲ್ಪ, ಪುದೀನಾ ಸ್ವಲ್ಪ, ಹುಣುಸೇಹುಳಿ 1 ಟೀ ಕಪ್, ಉಪ್ಪು.

ತಯಾರಿಸುವ ವಿಧಾನ: ಚೆನ್ನಾಗಿ ತೊಳೆದ ಪೋರ್ಕ್ಗೆ ಅರಿಶಿನ ಪುಡಿ, ಖಾರದಪುಡಿ, ಮತ್ತು ಸ್ವಲ್ಪ ಉಪ್ಪನ್ನು ಬೆರೆಸಿ ನೀರು ಹಾಕದೆ ಕುಕ್ಕರ್‌ನಲ್ಲಿ 3 ವಿಷಲ್ ಹಾಕಿಸಿಟ್ಟುಕೊಳ್ಳಿ.

ಫ್ರೈಗೆ ಬೆಂದ ಪೋರ್ಕ್ ಅನ್ನು ಹಾಕಿ ಅದಕ್ಕೆ ಹುಣಸೇಹುಳಿ, ಖಾರದಪುಡಿ, ಅರಿಶಿನಪುಡಿ, ಮತ್ತು ಉಪ್ಪು ಹಾಕಿ ಸಣ್ಣ ಉರಿಯಲ್ಲಿ ಚೆನ್ನಾಗಿ ಫ್ರೈ ಮಾಡಿದ ನಂತರ ಈರುಳ್ಳಿ, ಜಜ್ಜಿದ ಬೆಳ್ಳುಳ್ಳಿ, ಶುಂಠಿ ಪೇಸ್ಟ್, ಕರಿಬೇವು ಹಾಕಿ ಫ್ರೈ ಮಾಡಿ. ಸ್ವಲ್ಪ ಸಮಯದ ನಂತರ ಧನಿಯಾಪುಡಿ, ಪೋರ್ಕ್ ಮಸಾಲೆ ಹಾಕಿ ಫ್ರೈ ಮಾಡುತ್ತೀರಿ. ಮಾಂಸ ಬೆಂದಿಲ್ಲವೆಂದರೆ ಮಾಂಸ ಬೆಂದಿರುವ ನೀರನ್ನು ಹಾಕಿಕೊಳ್ಳಿ ಚೆನ್ನಾಗಿ ಡ್ರೈ ಆದ ನಂತರ ಕೊತ್ತಂಬರಿ ಸೊಪ್ಪು ಮತ್ತು ಪುದೀನಾ ಉದುರಿಸಿ.

ಹೊಳಪಿಗೆ ಸ್ಕಿನ್ ಐಸಿಂಗ್

ಕಾಳಜಿ

ಬಿರುಬಿಸಿಲಿನಲ್ಲಿ ನಡೆದು ಬಂದರೆ ದಣಿವಾಗುವುದಷ್ಟೆ ಅಲ್ಲ ಚರ್ಮವು ಸುಟ್ಟಾಂತಾಗಿ ಕಾಂತಿಹೀನವಾಗುತ್ತದೆ. ಹಾಗಾಗಿ ಮುಖ, ಕುತ್ತಿಗೆ, ಕೈ ಕಾಲಿನ ಚರ್ಮದ ಬಗ್ಗೆ ಕಾಳಜಿ ವಹಿಸುವುದು ಅಗತ್ಯ. ರಾಸಾಯನಿಕ ಅಂಶಗಳಿರುವ ಕ್ರೀಮು, ಸೋಪುಗಳನ್ನು ಹೆಚ್ಚು ಬಳಸದೆ ಮನೆಯಲ್ಲಿ ಸಿಗುವ ಹಲ ಬಗೆಯ ಔಷಧೀಯ ಅಂಶಗಳಿರುವ ಪದಾರ್ಥಗಳನ್ನು ಉಪಯೋಗಿಸಿ ಸೂಕ್ತ ಚರ್ಮ ಆರೈಕೆ ಮಾಡಿಕೊಳ್ಳಬಹುದು.

ಹೀಗೆ ಮಾಡಿಕೊಳ್ಳುವ ಮೊದಲು ಚರ್ಮ ಯಾವ ಬಗ್ಗೆಯದ್ದು; ಜಿಡ್ಡಿನ ಚರ್ಮವಾ? ಒಣ ಚರ್ಮವಾ?ಎಂಬುದನ್ನು ಗಮನಿಸಿ, ಯಾವುದರ ಅಲರ್ಜಿ ಇದೆ? ಎಂಬುದರ ಅರಿವಿಟ್ಟುಕೊಂಡು ಮುಂದುವರಿಯುವುದು ಸೂಕ್ತ.

ಬೇಸಿಗೆಯಲ್ಲಿ ಬಹುತೇಕರ ಮನೆಯಲ್ಲಿ ಲಭ್ಯವಿರುವ ಐಸ್‌ಕ್ಯೂಬ್‌ಗಳಿಂದ ಚರ್ಮದ ಆರೈಕೆ ಮಾಡಿಕೊಳ್ಳಬಹುದು. ಸ್ಕಿನ್ ಐಸಿಂಗ್ ಎಂದು ಕರೆಯುವ ಈ ಆರೈಕೆ ಪದ್ಧತಿಯಲ್ಲಿ ಬೇಕಿರುವುದು ಐಸ್‌ಕ್ಯೂಬ್‌ಗಳು ಮಾತ್ರ.

ಮಾಡುವುದು ಹೇಗೆ?: ಕೆನ್ನೆ, ಮೂಗು, ಹಣೆ ಮೇಲೆ ಐಸ್ ಕ್ಯೂಬ್‌ಗಳನ್ನು ವೃತ್ತಾಕಾರದಲ್ಲಿ ಮೆದುವಾಗಿ ಉಜ್ಜಿ. ಇದರಿಂದ ಚರ್ಮದಲ್ಲಿ ಗುಳಿಗಳಾಗಿದ್ದರೆ, ಸೆಕೆ ಬೊಕ್ಕೆಗಳಿದ್ದರೆ ತಕ್ಷಣಕ್ಕೆ ಪರಿಹಾರ ಸಿಗುತ್ತದೆ. ಸೂರ್ಯನ ಕಿರಣಗಳಿಂದ ಚರ್ಮ ಸುಟ್ಟಿದ್ದರೆ, ಚರ್ಮದಲ್ಲಿ ಆಗಾಗ್ಗೆ ಜಿಡ್ಡಿನಂಶ ಉತ್ಪತ್ತಿಯಾಗುತ್ತಿದ್ದರೆ, ಈ ಸ್ಕಿನ್ ಐಸಿಂಗ್ ಉತ್ತಮ ಪರಿಹಾರ.

ನೆರಿಗೆ ಮೂಡುತ್ತಿದ್ದರೆ ವಾರದಲ್ಲಿ ಎರಡು ಬಾರಿಯಾದರೂ ಹೀಗೆ ಮಾಡುವುದರಿಂದ ಚರ್ಮ ಸುಕ್ಕುಗಟ್ಟುವುದನ್ನು ತಪ್ಪಿಸಬಹುದು. ಜತೆಗೆ ಚರ್ಮ ಕಾಂತಿಯುಕ್ತವಾಗಿಡಲು ಇದು ನೆರವಾಗುತ್ತದೆ.

ಅತಿ ಬಳಕೆ ಸಲ್ಲ: ಐಸ್‌ಕ್ಯೂಬ್‌ಗಳನ್ನು ಅತಿಯಾಗಿ ಬಳಸಿದರೆ ಚರ್ಮದ ಅಂಗಾಂಶ ಹಾನಿಯಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಬಗ್ಗೆ ಎಚ್ಚರಿಕೆ ವಹಿಸುವುದು ಮುಖ್ಯ.

ಹಲ ಬಗೆಯ ಐಸ್‌ಕ್ಯೂಬ್‌ಗಳನ್ನು ಮನೆಯಲ್ಲಿ ತಯಾರಿಸಬಹುದು: ಸೌತೆಕಾಯಿ ಕ್ಯೂಬ್, ಪುದೀನಾ. ರೋಸ್ ವಾಟರ್, ಕೇಸರಿ ದಳಗಳು, ಆಲೊವೆರಾ, ಅರಿಶಿನ ಪುಡಿ, ಕಾಫಿ ಪುಡಿ ಐಸ್‌ಕ್ಯೂಬ್‌ಗಳನ್ನು ತಯಾರಿಸಿಯೂ ಬಳಸಬಹುದು. ಉದಾಹರಣೆಗೆ ಸಾಮಾನ್ಯ ನೀರಿಗೆ ಸೌತೆಕಾಯಿ ರಸವನ್ನು ಸೇರಿಸಿ, ಫ್ರಿಜರ್‌ನಲ್ಲಿಟ್ಟರೆ ಐಸ್‌ಕ್ಯೂಬ್ ಸಿದ್ಧಗೊಳ್ಳುತ್ತದೆ.



ಮನೆಯಲ್ಲಿ ರಜೆ ಕಳೆಯುವ ಬಗೆ

ರಶ್ಮಿ ಎಸ್

ಕವಡೆ, ಬಳೆಚೂರು, ಹುಣಸೆಬೀಜ ಇವಿಷ್ಟಿದ್ದರೆ ನಮ್ಮ ಬೇಸಿಗೆ ರಜೆ ಕಳೆದುಹೋಗುತ್ತಿತ್ತು. ನೆತ್ತಿ ಸುಡುವಂಥ ಬಿಸಿಲಿನಲ್ಲಿ ಮಕ್ಕಳನ್ನು ಹಿಡಿದಿಡುವುದೇ ಕಷ್ಟ ಎನಿಸಿದರೆ ಈಗಲೂ ಒಳಾಂಗಣದ ಆಟಗಳನ್ನು ಪರಿಚಯಿಸಿ.

ಚೌಕಾಬಾರಾ: ಬದುಕಿನ ಹಲವಾರು ಭಾವನಾತ್ಮಕ ಗೊಂದಲಗಳನ್ನು ನಿರ್ವಹಿಸುವುದನ್ನು ಕಲಿಸುವ ಆಟ ಇದು. ಇಡೀ ಆಟ ನಮ್ಮ ಅದೃಷ್ಟವನ್ನೇ ಅವಲಂಬಿಸಿದ್ದರೂ, ನಮ್ಮ ವಿವೇಚನೆಯನ್ನೂ ಅದರೊಂದಿಗೆ ದ್ವಂದ್ವಕ್ಕೆ ಬಿಟ್ಟು ನಮ್ಮ ನಡೆಗಳನ್ನು ಸಮರ್ಥಿಸುತ್ತ ಸಾಗುವ ಆಟವಿದು. ಸ್ಪರ್ಧೆಯ ಜೊತೆಗೆ ಒಂದೇ ಆಟದಲ್ಲಿ ಹಲವಾರು ಏಳುಬೀಳುಗಳಿರುತ್ತವೆ. ಪ್ರತಿ ಸಮಯದಲ್ಲಿಯೂ ಗೆದ್ದಾಗ ಬೀಗದೆ, ಸೋತಾಗ ಕುಗ್ಗದೆ ಮರಳಿ ಯತ್ನವ ಮಾಡು ಎಂಬ ಪಾಠವನ್ನು ಚೌಕಾಬಾರಾ ಹೇಳಿಕೊಡುತ್ತದೆ. ಸಾಧ್ಯವಿದ್ದಾಗಲೆಲ್ಲ ಮನೆಯ ಹಿರಿಯರೂ ಮಕ್ಕಳೊಡಗೂಡಿ ಆಡಿದರೆ ನಮ್ಮ ಬಾಂಧವ್ಯವೂ ಗಟ್ಟಿಯಾಗುತ್ತದೆ.

ಚೌಕಾಬಾರಾ ಮನೆ ಎಣಿಸುವಾಗ ಮೌಖಿಕ ಗಣಿತದ ಕೌಶಲವೂ ಬೆಳೆಯುತ್ತದೆ. ಕಣ್ಣಳತೆಯಲ್ಲಿಯೇ ಲೆಕ್ಕ ಹಾಕುವುದು, ಬಾಯಿಲೆಕ್ಕ ಹಾಕುವುದು ಮಕ್ಕಳಿಗೆ ಕರಗತವಾಗುತ್ತದೆ. ಚೌಕಾಬಾರಾದ ಸ್ವರೂಪದಲ್ಲಿಯೇ ಇರುವ ಲುಡೊ ಸಹ ಆಡಬಹುದು. ಕವಡೆಗಳಿರದಿದ್ದಲ್ಲಿ ಹುಣಸೆ ಬೀಜವನ್ನು ತಿಕ್ಕಿ, ಒಂದು ಕಡೆಯ ಸಿಪ್ಪೆ ಸವೆಸಿ ಆಟವಾಡುವುದನ್ನು ಹೇಳಿಕೊಡಿ. ಕಾಯಿಗಳ ಲೆಕ್ಕದಲ್ಲಿ ಬಳೆಚೂರು, ಗಜಗ (ಇವು ಸಿಗುವುದು ಅಪರೂಪ), ಒಡೆದ ಹುಣಸೆಬೀಜ, ಪಿಸ್ತಾದ ಸಿಪ್ಪೆಗಳಿಗೆ ಬೇರೆ ಬೇರೆ ಬಣ್ಣ ಬಳಿದು ಬಳಸಲು ತಿಳಿಸಿ.

ಪಿಸ್ತಾದ ಸಿಪ್ಪೆಗಳ ಮೇಲೆ ಮಾರ್ಕರ್‌ಪೆನ್‌ನಿಂದ ತಮ್ಮದೇ ಹೆಸರನ್ನು ಬರೆದೂ ಕಸ್ಟಮೈಸ್ಡ್ ಕಾಯಿಗಳನ್ನು ಮಾಡಿಕೊಂಡು ಆಡಬಹುದು.

ಜೆಂಗಾ: ಸಹನೆ ಮತ್ತು ಸಂಯಮ ಹಾಗೂ ಸ್ಟ್ರಾಟೆಜಿಕ್ ಆಗಿ ಆಡುವುದನ್ನು ಹೇಳಿಕೊಡುತ್ತದೆ. ಆರು ಬಣ್ಣಗಳ ಒಂಬತ್ತು ಒಂಬತ್ತು ಚಕ್ಕೆಗಳ ಈ ಆಟ ಬ್ರಿಟಿಷ್ ಮೂಲದ್ದು. ಒಂದೊಂದು ಬಣ್ಣದ ಮೂರು ಮೂರು ಚಕ್ಕೆಗಳನ್ನು ಉದ್ದುದ್ದ, ಅಡ್ಡಡ್ಡ ಜೋಡಿಸುತ್ತ ಬರಬೇಕು. ಡೈಸ್ ಒಂದರಲ್ಲಿ ಆರು ಬಣ್ಣಗಳನ್ನು ಗುರುತಿಸಲಾಗಿರುತ್ತದೆ. ಯಾವ ಬಣ್ಣ ಬರುವುದೋ ಆ ಬಣ್ಣದ ಚಕ್ಕೆಯನ್ನು ನಿಧಾನವಾಗಿ ತೆಗೆಯಬೇಕು. ಹಾಗೆ ತೆಗೆಯುವಾಗ ಉಳಿದ ಬಣ್ಣಗಳನ್ನು ಮುಟ್ಟುವಂತಿಲ್ಲ.

ಮಕ್ಕಳು ಇತ್ತೀಚೆಗೆ ರೀಲ್ ನೋಡಿ ನೋಡಿ, ಸಿನಿಮಾ ನೋಡುವಷ್ಟು ಸಂಯಮವನ್ನೂ ಉಳಿಸಿಕೊಂಡಿಲ್ಲ ಎಂದು ದೂರುವವರಿಗೆ ಜೆಂಗಾ ಸಂಯಮದ ಪಾಠ ಹೇಳಿಕೊಡುತ್ತದೆ. ಜೊತೆಗೆ ವಿವೇಚನೆಯನ್ನೂ ಕಲಿಸಿಕೊಡುತ್ತದೆ. ಇಲ್ಲಿ ಸ್ಪರ್ಧಾರ್ತಿಯೆಂದರೆ ತನಗೆ ತಾನೇ ಆಗಿರುತ್ತಾನೆ. ಪ್ರತಿಸಲವೂ ಸಂಯಮವೇ ಶಸ್ತ್ರವಾಗಿರುತ್ತದೆ. ಸೋತಾಗ ಆಗುವ ಹತಾಶೆಯೂ ಕ್ಷಣಿಕ. ಇಲ್ಲಿ ಅಪಮಾನಕ್ಕೆ ಯಾವುದೇ ಆಸ್ಪದ ಇರುವುದಿಲ್ಲ. ಆದರೆ ಗೆಲುವಿನ ತಂತ್ರಗಳನ್ನು ಹೆಣೆಯುವಲ್ಲಿ ಚತುರರಾಗುತ್ತಾರೆ. ಇಬ್ಬರಿಂದ ಆರಂಭಿಸಿ, ಆರು ಜನರವರೆಗೂ ಆಡಬಹುದು. ಹೆಚ್ಚಾದರೂ ಆಡಬಹುದು. ಪ್ರತಿಸಲ ಒಬ್ಬರು ಸೋತಾಗಲೂ ಒಂದು ಬಣ್ಣದ ಮೂರು ಚಕ್ಕೆಗಳ ಒಂದು ಸೆಟ್ ಕಡಿಮೆ ಮಾಡುತ್ತ ಹೋಗಬಹುದು.

ಇವಲ್ಲದೆ ಅಳಗುಳಿ ಮಣೆ, ಪಗಡೆ, (ಚೀನಿ ಪದ್ಧತಿಯ) ಗೋಲಿ ಮಣೆ, ಬಹಳಷ್ಟು ಹುಣಸೆ ಬೀಜಗಳಿದ್ದಲ್ಲಿ ಸರಿ ಬೆಸ ಆಟಗಳನ್ನೂ ಆಡಿಸಬಹುದು. ಉನೊ ಮತ್ತು ಕಾರ್ಡುಗಳನ್ನು ಆಡುವುದು, ಹೌಸಿ ಆಡುವುದು, ಮೊನೊಪಲಿ ಆಡುವುದು ಇವೆಲ್ಲ ಮಕ್ಕಳಲ್ಲಿ ವ್ಯವಹಾರಿಕ ಚಾತುರ್ಯ ಬೆಳೆಸುತ್ತವೆ. ಹಣ ಕೂಡಿಡುವ ಮನೋಭಾವವನ್ನೂ. ಖರ್ಚು ಮಾಡುವಲ್ಲಿ ಎಚ್ಚರವನ್ನೂ ಬೆಳೆಸುತ್ತವೆ. ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿ ಬರುವ ಮಕ್ಕಳಿಗೆ ಎಲ್ಲಿದೆ ಈ ಒಳಾಂಗಣದ ಆಟಗಳಿಗೆ ಸಮಯ ಅಂತನಿಸಿದರೆ, ಇವನ್ನೆಲ್ಲ ಮಲಗುವ ಮುನ್ನ ಒಮ್ಮೆಯಾದರೂ ಆಟವಾಡಿಸಿ. ನೀವೂ ಬಿಡುವು ಮಾಡಿಕೊಳ್ಳಿ. ಮಧ್ಯಾಹ್ನ ಮತ್ತು ರಾತ್ರಿ ಈ ಆಟವನ್ನು ಆಡುವಾಗ ಮನೆಯನ್ನು ತಣ್ಣಗಿರಿಸಿ. ಹಿತವಾದ ಬೆಳಕಿರಲಿ. ಮಧ್ಯಾಹ್ನದ ಪುಟ್ಟ ನಿದ್ದೆಗೆ ಇದು ಸಹಕಾರಿಯಾಗಿರುತ್ತದೆ. ರಾತ್ರಿಯ ಗಾಢನಿದ್ದೆಗೂ ಮುನ್ನ ಮಕ್ಕಳು ನಗುತ್ತ ಮಲಗಿದರೆ ಚಂದದ ಬೆಳಗು ಅವರಿಗೆ ದೊರೆಯುತ್ತದೆ. ಮಲಗುವ ಮುನ್ನ ಇಂಥ ಆಟಗಳನ್ನು ಆಡಿ ಮಲಗಿದರೆ ಪ್ರಫುಲ್ಲವಾದ ಮನಸಿನಿಂದ ಏಳುವುದು ಅಭ್ಯಾಸವಾಗುತ್ತದೆ.

ಈ ಆಟಗಳನ್ನು ಆಡುವಾಗ ಮೆಲ್ಲಲು ಕಡಲೆ, ಹುರಿಗಡಲೆ, ಹುರಿದ ಸೇಂಗಾ, ಸೌತೆಕಾಯಿ, ಕಲ್ಲಂಗಡಿ, ಕರಬೂಜುಗಳೊಂದಿಗೆ ಕೂರಲು ತಿಳಿಸಿ. ಆಟವಾಡುತ್ತ ಇವುಗಳನ್ನು ಮೆಲ್ಲುತ್ತ ಮಕ್ಕಳ ಬಾಯ್ಚಟವನ್ನು ತೀರಿಸಬಹುದು. ಜೊತೆಗೆ ಆರೋಗ್ಯಕರ ತಿನಿಸು ಅವರ ಹೊಟ್ಟೆಗಿಳಿಯುತ್ತದೆ. ಆಗ ಸಂಜೆಯ ಕುರುಕಲುಗಳಿಗೆ ಮನಸು ಹಾತೊರೆಯುವುದು ಕಡಿಮೆಯಾಗುತ್ತದೆ. ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಆರೋಗ್ಯಗಳೆಲ್ಲವೂ ಸ್ವಾಸ್ಥ್ಯಮಯವಾಗುತ್ತವೆ.

ಮಕ್ಕಳ ಸ್ಕ್ರೀನ್ ಟೈಮ್ ಕಡಿತ ಆಗುವುದರ ಜೊತೆಗೆ ಅವರ ಮಾನಸಿಕ ಬೆಳವಣಿಗೆ ಸುರಕ್ಷಿತವಾಗಿರುತ್ತದೆ. ಸೋಲುಗೆಲುವನ್ನು ಸ್ವೀಕರಿಸುವುದನ್ನು ಕಲಿಯುತ್ತಾರೆ. ಭಾವೋದ್ವೇಗಕ್ಕೆ ಒಳಗಾಗುವುದು ಕಡಿಮೆಯಾಗುತ್ತದೆ. ಹತಾಶರಾದಾಗ, ನಿರಾಶರಾದಾಗ ಇನ್ನೊಂದು ಚಾನ್ಸ್ ಸಿಗಲಿದೆ ಎಂಬ ಆಶಾಭಾವನೆಯೊಂದಿಗೆ ಬದುಕು ಸ್ವೀಕರಿಸುತ್ತಾರೆ. ಆಟಗಳಾಡಬೇಕಿರುವುದು ಜೀವನ ಆನಂದಿಸಲು. ಜೀವನವೇ ಆಟವಾಗಬಾರದು ಎಂದೂ!

ಮಳೆಯ ವಾತಾವರಣ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಲ್ಲಲ್ಲಿ ಇನ್ನೆರಡು ದಿನ ಮಳೆಯ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶನಿವಾರ ಬೀದರ್, ಕೊಡಗು ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ಉಳಿದ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಳೆಯಾಗಲಿದೆ. ಭಾನುವಾರ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆ ಬೀಳುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ತಾಪಮಾನ: ಮುಂದಿನ ಎರಡು ದಿನಗಳಲ್ಲಿ ಗರಿಷ್ಠ ಉಷ್ಣಾಂಶದಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ. ನಂತರದ ಮೂರು ದಿನಗಳವರೆಗೆ ಕ್ರಮೇಣ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಕಲಬುರಗಿ ನಗರದಲ್ಲಿ ನಸುಕಿನಲ್ಲಿ ಸುರಿದ ಮಳೆ; ಬೀದರ್, ಔರಾದ್ ತಾಲ್ಲೂಕುಗಳಲ್ಲಿ ಸಿಡಿಲಿಗೆ ಇಬ್ಬರ ಸಾವು

ಕಾದ ಇಳೆಗೆ ತಂಪೆರೆದ ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ / ಚಿಕ್ಕಮಗಳೂರು / ಶಿವಮೊಗ್ಗ: ಚಿತ್ರದುರ್ಗ ನಗರ ಸೇರಿ ಜಿಲ್ಲೆಯ ಕೆಲ ಭಾಗಗಳಲ್ಲಿ ಶುಕ್ರವಾರ ಗುಡುಗು, ಸಿಡಿಲು ಸಹಿತ ಬಿರುಸಿನ ಮಳೆಯಾಗಿದ್ದರೆ, ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ಬೇಸಿಗೆಯ ಬಿರು ಬಿಸಿಲಿನಿಂದ ಬಸವಳಿದಿದ್ದ ಜನರ ಮೊಗದಲ್ಲಿ ಮಂದಹಾಸ ಮೂಡಿದೆ.

ಚಿಕ್ಕಜಾಜೂರಿನಲ್ಲಿ ಆಲಿಕಲ್ಲು ಮಳೆ ಸುರಿದಿದ್ದು, ಜನರು ಹರ್ಷ ವ್ಯಕ್ತಪಡಿಸಿದರು. ಬಿರುಗಾಳಿಗೆ ನೂರಾರು ಅಡಿಕೆ ಹಾಗೂ ತೆಂಗಿನ ಮರಗಳು, ವಿದ್ಯುತ್ ಕಂಬಗಳು ಬಿದ್ದಿವೆ. ಚಿತ್ರದುರ್ಗ ನಗರದಲ್ಲಿ 15 ನಿಮಿಷಗಳ ಕಾಲ ಜೋರಾಗಿ ಮಳೆ ಸುರಿಯಿತು.

ಶಿವಮೊಗ್ಗ ಜಿಲ್ಲೆಯ ಬಹುತೇಕ ಕಡೆ ಮಳೆಯಾಗಿದ್ದು ನಗರದಲ್ಲಿ ಅರ್ಧ ಗಂಟೆ ಉತ್ತಮ ಮಳೆ ಸುರಿಯಿತು. ಶಿಕಾರಿಪುರ, ರಿಪ್ಪನ್‌ಪೇಟೆ, ಕೋಣಂದೂರು, ಸೊರಬ ಸುತ್ತಮುತ್ತ ಮಳೆಯಾಗಿದೆ.

ದಾವಣಗೆರೆಯ ಹಲವೆಡೆ ಮಳೆ: ಜಿಲ್ಲೆಯ ಹೊನ್ನಾಳಿ, ನ್ಯಾಮತಿ, ತ್ಯಾವಣಿಗೆಯಲ್ಲಿ ಒಂದು ತಾಸಿಗೂ ಹೆಚ್ಚು ಸಮಯ ಉತ್ತಮ ಮಳೆಯಾಗಿದೆ. ದಾವಣಗೆರೆ ನಗರದಲ್ಲಿ ಬಿರುಗಾಳಿ, ಗುಡುಗು ಸಮೇತ ಸಾಧಾರಣ ಮಳೆ ಸುರಿಯಿತು. ಉತ್ತಮ ಮಳೆಯಾಗಿದ್ದರಿಂದ ಅನ್ನದಾತರು ಸಂಭ್ರಮಿಸಿದರು.

ಚಿಕ್ಕಜಾಜೂರಿನಲ್ಲಿ ಶುಕ್ರವಾರ ಬಿರುಸಿನ ಮಳೆ ಸುರಿಯಿತು

ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಾಗಿದೆ. ಆಲ್ದೂರು ಸುತ್ತಮುತ್ತ ಆಲಿಕಲ್ಲು ಸಹಿತ ಮಳೆ ಸುರಿದಿದ್ದು, ಬಿಸಿಲಿನಲ್ಲಿ ಬೆಳೆ ಉಳಿಸಿಕೊಳ್ಳಲು ಪರದಾಡುತ್ತಿದ್ದ ಕಾಫಿ ಬೆಳೆಗಾರರು ನಿಟ್ಟುಸಿರು ಬಿಟ್ಟಿದ್ದಾರೆ.

ಮಾವಿನಗುಣಿ, ಆಲ್ದೂರು, ಅರೇನೂರು, ಕೆಳಗೂರು, ಶಂಕರ್ ಫಾಲ್ಸ್ ಸುತ್ತಮುತ್ತ ಮಳೆಯಾಗಿದೆ. ಕಾಫಿ ಗಿಡಗಳಲ್ಲಿ ಮೊಗ್ಗು ಅರಳಿ ಕಾಯಿ ಕಟ್ಟುವಿಕೆಗೆ ಈ ಮಳೆ ಅನುಕೂಲವಾಗಿದೆ. ಎನ್.ಆರ್.ಪುರ, ಬಾಳೆಹೊನ್ನೂರು ಸುತ್ತಮುತ್ತ ಗುಡುಗು ಸಹಿತ ಸಾಧಾರಣ ಮಳೆ ಸುರಿಯಿತು. ಚಿಕ್ಕಮಗಳೂರು ನಗರ, ಕಡೂರು, ತರೀಕೆರೆ ಸುತ್ತಮುತ್ತ ತುಂತುರ ಮಳೆ ಸುರಿದು ತಂಪೆರೆಯಿತು. ಗುರುವಾರ ರಾತ್ರಿ ಎನ್.ಆರ್.ಪುರ ತಾಲ್ಲೂಕಿನ ಹಲವೆಡೆ ಧಾರಾಕಾರ ಮಳೆಯಾಗಿದ್ದು, ಸಾಲು -ಸಾಲು ಮರಗಳು, ವಿದ್ಯುತ್ ಕಂಬಗಳು ಉರುಳಿವೆ. ಬಾಳೆ ತೋಟವೊಂದು ಸಂಪೂರ್ಣ ಹಾಳಾಗಿದೆ.

ಸಿಡಿಲು ಬಡಿದು ಇಬ್ಬರ ಸಾವು (ಬೀದರ್ ವರದಿ): ಬೀದರ್ ತಾಲ್ಲೂಕು ಹಾಗೂ ಔರಾದ್ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಶುಕ್ರವಾರ ಮಳೆಯಾಗಿದೆ.

ಬೀದರ್ ತಾಲ್ಲೂಕಿನ ಬರೂರ ಗ್ರಾಮದ ಜಮೀನಿನಲ್ಲಿ ಮಧ್ಯಾಹ್ನ ಪುಷ್ಪಲತಾ ರವೀಂದ್ರ ರೆಡ್ಡಿ (50) ಅವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಔರಾದ್ ತಾಲ್ಲೂಕಿನ ಚಿಕ್ಲಿ (ಜೆ) ತಾಂಡಾ ನಿವಾಸಿ ಭೀಮಲಾ (70) ಸಂಜೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಚಿಂತಾಕಿ ಹಾಗೂ ವಡಗಾಂವ್ ಹೋಬಳಿಯಲ್ಲಿ ಸಂಜೆ ಗಾಳಿ ಸಹಿತ ಮಳೆಯಾಗಿದೆ. ಬೀದರ್, ಭಾಲ್ಕಿ ತಾಲ್ಲೂಕಿನಲ್ಲಿ ಶುಕ್ರವಾರ ಮಧ್ಯಾಹ್ನ ಕೆಲ ಕಾಲ ತುಂತುರು ಮಳೆಯಾಗಿದೆ. ಕಲಬುರಗಿ ನಗರದಲ್ಲಿ ಬೆಳಗಿನ ಜಾವ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದು, ವಾತಾವರಣವನ್ನು ತುಸು ತಂಪು ಮಾಡಿದೆ. ಚಿಂಚೋಳಿ, ಆಳಂದದಲ್ಲೂ ಕೆಲ ಕಾಲ ಮಳೆಯಾಗಿದೆ.

ಮೈಸೂರಲ್ಲೂ ಮಳೆ ಜೋರು

ಮೈಸೂರು: ಮೈಸೂರು ಭಾಗದ ಕೊಡಗು, ಚಾಮರಾಜನಗರ, ಹಾಸನ ಮತ್ತು ಮಂಡ್ಯದಲ್ಲಿ ಶುಕ್ರವಾರ ಕೆಲಹೊತ್ತು ಗುಡುಗು ಸಹಿತ ಮಳೆಯಾಯಿತು. ಮಳೆ ನಿರೀಕ್ಷೆಯಲ್ಲಿದ್ದ ರೈತರಲ್ಲಿ ಹರ್ಷ ಮೂಡಿತು.

ಕೊಡಗು ಜಿಲ್ಲೆಯ ನಾಪೋಕ್ಲು ಪಟ್ಟಣದ ಸುತ್ತಮುತ್ತ, ಬೇತು, ಕೊಟ್ಟಮುಡಿ, ಬಲಮುರಿ, ಪಾಲೂರು ಸೇರಿದಂತೆ ಹಲವೆಡೆ ಸುಮಾರು 30 ನಿಮಿಷಗಳ ಕಾಲ ಮಳೆ ಸುರಿಯಿತು. ಬೇತು ಗ್ರಾಮ ವ್ಯಾಪ್ತಿಯಲ್ಲಿ 2 ಸೆಂ.ಮೀ ಮಳೆಯಾಗಿದೆ. ಸುಂಟಿಕೊಪ್ಪ ವ್ಯಾಪ್ತಿಯಲ್ಲಿಯೂ ಮಳೆಯಾಯಿತು. ಮಳೆಯಿಂದಾಗಿ ಇಲ್ಲಿನ ಚೆರಿಯಪರಂಬುವಿನ ಜನರಲ್ ಕೆ.ಎಸ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕುಂಡ್ಯೋಳಂಡ ಕಪ್ ಹಾಕಿ ಪಂದ್ಯಾವಳಿಗೆ ಅಡ್ಡಿಯಾಯಿತು. ಸಮೀಪದ ಪಾಲೂರು ಗ್ರಾಮದಲ್ಲಿ ವಾರ್ಷಿಕ ಉತ್ಸವದ ನೃತ್ಯಬಲಿಯನ್ನು ಮಳೆಯಲ್ಲಿಯೇ ಗ್ರಾಮಸ್ಥರು ನೆರವೇರಿಸಿದರು.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕೇಂದ್ರ ಸ್ಥಾನ ಸೇರಿದಂತೆ ತಾಲ್ಲೂಕಿನ ಪಾರೆಕೊಪ್ಪಲು, ಅಂಕನಹಳ್ಳಿ, ಕಿರನಲ್ಲಿ, ಹರವೆ ಮಲ್ಲರಾಜ ಪಟ್ಟಣ, ಹುಣಸೇಕುಪ್ಪೆ, ಮೆಲ್ಲಹಳ್ಳಿ, ಹುಣಸೂರು ತಾಲ್ಲೂಕಿನ ಹನಗೋಡಿನಲ್ಲಿ ಬಿರುಸು ಮಳೆಯಾಯಿತು. ಶುಂಠಿ, ತಂಬಾಕು, ಬಾಳೆ, ರಾಗಿ ಬೆಳೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಿದ್ದರಿಂದ ರೈತರಲ್ಲಿ ಹರ್ಷ ಮೂಡಿತು. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ಹತ್ತು ನಿಮಿಷಗಳ ಕಾಲ ಮಳೆಯಾಯಿತು.

ಮಂಡ್ಯ ಜಿಲ್ಲೆಯ ನಾಗಮಂಗಲ ಹಾಗೂ ಸುತ್ತಮುತ್ತ ಹಳ್ಳಿಗಳಲ್ಲಿ ಗುಡುಗು ಮಿಂಚು ಸಹಿತ ಸುಮಾರು ಒಂದು ಗಂಟೆ ಸುರಿದ ಮಳೆಯಿಂದ ಸಂಭ್ರಮಿಸಿದರು. ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಸುರಿಯುವ ಮಳೆಯ ನಡುವೆಯೇ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಜನ ಪಾಲ್ಗೊಂಡರು. ಚನ್ನರಾಯ ಪಟ್ಟಣ, ಹಾಸನ, ಮೈಸೂರು ನಗರದಲ್ಲೂ ಮಳೆಯಾಯಿತು.

ಅಶೋಕ ಚಂದರಗಿಗೆ 'ಕರ್ನಾಟಕ ಚೂಡಾಮಣಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿ ನೀಡುವ 'ಕರ್ನಾಟಕ ಚೂಡಾಮಣಿ' ಪ್ರಶಸ್ತಿಗೆ ಕನ್ನಡಪರ ಹೋರಾಟಗಾರ ಅಶೋಕ ಚಂದರಗಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು, ಫಲಕ ಒಳಗೊಂಡಿದೆ.

ಏಪ್ರಿಲ್ 21ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಲೇಖಕಿ ವೀಣಾ ಶಾಂತೇಶ್ವರ, ಕ್ರಿಯಾ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಮನು ಬಳಿಗಾರ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_Ashok Leyland Dost GOODS
YOM – 2023
Reg No – KA41D6988
2) CB_Tata LP 709 Fully Built
YOM – 2022
Reg No – KA01AN9786
3) CB_16_HD_FULLY_BUILT _TIPPER_SIGNA_2823 _TATA_MOTORS
YOM – 2020
Reg No – KA35C7542
4) TATA MOTORS LTD. - TATA_LP_912_BUS
YOM – 2017
Reg No – KA479417
5) TATA MOTORS LTD. - TATA_LP_912_BUS
YOM – 2017
Reg No – KA479419
6) TATA MOTORS LTD. - TATA_LP_912_BUS
YOM – 2017
Reg No – KA479418
7) CB_LPT1212_TATAMOTORS
YOM – 2021
Reg No – KA02AH8124

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 20.04.2024

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE,
KARNATAKA – 560001
OR
Contact: Muzzammilkhan N
Kotak Mahindra Bank Ltd.
Contact / 080 - 61564249

ಸಿಇಟಿ: ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳು 59

ಪಿಯು ಇಲಾಖೆ–ಪರೀಕ್ಷಾ ಪ್ರಾಧಿಕಾರ ಮಧ್ಯೆ ಆರೋಪ, ಪ್ರತ್ಯಾರೋಪ • ವಿದ್ಯಾರ್ಥಿಗಳಿಂದ ವ್ಯಾಪಕ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಠ್ಯ ಹೊರತಾದ ಒಟ್ಟು 59 ಪ್ರಶ್ನೆಗಳನ್ನು ಕೇಳಿರುವುದಕ್ಕೆ ವಿದ್ಯಾರ್ಥಿಗಳಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಏ. 18ರಂದು ನಡೆದ ಜೀವ ವಿಜ್ಞಾನ ಪ್ರಶ್ನೆ ಪತ್ರಿಕೆಯಲ್ಲಿ 13, ಗಣಿತದಲ್ಲಿ 16, 19ರಂದು ನಡೆದ ಭೌತ ವಿಜ್ಞಾನದಲ್ಲಿ 9 ಹಾಗೂ ರಸಾಯನ ವಿಜ್ಞಾನದಲ್ಲಿ 21 ಪ್ರಶ್ನೆಗಳು ಕಳೆದ ವರ್ಷ ಪಠ್ಯಕ್ರಮದಿಂದ ಕೈಬಿಟ್ಟಿದ್ದ ಪಾಠಗಳಿಗೆ ಸಂಬಂಧಿಸಿವೆ. ಜತೆಗೆ, ಭೌತವಿಜ್ಞಾನದಲ್ಲಿ ಅಸಮರ್ಪಕ ಮಾಹಿತಿಯ ಎರಡು ಪ್ರಶ್ನೆಗಳಿವೆ. ಈ ಪ್ರಮಾದ, ಪರೀಕ್ಷೆ ನಡೆಸುವ ಹೊಣೆ ಹೊತ್ತ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಮಧ್ಯೆ ಪತ್ರ ಸಮರಕ್ಕೆ ದಾರಿ ಮಾಡಿಕೊಟ್ಟಿದೆ.

> **ಪ್ರಶ್ನೆಗಳ ಗೊಂದಲ ಕುರಿತು ವಿದ್ಯಾರ್ಥಿಗಳು ಏ. 20ರಿಂದ 27 ಸಂಜೆ 5.30 ರವರೆಗೆ ಆಕ್ಷೇಪಣೆ ಸಲ್ಲಿಸಬಹುದು. ಪ್ರಾಧಿಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ**
> **ಎಸ್. ರಮ್ಯಾ**
> ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ.

ಪ್ರಮಾದದ ನಂತರ ಎಚ್ಚೆತ್ತುಕೊಂಡ ಕೆಇಎ, ಪದವಿ ಪೂರ್ಣ ಶಿಕ್ಷಣ ಇಲಾಖೆಗೆ ಪತ್ರ ಬರೆದು, ವಿಜ್ಞಾನ ವಿಷಯಗಳ ಪಠ್ಯಕ್ರಮ ಕುರಿತು ವಿವರ ನೀಡುವಂತೆ ಕೋರಿತ್ತು. ಅದಕ್ಕೆ ಪ್ರತಿಕ್ರಿಯಿಸಿರುವ ಇಲಾಖೆ ನಿರ್ದೇಶಕಿ ಸಿಂಧು ರೂಪೇಶ್, 'ಎನ್‌ಸಿಇಆರ್‌ಟಿ ಕಾಲಕಾಲಕ್ಕೆ ಪರಿಷ್ಕರಿಸುವ ವಿಜ್ಞಾನ ವಿಷಯಗಳ ಪಠ್ಯಗಳನ್ನೇ ಅಳವಡಿಸಿಕೊಳ್ಳಲಾಗಿದೆ. ಈ ಪ್ರಕಾರವೇ 2024ನೇ ಸಾಲಿನ ಸಿಇಟಿ ನಡೆಸಲಾಗುತ್ತದೆ ಎಂಬ ಪ್ರಾಧಿಕಾರದ ಸ್ಪಷ್ಟನೆಯ ನಂತರವೇ ಆದೇಶ ಹೊರಡಿಸಲಾಗಿತ್ತು. ಈ ವಿಷಯದಲ್ಲಿ ಇಲಾಖೆ ಪ್ರಮಾದ ಎಸಗಿಲ್ಲ' ಎಂದಿದ್ದಾರೆ.

'ಕಡಿತಗೊಂಡ ಪಠ್ಯಕ್ರಮ ಹೊರತು ಪಡಿಸಿ, ಹೊಸ ಪಠ್ಯಕ್ರಮದ ಪ್ರಕಾರವೇ ಸಿಇಟಿ ಪರೀಕ್ಷೆಗಳು ನಡೆಯುತ್ತವೆ ಎಂದು ಪಿಯು ಮಂಡಳಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದರೂ, ಹಳೆಯ ಪಠ್ಯಕ್ರಮದ ಆಧಾರದಲ್ಲೇ ವಿಷಯ ತಜ್ಞರು ಪ್ರಶ್ನೆಗಳನ್ನು ಸಿದ್ಧಪಡಿಸಿದ್ದಾರೆ. ಇದರಿಂದ ಪ್ರಮಾದವಾಗಿದೆ' ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಕೆಇಎ ಅಧಿಕಾರಿಯೊಬ್ಬರು.

'ಪ್ರತಿ ವಿಷಯದಲ್ಲೂ 60 ಪ್ರಶ್ನೆಗಳು ಇರುತ್ತವೆ. ಪ್ರತಿ ವಿಷಯದಲ್ಲೂ ಸರಾಸರಿ ಶೇ 25ರಷ್ಟು ಪ್ರಶ್ನೆಗಳು ಪಠ್ಯ ಹೊರತಾಗಿ ಬಂದಿದ್ದರಿಂದ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗಿದ್ದಾರೆ. ಹಲವರು ಗೊಂದಲ ಮಾಡಿಕೊಂಡು ಉಳಿದ ಪ್ರಶ್ನೆಗಳಿಗೂ ಉತ್ತರಿಸಿಲ್ಲ. ಇಂತಹ ತಪ್ಪುಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಡ್ಡಿಯಾಗುತ್ತದೆ' ಎನ್ನುತ್ತಾರೆ ಶಿವಮೊಗ್ಗ ಆದಿಚುಂಚನಗಿರಿ ಪಿಯು ಕಾಲೇಜು ಪ್ರಾಂಶುಪಾಲ ಗುರುರಾಜ್.

'ಕೆಇಎ ಏ. 20ರಿಂದ ಆಕ್ಷೇಪಣೆ ಸಲ್ಲಿಸಲು ಹೇಳಿದೆ. ಪ್ರಾಧಿಕಾರ ತಪ್ಪು ಒಪ್ಪಿಕೊಂಡು ಗ್ರೇಸ್ ಅಂಕ ನೀಡಿದರೂ, ಎಲ್ಲರಿಗೂ ಸಮಾನವಾಗಿ ದೊರಕುತ್ತವೆ. ಇದರಿಂದ ಪ್ರತಿಭಾವಂತರಿಗೆ ಅನ್ಯಾಯವಾಗುತ್ತದೆ. ಮರು ಪರೀಕ್ಷೆ ನಡೆಸಿದರೆ ಬಹಳಷ್ಟು ವಿದ್ಯಾರ್ಥಿಗಳಿಗೆ ಮೊದಲಿದ್ದ ಆಸಕ್ತಿ ಇರವುದಿಲ್ಲ' ಎಂದು ಬೆಂಗಳೂರಿನ ವಿದ್ಯಾರ್ಥಿ ವಿಶ್ವಜಿತ್ ಪ್ರತಿಕ್ರಿಯಿಸಿದರು.

'ಸಿಇಟಿ ಗೊಂದಲಕ್ಕೆ ಸಂಬಂಧಿಸಿ ಕೆಇಎಗೆ ಪತ್ರ ಬರೆಯಲಾಗುತ್ತದೆ. ಇದು ಗಂಭೀರ ಲೋಪ. ಕೆಇಎ ನಡೆ ಆಧರಿಸಿ ನಾವು ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಕರ್ನಾಟಕ ರಾಜ್ಯ ಅನುದಾನರಹಿತ ಪದವಿಪೂರ್ವ ಕಾಲೇಜುಗಳ ಒಕ್ಕೂಟದ ಅಧ್ಯಕ್ಷ ಮೋಹನ ಆಳ್ವ ಹಾಗೂ ಕಾರ್ಯದರ್ಶಿ ನರೇಂದ್ರ ನಾಯಕ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮರು ಪರೀಕ್ಷೆ ನಡೆಸಬೇಕು ಇಲ್ಲವೇ ಪಿಯು ಅಂಕಗಳ ಆಧಾರದ ಮೇಲೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ನೀಡಬೇಕು' ಎಂದು ಕರ್ನಾಟಕ ಖಾಸಗಿ ಶಾಲಾ–ಕಾಲೇಜುಗಳ ಪೋಷಕರ ಸಂಘದ ಅಧ್ಯಕ್ಷ ಬಿ.ಎನ್.ಯೋಗಾನಂದ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದಾರೆ.

ತಗಡಿನ ಶೆಡ್‌ನಲ್ಲಿ ಪರೀಕ್ಷೆ

ಜೇವರ್ಗಿ: ಇಲ್ಲಿನ ನೂರಂದೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ತಗಡಿನ ಶೆಡ್‌ನಲ್ಲಿ ಪರೀಕ್ಷೆ ನಡೆಸಲಾಗಿದೆ. ಬಿಸಿಲಿನ ತಾಪಕ್ಕೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಪರದಾಡಿದ್ದಾರೆ.

ಪಟ್ಟಣದ ಚನ್ನೂರ ರಸ್ತೆಯಲ್ಲಿರುವ ನೂರಂದೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಸಿಇಟಿ ಕೇಂದ್ರ ನೀಡಲಾಗಿದ್ದು ಒಟ್ಟು 26 ಕೊಠಡಿಗಳಲ್ಲಿ 21 ಕೋಣೆಗಳು ಸುವ್ಯವಸ್ಥೆಯಿಂದ ಕೂಡಿದ್ದರೂ, ಶೆಡ್‌ನಲ್ಲಿ ಪರೀಕ್ಷೆ ಬರೆಸಲಾಗಿದೆ. ಶುಕ್ರವಾರ ಜೇವರ್ಗಿಯಲ್ಲಿ 43 ಡಿಗ್ರಿ ಸೆಲ್ಸಿಯಸ್ ಬಿಸಿಲಿದ್ದು, ತಾಪಕ್ಕೆ ವಿದ್ಯಾರ್ಥಿಗಳು ಬಸವಳಿದು ಹೋದರು.

ಚಿಕ್ಕಬಳ್ಳಾಪುರ, ಬೆಂಗಳೂರಲ್ಲಿ ಮೋದಿ ಪ್ರಚಾರ ಇಂದು

ಒಂದನೇ ಪುಟದಿಂದ...

'ಬೆಂಗಳೂರು ಅರಮನೆ ಮೈದಾನದ ಕಾರ್ಯಕ್ರಮಕ್ಕೆ 60 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಸುಮಾರು ಒಂದೂವರೆ ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಎಲ್ಲ ಕಡೆಗಳಲ್ಲೂ ವಿಶಾಲ ಎಲ್‌ಇಡಿ ಪರದೆ ಅಳವಡಿಸಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ಕಾರ್ಯಕರ್ತರಲ್ಲದೇ ಮೋದಿ ಅಭಿಮಾನಿಗಳನ್ನೂ ಈ ಕಾರ್ಯಕ್ರಮದಲ್ಲಿ ಸೇರಿಸುವ ಪ್ರಯತ್ನ ಕಳೆದ ಕೆಲವು ದಿನಗಳಿಂದ ನಡೆದಿದೆ. ಮೋದಿ ಬೆಂಬಲಿಗರಾದ ಅನಿವಾಸಿ ಭಾರತೀಯರೂ ಈ ಸಭೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಲಿದ್ದಾರೆ. ಬೆಂಗಳೂರು ನಗರ ಮತ್ತು ಗ್ರಾಮಾಂತರದಿಂದ ಬರುವ ಕಾರ್ಯಕರ್ತರಿಗೆ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. 15 ಸಾವಿರ ವಿಶೇಷ ಆಹ್ವಾನಿತರಿಗೆ ಪಾಸ್ ನೀಡಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಕರುಣೆಗಿಂತ ಮಿಗಿಲಾದ ಗುಣವಿಲ್ಲ, ಹೇಡಿತನಕ್ಕಿಂತ ಮಿಗಿಲಾದ ರೋಗವಿಲ್ಲ.

–ಚಾಣಕ್ಯ

ಚುನಾವಣಾ ಬಾಂಡ್‌ಗೆ ಸಮರ್ಥನೆ ಪ್ರಧಾನಿ ಮಾತು ದುರದೃಷ್ಟಕರ

ಸುಪ್ರೀಂ ಕೋರ್ಟ್ ಈ ವರ್ಷದ ಫೆಬ್ರುವರಿ ತಿಂಗಳಿನಲ್ಲಿ ರದ್ದುಗೊಳಿಸಿದ ಚುನಾವಣಾ ಬಾಂಡ್ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಮರ್ಥಿಸಿಕೊಂಡಿದ್ದು ಹಾಗೂ ಆ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಸೂಕ್ತವಾದ ನಡೆ ಅಲ್ಲ. ಕೋರ್ಟ್ ತೀರ್ಪಿನ ಪರಿಣಾಮದಿಂದಾಗಿ, ರಾಜಕೀಯ ಪಕ್ಷಗಳಿಗೆ ಹಣ ದೇಣಿಗೆ ನೀಡುವಾಗ ಕಪ್ಪುಹಣವನ್ನು ಬಳಸುವುದು ಹೆಚ್ಚಾಗುವ ಸಾಧ್ಯತೆ ಇದೆ ಎಂಬ ಅರ್ಥದ ಮಾತನ್ನು ಮೋದಿ ಅವರು ಆಡಿದ್ದಾರೆ. 2017ರಲ್ಲಿ ಚುನಾವಣಾ ಬಾಂಡ್ ಯೋಜನೆಯು ಜಾರಿಗೆ ಬರುವುದಕ್ಕೆ ಮೊದಲು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ವಿಚಾರವಾಗಿ ಇದ್ದ ವ್ಯವಸ್ಥೆಯನ್ನು ಉಲ್ಲೇಖಿಸಿ ಅವರು ಈ ಮಾತು ಆಡಿದ್ದಾರೆ. 'ಪ್ರಾಮಾಣಿಕವಾಗಿ ಆಲೋಚನೆ ಮಾಡಿದಾಗ, ಎಲ್ಲರೂ ಒಂದು ದಿನ ವಿಷಾದಪಡಬೇಕಾಗುತ್ತದೆ' ಎಂದು ಕೂಡ ಅವರು ಹೇಳಿದ್ದಾರೆ. ಕೋರ್ಟ್ ತೀರ್ಪು ಬಂದ ನಂತರವೂ ಬಿಜೆಪಿಯು ಚುನಾವಣಾ ಬಾಂಡ್ ಯೋಜನೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಆದರೆ, ಪ್ರಧಾನಿ ಮೋದಿ ಅವರು ಇಷ್ಟು ಸಮಗ್ರವಾಗಿ ಈ ಯೋಜನೆಯನ್ನು ಸಮರ್ಥಿಸಿಕೊಳ್ಳಲು ಮುಂದಾಗಿದ್ದು ಇದೇ ಮೊದಲು. ರಾಜಕೀಯ ಪಕ್ಷ ಹಾಗೂ ಅದರ ಮುಖಂಡರು ಕಾನೂನೊಂದನ್ನು ಸಮರ್ಥಿಸಿಕೊಳ್ಳಲು, ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಳ್ಳಲು ಅಥವಾ ಕೋರ್ಟ್ ತೀರ್ಪನ್ನು ಟೀಕಿಸಲು ಮುಂದಾಗುವುದು ಒಂದು ಬಗೆ. ಆದರೆ, ಕೋರ್ಟ್ ರದ್ದುಪಡಿಸಿದ ಯೋಜನೆಯೊಂದನ್ನು ಪ್ರಧಾನಿಯವರು ಸಮರ್ಥಿಸಿಕೊಳ್ಳಲು ಮುಂದಾಗುವುದು ಸಂಪೂರ್ಣವಾಗಿ ಇನ್ನೊಂದು ಬಗೆ.

'ಅಸಾಂವಿಧಾನಿಕ' ಎಂದು ಸುಪ್ರೀಂ ಕೋರ್ಟ್ ಘೋಷಿಸಿರುವ, ವ್ಯಾಪಕವಾಗಿ ದುರ್ಬಳಕೆ ಆಗಿರುವ ಯೋಜನೆಯೊಂದನ್ನು ಪ್ರಧಾನಿ ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರ

ಪ್ರಧಾನಿಯವರ ವಾದವು ಸರಿಯಾಗಿಲ್ಲ, ಸೂಕ್ತವಾಗಿಯೂ ಇಲ್ಲ. ಹಿಂದೆ ಜಾರಿಯಲ್ಲಿ ಇದ್ದ ವ್ಯವಸ್ಥೆಗಿಂತ ಚುನಾವಣಾ ಬಾಂಡ್ ವ್ಯವಸ್ಥೆಯು ಹೆಚ್ಚು ಪಾರದರ್ಶಕ ಆಗಿತ್ತು ಎಂದು ಪ್ರಧಾನಿ ಹೇಳಿದ್ದಾರೆ. ಆದರೆ, ಈ ಯೋಜನೆಯಲ್ಲಿ ಪಾರದರ್ಶಕತೆ ಇಲ್ಲ ಎಂಬುದೇ ಸುಪ್ರೀಂ ಕೋರ್ಟ್ ಅದನ್ನು ರದ್ದುಪಡಿಸುವುದಕ್ಕೆ ಮುಖ್ಯವಾದ ಒಂದು ಕಾರಣ. ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದವರು ಯಾರು ಎಂಬುದನ್ನು ತಿಳಿಯುವ ಸಾರ್ವಜನಿಕರ ಹಕ್ಕನ್ನು ಈ ಯೋಜನೆಯು ಗೌರವಿಸುವುದಿಲ್ಲ, ಹಾಗಾಗಿ ಈ ಯೋಜನೆಯು ಪಾರದರ್ಶಕ ಅಲ್ಲ ಎಂದು ಕೋರ್ಟ್ ಹೇಳಿದೆ. ಕಪ್ಪುಹಣವನ್ನು ತಡೆಯುವ ಉದ್ದೇಶ ಕೂಡ ಇದೆ ಎಂದು ಈ ಯೋಜನೆಯ ಸಮರ್ಥನೆಗೆ ಸರ್ಕಾರ ಮುಂದಾದಾಗ, ಅದನ್ನು ತಳ್ಳಿಹಾಕಿದ ಸುಪ್ರೀಂ ಕೋರ್ಟ್, ಕಪ್ಪುಹಣವನ್ನು ನಿಯಂತ್ರಿಸುವುದಕ್ಕೆ ಪರ್ಯಾಯಗಳು ಲಭ್ಯವಿವೆ ಎಂದು ಹೇಳಿತ್ತು. ರಾಜಕೀಯ ಪಕ್ಷಗಳು ತಾವು ಸ್ವೀಕರಿಸುವ ದೇಣಿಗೆಯ ವಿವರಗಳನ್ನು ದಾಖಲಿಸದೇ ಇರುವುದಕ್ಕೆ ಹಾಗೂ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಎಷ್ಟು ಮೊತ್ತದ ಹಣವನ್ನಾದರೂ ದೇಣಿಗೆಯ ರೂಪದಲ್ಲಿ ನೀಡುವುದಕ್ಕೆ ಸರ್ಕಾರವು ಈ ಯೋಜನೆಯಲ್ಲಿ ಅವಕಾಶ ಕಲ್ಪಿಸಿಕೊಟ್ಟಿತ್ತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಂತಹ ಅವಕಾಶಗಳು ಪಾರದರ್ಶಕತೆಯ ಪರವಾಗಿ ಇರುವುದಿಲ್ಲ. ಅಲ್ಲದೆ, ಇಂತಹ ವ್ಯವಸ್ಥೆಗಳು ಆಳುವ ಪಕ್ಷದ ಪರವಾಗಿ ಕೆಲಸ ಮಾಡುತ್ತಿರುತ್ತವೆ.

ಚುನಾವಣಾ ಬಾಂಡ್ ಮೂಲಕ ಹಣವನ್ನು ದೇಣಿಗೆ ನೀಡಿದವರ ಹೆಸರುಗಳನ್ನು ಬಹಿರಂಗಪಡಿಸುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ಗೆ (ಎಸ್‌ಬಿಐ) ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ತಾಕೀತು ಮಾಡಿದ ನಂತರದಲ್ಲಿ ಬಹಿರಂಗವಾದ ವಿವರಗಳು, ಇಡೀ ಯೋಜನೆಯನ್ನು ರದ್ದುಪಡಿಸಿದ್ದಕ್ಕೆ ಸಮರ್ಥನೆಗಳನ್ನು ಒದಗಿಸಿಕೊಟ್ಟಿವೆ. ಯೋಜನೆಯ ದುರ್ಬಳಕೆ ಆಗಿದೆ ಎಂಬ ಆರೋಪಗಳನ್ನು ಅಲ್ಲಗಳೆದ ಪ್ರಧಾನಿಯವರು, ವಿರೋಧ ಪಕ್ಷಗಳು ಕೂಡ ಈ ಯೋಜನೆಯ ಮೂಲಕ ಕಂಪನಿಗಳಿಂದ ದೇಣಿಗೆ ಸ್ವೀಕರಿಸಿವೆ ಎಂದು ಹೇಳಿದ್ದಾರೆ. ಆದರೆ ಹಲವು ಕಂಪನಿಗಳು ತಮ್ಮ ಮೇಲೆ ಕೇಂದ್ರದ ತನಿಖಾ ಸಂಸ್ಥೆಗಳಿಂದ ದಾಳಿ ನಡೆದ ನಂತರದಲ್ಲಿ ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿವೆ ಎಂಬುದು ಕೂಡ ಈಗ ಬಹಿರಂಗವಾಗಿದೆ. ಈ ರೀತಿ ಆಗಿರುವುದನ್ನು ಬಾಂಡ್ ಯೋಜನೆಯ ದುರ್ಬಳಕೆ ಎಂದು ಮಾತ್ರವೇ ಅರ್ಥೈಸಲು ಸಾಧ್ಯ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳು ತಾವು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಯಾವುದೇ ಕಂಪನಿಗಳಿಗೆ ದೇಣಿಗೆ ನೀಡಲು ಒತ್ತಡ ತಂದಿದ್ದಲ್ಲಿ, ಅದು ಕೂಡ ಯೋಜನೆಯ ದುರ್ಬಳಕೆಯೇ ಆಗುತ್ತದೆ. ಸುಧಾರಣೆ ತಂದುಕೊಳ್ಳುವ, ಹೊಸದೊಂದು ವ್ಯವಸ್ಥೆಯನ್ನು ರೂಪಿಸುವ ಅಗತ್ಯ ಇದೆ ಎಂದು ಪ್ರಧಾನಿ ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ಮಾತು. ಆದರೆ 'ಅಸಾಂವಿಧಾನಿಕ' ಎಂದು ಸುಪ್ರೀಂ ಕೋರ್ಟ್ ಘೋಷಿಸಿರುವ ಹಾಗೂ ವ್ಯಾಪಕವಾಗಿ ದುರ್ಬಳಕೆ ಆಗಿರುವ ಯೋಜನೆಯೊಂದನ್ನು ಪ್ರಧಾನಿ ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರ.

ದಿನದ ಟ್ವೀಟ್

ಕಾರಣ ಕಂಡುಕೊಳ್ಳಬೇಕಿದೆ

ಸೂಕ್ತ ದಾಖಲೆಗಳಿಲ್ಲದೆ ಅಮೆರಿಕಕ್ಕೆ ವಲಸೆ ಹೋಗುವವರಲ್ಲಿ ಭಾರತೀಯರದು ಈಗ ಮೂರನೇ ಅತಿ ದೊಡ್ಡ ಗುಂಪಾಗಿದೆ. ನ್ಯೂಯಾರ್ಕ್‌ನ ರೂಸ್‌ವೆಲ್ಟ್ ಹೌಸ್‌ನಲ್ಲಿ ಮಾಡಿದ ಭಾಷಣದಲ್ಲಿ ಅಶೋಕ ಮೋದಿ ಅವರು ಈ ಆತಂಕಕಾರಿ ಸಂಗತಿಯ ಬಗ್ಗೆ ಗಮನ ಸೆಳೆದಿದ್ದಾರೆ. ಇದು, ಭಾರತದ ಜಿಡಿಪಿ ಬೆಳವಣಿಗೆ ಮತ್ತು ಅದರ ಚಲನೆಯ ದಿಕ್ಕು-ದೆಸೆ ಬಗ್ಗೆ ದೊಡ್ಡ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ಭಾರತದಲ್ಲಿ ಸಾಧಾರಣ ವಿದ್ಯಾರ್ಥಿಗಳಲ್ಲಿ ಅನೇಕರು ಕಾಲೇಜು ಪ್ರಾಧ್ಯಾಪಕರಾಗುತ್ತಾರೆ. ಖಾಸಗಿ ಕಾಲೇಜುಗಳಲ್ಲಿ ಅವರನ್ನು 'ಸಹಾಯಕ ಪ್ರಾಧ್ಯಾಪಕರು' ಎನ್ನಲಾಗುತ್ತದೆ. ಬೋಧನೆಯ ಜೊತೆಗೆ ಅವರು ಯುಪಿಎಸ್‌ಸಿ- ಜಿಮ್ಯಾಟ್-ಕ್ಯಾಟ್‌ಗೆ ತಯಾರಾಗುತ್ತಾರೆ... ಸಂಕ್ಷಿಪ್ತವಾಗಿ ಹೇಳುವುದಾದರೆ, ನಿಜಕ್ಕೂ ಅವರಿಗೆ ಬೋಧಿಸುವ ಇಚ್ಛೆ ಇರುವುದಿಲ್ಲ, ವಿದ್ಯಾರ್ಥಿಗಳಿಗೆ ಅವರಿಂದ ಕಲಿಯುವುದು ಬೇಕಿರುವುದಿಲ್ಲ. ಬಹುತೇಕ ಕಾಲೇಜುಗಳಲ್ಲಿ ಶೇ 75ರಷ್ಟು ಹಾಜರಾತಿ ಕಡ್ಡಾಯವಾದ್ದರಿಂದ ವಿದ್ಯಾರ್ಥಿಗಳು ಅವರಿಂದ 'ಬಲವಂತವಾಗಿ' ಕಲಿಯಬೇಕಾಗುತ್ತದೆ. ಪರಸ್ಪರ ಬೆಸೆದುಕೊಂಡ ಒಂದು ವ್ಯವಸ್ಥೆ ಅಲ್ಲಿ ಸೃಷ್ಟಿಯಾಗುತ್ತದೆ. ನಾಟಕ ಮುಂದುವರಿಯುತ್ತದೆ ಮತ್ತು ದೇಶದ ಬಹುತೇಕ ಪದವೀಧರರು ಕೌಶಲ ಇಲ್ಲದವರಾಗಿರುವುದೇಕೆ ಎಂದು ನಾವು ಅಚ್ಚರಿಪಡುತ್ತೇವೆ.

ಅಕ್ಷತ್ ಶ್ರೀವಾಸ್ತವ, ಉದ್ಯಮಿ

25 ವರ್ಷಗಳ ಹಿಂದೆ

ಮಂಗಳವಾರ, 20-4-1999

• ಸರ್ಕಾರ ರಚನೆ: ಸೋನಿಯಾಗೆ ರಾಷ್ಟ್ರಪತಿ ಆಮಂತ್ರಣ ಸಂಭವ

ನವದೆಹಲಿ, ಏ. 19– ಲೋಕಸಭೆಯು ಬುಧವಾರ ಬಜೆಟ್‌ಗೆ ಸಂಬಂಧಿಸಿದ ಹಣಕಾಸು ಮಸೂದೆಗಳನ್ನು ಅಂಗೀಕರಿಸಿದ ಬಳಿಕ, ನೂತನ ಸರ್ಕಾರ ರಚನೆಯ ಪ್ರಕ್ರಿಯೆ ಆರಂಭವಾಗುವುದು ಖಚಿತವಾಗಿದೆ.

ಬಜೆಟ್‌ಗೆ ಸಂಬಂಧಿಸಿದ ವಿಧಿವಿಧಾನಗಳೆಲ್ಲವೂ ಮುಗಿದ ಬಳಿಕ ರಾಷ್ಟ್ರಪತಿ ಅವರು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಸರ್ಕಾರ ರಚನೆಗೆ ಅಧಿಕೃತ ಆಮಂತ್ರಣ ನೀಡುವ ಸಾಧ್ಯತೆಯಿರುವುದಾಗಿ ಗೊತ್ತಾಗಿದೆ.

• ಮಂಗಳಾ ಎಕ್ಸ್‌ಪ್ರೆಸ್ ಹಳಿ ತಪ್ಪಿ 25 ಮಂದಿಗೆ ಗಾಯ

ಮಂಗಳೂರು, ಏ. 19– ಮಂಜೇಶ್ವರದ ಬಳಿಯ ಪೊಸ್ಸೊಟ್ಟುವಿನಲ್ಲಿ ಭಾನುವಾರ ರಾತ್ರಿ 11.35ಕ್ಕೆ ಮಂಗಳಾ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿದ್ದರಿಂದ, ಆರು ಬೋಗಿಗಳು ಕೆಳಕ್ಕುರುಳಿ 25ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ.

50 ವರ್ಷಗಳ ಹಿಂದೆ

ಶನಿವಾರ, 20-4-1974

• ನಕಲಿ ವಸ್ತುಗಳ ಜಾಲ ಬೊಕ್ಕಸಕ್ಕೆ ಅಪಾರ ನಷ್ಟ

ನವದೆಹಲಿ, ಏ. 19– ರಾಷ್ಟ್ರದಲ್ಲಿ ಸೌಂದರ್ಯವರ್ಧಕ ವಸ್ತುಗಳು ಮತ್ತಿತರ ನಕಲಿ ವಸ್ತುಗಳ ಉತ್ಪಾದನೆ ಹಾಗೂ ಅವುಗಳ ಮಾರಾಟದಿಂದ ವರ್ಷಕ್ಕೆ 170 ಕೋಟಿ ರೂಪಾಯಿ ತೆರಿಗೆ ವಂಚನೆಯಾಗುತ್ತಿರುವುದನ್ನು ಭಾರತದ ಬಳಕೆದಾರರ ಮಂಡಲಿಯು ಅಂಕಿಅಂಶಗಳಿಂದ ಪ್ರತ್ಯಕ್ಷಪಡಿಸಿದೆ.

ವ್ಯಾಪಾರಸ್ಥರಿಗೆ ನಗದು ರಸೀತಿ ಕೊಡದೆ ಮಾರಾಟ ತೆರಿಗೆ ಹಾಗೂ ಆದಾಯ ತೆರಿಗೆಗಳಿಂದ ನುಸುಳಿಕೊಳ್ಳುವ ಸಾಚಾ ಅಲ್ಲದ ಅನೇಕ ವಸ್ತುಗಳ ವಹಿವಾಟು ನಡೆಯುತ್ತಿರುವುದನ್ನು ಇಂದು ಇಲ್ಲಿ ಹಣಕಾಸು ಮತ್ತು ಇತರ ಸಚಿವ ಶಾಖೆಗಳಿಗೆ ಸಲ್ಲಿಸಿದ ಮನವಿ ವಿಶ್ಲೇಷಿಸಿದೆ.

ಅನೇಕ ನಕಲಿ ವಸ್ತುಗಳ ಉತ್ಪಾದನೆಗೆ ದೆಹಲಿ, ಮುಂಬೈ, ಅಹಮದಾಬಾದ್, ಕಲ್ಕತ್ತ, ತಿರುವನಂತಪುರ, ಮದ್ರಾಸ್, ಲಖನೌ, ಭೋಪಾಲ್ ಮತ್ತಿತರ ನಗರಗಳು ಕೇಂದ್ರಸ್ಥಳಗಳಾಗಿದ್ದು ರಾಷ್ಟ್ರದ ನಾನಾ ಭಾಗಗಳಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟ ನಡೆಯುತ್ತಿರುವುದನ್ನು ಎತ್ತಿ ತೋರಿಸಲಾಗಿದೆ.

• ಜೆ.ಪಿ. ಬೆಂಬಲಕ್ಕೆ ಮೌನ ಜಾಥಾ

ಬೆಂಗಳೂರು, ಏ. 19– 'ಭ್ರಷ್ಟಾಚಾರ ಮತ್ತು ದಾರಿದ್ರ್ಯದ ಸಂಕೇತವಾಗಿರುವ ಪ್ರಸಕ್ತ ಸಮಾಜ ವ್ಯವಸ್ಥೆಯನ್ನು ನಾಶ ಮಾಡಲು' ತೀರ್ಮಾನಿಸಿರುವ ಶ್ರೀ ಜಯಪ್ರಕಾಶ ನಾರಾಯಣ್ ಅವರಿಗೆ ಬೆಂಬಲ ಸೂಚಿಸಲು, ಸಮಾಜವಾದಿ ಯುವಜನ ಸಭಾದ ರಾಜ್ಯಶಾಖೆ ಮಂಗಳವಾರ (ಏ. 23) ನಗರದಲ್ಲಿ ಮೌನ ಮೆರವಣಿಗೆ ನಡೆಸಲಿದೆ.

ರಾಜಕಾರಣಿಗಳ ನಡುವೆ ಸಂಘರ್ಷ ಮತ್ತು ಜನಸಾಮಾನ್ಯರ ಮಧ್ಯೆ ಸೌಹಾರ್ದ ಇದ್ದಷ್ಟೂ ಚೆಲುವು!

ರಾಜಕೀಯ ಹೇಳಿಕೆ: ತಾತ್ಕಾಲಿಕ ಬಾಳಿಕೆ

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಒಬ್ಬರು ಇನ್ನೊಬ್ಬರ ಕುರಿತು ಒಂದು ಹೇಳಿಕೆ ನೀಡಿದರೆ, ಅದಕ್ಕೆ ಮೂರು ಸಾಧ್ಯತೆಗಳು ಹೊಸೆದುಕೊಂಡಿರುತ್ತವೆ. ಒಂದು, ಹೇಳಿಕೆ ಸತ್ಯವಾಗಿರುತ್ತದೆ. ಎರಡು, ಹೇಳಿದ ವಿಷಯ ಸುಳ್ಳಾಗಿರುತ್ತದೆ. ಮೂರು, ಅದು ಅರ್ಧಸತ್ಯ ಆಗಿರುತ್ತದೆ. ಮೂರನೆಯ ಸಾಧ್ಯತೆಯನ್ನು ಅರ್ಧಸುಳ್ಳು ಎಂದಾಗಿಯೂ ಪರಿಗಣಿಸಬಹುದು. ಆದರೆ ಇವು ಯಾವುವೂ ಅಲ್ಲದ ಮಗದೊಂದು ಸಾಧ್ಯತೆ ರಾಜಕೀಯ ವಲಯದಲ್ಲಿ ಜಾರಿಯಲ್ಲಿರುವುದನ್ನು ಗಮನಿಸಬೇಕು. ಅದನ್ನು 'ರಾಜಕೀಯ ಹೇಳಿಕೆ' ಎಂದು ಕರೆಯಲಾಗುತ್ತದೆ. ಇದು ಸತ್ಯವಲ್ಲ, ಸುಳ್ಳಲ್ಲ, ಅರೆಸತ್ಯವೂ ಅಲ್ಲ. ಒಂದು ಬಗೆಯಲ್ಲಿ 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಎಂಬಂತಹ, ಗಂಭೀರ ಪರಿಗಣನೆಗೆ ಒಗ್ಗದ ಬೀಸುಮಾತು.

ಅನೇಕ ಬಾರಿ, ಹೇಳಿಕೆ ರೂಪದ ಆರೋಪಕ್ಕೆ ಈಡಾದವರೇ 'ಅದು ಅವರ ರಾಜಕೀಯ ಹೇಳಿಕೆ ಬಿಡಿ...' ಎಂದು ತೇಲಿಸುವುದನ್ನು ಕಾಣುತ್ತೇವೆ. ಕೆಲವೊಮ್ಮೆ ರಾಜಕೀಯ ಹೇಳಿಕೆ, ಪ್ರತಿಹೇಳಿಕೆಗಳು ಜನರಿಗೆ ಮನರಂಜನೆಯ ಸರಕಾಗಿಬಿಡುತ್ತವೆ.

ರಾಜಕೀಯ ಹೇಳಿಕೆಗಳಲ್ಲಿ ಹಲವಾರು ವಿಧಗಳನ್ನು ಗುರುತಿಸಬಹುದು. ಅವುಗಳಲ್ಲಿ ಎದುರಾಳಿ ವ್ಯಕ್ತಿ ಅಥವಾ ಪಕ್ಷವನ್ನು ಟೀಕೆ, ವಿಮರ್ಶೆಗೆ ಒಳಪಡಿಸುವುದರ ಜೊತೆಗೆ ತೇಜೋವಧೆಗೆ ಯತ್ನಿಸುವ ಪ್ರಸಂಗಗಳೂ ಇರುತ್ತವೆ. ವಿರೋಧಿಯ ಖಾಸಗಿ ವಿಷಯಗಳನ್ನು ಜಾಲಾಡುವ ಸಂದರ್ಭಗಳು ಅಪರೂಪವೇನಲ್ಲ. ಯಾವಾಗ ಈ ಹೇಳಿಕೆಗಳ ವಿಷಯವು ವ್ಯಕ್ತಿಗತ ಸ್ತರ ದಾಟಿ ಆರೋಪ, ಅದರಲ್ಲೂ ಭ್ರಷ್ಟಾಚಾರ- ಕ್ರಿಮಿನಲ್ ಆರೋಪದ ಸ್ವರೂಪ ಪಡೆಯುತ್ತದೆಯೋ ಅಲ್ಲಿ ಸಾರ್ವಜನಿಕ ಹಿತಾಸಕ್ತಿ ಜನ್ಮ ತಾಳುತ್ತದೆ. ಆಗ ಅದು ಇಬ್ಬರು ರಾಜಕಾರಣಿಗಳು ಅಥವಾ ಎರಡು ರಾಜಕೀಯ ಪಕ್ಷಗಳ ನಡುವಿನ ವಿದ್ಯಮಾನವಾಗಿ ಉಳಿಯುವುದಿಲ್ಲ.

ರಾಜಕಾರಣಿಗಳ ಇಂತಹ ಹೇಳಿಕೆಗಳ ಒಳಗು, ಉದ್ದೇಶ, ಗುರಿ, ಪರಿಣಾಮ ನಾವಂದುಕೊಂಡಷ್ಟು ಸರಳವೂ ನೇರವೂ ಆಗಿರುವುದಿಲ್ಲ. ಇವು ಸಾರ್ವಜನಿಕವಾಗಿ ನಂಬಿಸುವ, ಅಪನಂಬಿಸುವ ಅಥವಾ ಕನಿಷ್ಠಪಕ್ಷ ಗೊಂದಲ ಮೂಡಿಸುವ ಕಾರ್ಯಸೂಚಿಯನ್ನು ಬಹಳಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತವೆ. ಆಯಾ ಸಮಯ, ಸಂದರ್ಭಕ್ಕೆ ಸರಿಹೊಂದುವಂತೆ ಹೊರಹೊಮ್ಮುವ ಈ ಹೇಳಿಕೆಗಳು ತಮ್ಮ ಒಡೆಯ ನಿಗದಿಪಡಿಸಿದ ಗಮ್ಯವನ್ನೇನೋ ಸೇರುತ್ತವೆ. ಆದರೆ 'ರಾಜಕೀಯ ಹೇಳಿಕೆ' ಹಣೆಪಟ್ಟಿಯ ಆಚೆಗಿನ ಸಾರ್ವಜನಿಕ ಒಳಿತು, ನ್ಯಾಯನಿಷ್ಠುರತೆ, ಸತ್ಯಪರತೆ ಕಳಚಿಹೋಗುವ ಸನ್ನಿವೇಶವನ್ನು ಯಾರು, ಹೇಗೆ ನಿಭಾಯಿಸುವುದು?

ಚುನಾವಣೆ ಸಂದರ್ಭಗಳಂತೂ 'ರಾಜಕೀಯ ಹೇಳಿಕೆ'ಗಳಿಗೆ ಸುಗ್ಗಿಯ ಕಾಲ. ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ತುಸು ಹೆಚ್ಚೇ ಸದ್ದು ಮಾಡುತ್ತಿರುವುದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನಡುವಿನ ತೀವ್ರ ಸ್ವರೂಪದ ಆರೋಪ, ಪ್ರತ್ಯಾರೋಪಗಳ ಕಾಳಗ. ಇವರಿಬ್ಬರ ಸಂಘರ್ಷದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರೂ ಪ್ರವೇಶ ಪಡೆದಿರುವುದು ವಿವಾದಕ್ಕೆ ಇನ್ನಷ್ಟು ತೀಕ್ಷ್ಣತೆ ಕಲ್ಪಿಸಿದೆ.

ಈ ಹಿಂದೆ ಸಿದ್ದರಾಮಯ್ಯ ಅವರ ವಿರುದ್ಧ ಸತತ ಆರೋಪ ಮಾಡುತ್ತಿದ್ದ ಕುಮಾರಸ್ವಾಮಿ ಇದೀಗ ಶಿವಕುಮಾರ್ ಅವರನ್ನು ಮೊದಲ ಗುರಿ ಮಾಡಿಕೊಂಡಿರುವುದು ಹೊಸ ಬೆಳವಣಿಗೆ. ಶಿವಕುಮಾರ್ ಅವರೂ ಇದಕ್ಕೆ ತಮ್ಮದೇ ಆದ ರೀತಿಯಲ್ಲಿ ತಿರುಗೇಟು ನೀಡುತ್ತಿದ್ದಾರೆ. ಇದು ಒಕ್ಕಲಿಗ ಸಮುದಾಯಕ್ಕೆ ಮುಂದಾಳತ್ವ ನೀಡುವ ಪೈಪೋಟಿಯ ಭಾಗ ಎಂಬುದೇನೋ ನಿಜ. ಆದರೆ ಇವರ ಆರೋಪ, ಪ್ರತ್ಯಾರೋಪಗಳಲ್ಲಿ ಬಹಿರಂಗ ಆಗುತ್ತಿರುವ ಅಂಶಗಳು ಜಾತಿ ಲೆಕ್ಕಾಚಾರಗಳನ್ನು ಮೀರಿದ ಸಾರ್ವಜನಿಕ ಬದುಕಿನ ಪ್ರಾಮಾಣಿಕತೆ, ಹೊಣೆಗಾರಿಕೆ, ಪಾರದರ್ಶಕತೆಯ ಸಂಗತಿಯನ್ನೂ ಒಳಗೊಂಡಿರುವುದನ್ನು ಹಗುರವಾಗಿ ಭಾವಿಸಬಾರದು.

ಕುಮಾರಸ್ವಾಮಿ ಅವರಿಗೆ ಬೆಂಗಳೂರಿನ ಸುತ್ತಮುತ್ತ ಒಂದು ಸಾವಿರ ಎಕರೆ ಜಮೀನು ಇದೆ ಎಂಬುದು ಶಿವಕುಮಾರ್ ಅವರ ಆರೋಪ. ಶಿವಕುಮಾರ್ ಬೆವರು ಸುರಿಸಿ ಆಸ್ತಿ ಸಂಪಾದನೆ ಮಾಡಿದ್ದಾರೆಯೇ, ಕಲ್ಲುಬಂಡೆ ಕದ್ದು ವಿದೇಶಕ್ಕೆ ಸಾಗಿಸಿದ್ದಾರೆ ಎಂದು ಪ್ರತ್ಯಾರೋಪ ಮಾಡಿದ್ದಾರೆ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಎಚ್.ಡಿ.ಕುಮಾರಸ್ವಾಮಿ. 'ನನ್ನ ಜಮೀನಿನ ಬಗ್ಗೆ ಇಷ್ಟೊಂದು ಮಾತನಾಡುವ ಶಿವಕುಮಾರ್, 24 ಎಕರೆ ಕರಾಬ್ ಜಮೀನು ನುಂಗಿಹಾಕಿರುವ ಲುಲು ಮಾಲ್ ಬಗ್ಗೆ ಏಕೆ ಮೌನ ವಹಿಸುತ್ತಾರೆ? ಲುಲು ಮಾಲ್ ಇರುವ ಜಾಗವನ್ನು 1934ರಲ್ಲಿ ಮಿನರ್ವ ಮಿಲ್‌ಗೆ ನೀಡಲಾಗಿತ್ತು. ಆ ದಾಖಲೆಯನ್ನು ಹೇಗೆ ಸುಟ್ಟುಹಾಕಿದರು ಎನ್ನುವುದು ನನಗೆ ಗೊತ್ತಿದೆ. ಅದನ್ನು ಅಕ್ರಮವಾಗಿ ಖರೀದಿ ಮಾಡಿ ಮಾಲ್ ಕಟ್ಟಿದ್ದಾರೆ. ಇದೆಲ್ಲವನ್ನೂ ಮುಂದೆ ದಾಖಲೆ ಸಮೇತ ಬಿಡುಗಡೆ ಮಾಡುತ್ತೇನೆ' ಎಂದು ಹೇಳಿರುವ ಕುಮಾರಸ್ವಾಮಿಯವರು ಎಂದಿನಂತೆ ಕ್ಲೈಮ್ಯಾಕ್ಸ್ ಬಾಕಿ ಇರಿಸಿದ್ದಾರೆ!

'ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಜಮೀನು ಬರೆಸಿಕೊಳ್ಳಲು ನೀವು ಏನೆಲ್ಲಾ ಮಾಡಿದಿರಿ ಎನ್ನುವ ಮಾಹಿತಿ ಇದೆ. ಜಮೀನು ಖರೀದಿಸುವುದಾಗಿ ಕೊಟ್ಟ ಚೆಕ್ ನಗದಾಗದೇ ಇರುವ ದಾಖಲೆ ಇದೆ. ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘದ ಪ್ರಕರಣದಲ್ಲಿ ಏನು ನಡೆದಿದೆ ಎಂಬುದು ಗೊತ್ತಿದೆ. ಅಸಲಿ ಸಹಕಾರ ಸಂಘದ ಬದಲಿಗೆ ನಕಲಿ ಸಹಕಾರ ಸಂಘ ಸೃಷ್ಟಿಸಿದ್ದೂ ಗೊತ್ತು. ನನ್ನನ್ನು ಚರ್ಚೆಗೆ ಕರೆದಿದ್ದೀರಿ, ನಾನು ಕಂತೆಗಟ್ಟಲೆ ದಾಖಲೆಯೊಂದಿಗೆ ಸಿದ್ಧನಿದ್ದೇನೆ' ಎಂಬ ಕುಮಾರಸ್ವಾಮಿ ಸವಾಲು ಕೂಡ ಈಗ ಶಿವಕುಮಾರ್ ಅಂಗಳದಲ್ಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮೈಸೂರಿನಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ದೇವೇಗೌಡರು, ಶಿವಕುಮಾರ್ ವಿರುದ್ಧ ಗುರುತರ ಆರೋಪಗಳನ್ನು ಮಾಡಿದ್ದಾರೆ. ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿರುವ ಶಿವಕುಮಾರ್ ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮುಂದುವರಿದು, 'ಕರ್ನಾಟಕದಿಂದ ವಿವಿಧ ರಾಜ್ಯಗಳ ಚುನಾವಣೆಗೆ ಹಣ ರವಾನೆಯಾಗಿದೆ. ಈ ಬಗ್ಗೆ ಸಾಕ್ಷ್ಯಾಧಾರ ನೀಡಲು ನಾನು ಸಿದ್ಧನಿದ್ದೇನೆ' ಎಂಬುದು ಅವರ ಸವಾಲು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ದೇವೇಗೌಡರು ಶಿವಕುಮಾರ್ ವಿರುದ್ಧ ಮಾಡಿರುವ ಆರೋಪ ಸಾಮಾನ್ಯವಾದುದಲ್ಲ: 'ಅಮೆರಿಕದಲ್ಲಿ ದುಡಿದು ತಂದ ಹಣದಲ್ಲಿ ಉದ್ಯಮಿಯೊಬ್ಬರು ಬಿಡದಿ ಬಳಿ ಐ.ಟಿ. ಕಂಪನಿ ಸ್ಥಾಪನೆ ಮಾಡಲು ಮುಂದಾಗಿದ್ದರು. ಶಿವಕುಮಾರ್ ಸುಳ್ಳು ಕ್ರಯಪತ್ರ ಸಿದ್ಧಪಡಿಸಿ, ಅದನ್ನು ಮುಂದಿಟ್ಟುಕೊಂಡು ಸುಪ್ರೀಂ ಕೋರ್ಟ್ ತನಕ ಹೋಗಿದ್ದರು. ನ್ಯಾಯಾಲಯದಲ್ಲಿ ಮುಖಭಂಗವಾದ ಬಳಿಕ ಆ ವ್ಯಕ್ತಿಯ ಮಗಳನ್ನು ಒಂಬತ್ತು ದಿನ ಅಕ್ರಮ ಬಂಧನದಲ್ಲಿ ಇಟ್ಟಿದ್ದರು. ಆಸ್ತಿ ಪತ್ರಕ್ಕೆ ಸಹಿ ಹಾಕಿ ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಎಂದು ಧಮ್ಕಿ ಹಾಕಿದ್ದರು…' ಎಂದು ಆರೋಪಿಸಿದ್ದಾರೆ ಮಾಜಿ ಪ್ರಧಾನಿ.

ಇದಕ್ಕೆ ಪ್ರತಿಕ್ರಿಯಿಸಿರುವ ಶಿವಕುಮಾರ್, 'ಅವರು ಸಾಕ್ಷ್ಯ ಬಿಡುಗಡೆ ಮಾಡಲಿ. ನಾನು ತಪ್ಪು ಮಾಡಿದ್ದರೆ ಯಾವುದೇ ಶಿಕ್ಷೆ ಎದುರಿಸಲು ಸಿದ್ಧ. ಯಾವುದೇ ಆರೋಪಕ್ಕೂ ದಾಖಲೆ ಇರಬೇಕಲ್ಲವೇ? ಬೆಂಗಳೂರು ಸುತ್ತಮುತ್ತ ಅವರ ಕುಟುಂಬದ ಎಲ್ಲಾ ಸದಸ್ಯರ ಆಸ್ತಿ ಎಷ್ಟು ಎಂಬ ದಾಖಲೆಗಳನ್ನು ನಾನು ತರುತ್ತೇನೆ. ನಾನು ಕಲ್ಲು ಹೊಡೆದಿದ್ದೇನೆಯೇ, ಲೂಟಿ ಮಾಡಿದ್ದೇನೆಯೇ ಎಂಬುದು ಸದನದಲ್ಲಿ ತೀರ್ಮಾನವಾಗಲಿ' ಎಂದು ಪ್ರತಿಸವಾಲು ಹಾಕಿದ್ದಾರೆ. ಆದರೆ ಇದು ನಿಜಕ್ಕೂ ತೀರ್ಮಾನ ಆಗಬೇಕಿರುವುದು ಕಾನೂನಿನ ಕಕ್ಷೆಯಲ್ಲಿ!

ಇಲ್ಲಿನ ವಾಗ್ವಾದದಲ್ಲಿ ಪಾಲ್ಗೊಂಡವರು ಸಾಮಾನ್ಯರಲ್ಲ. ಮಾಜಿ ಮುಖ್ಯಮಂತ್ರಿ, ಮಾಜಿ ಪ್ರಧಾನಮಂತ್ರಿ ಹಾಗೂ ಭಾವಿ ಮುಖ್ಯಮಂತ್ರಿ ನಡುವಿನ ಕ್ರಿಮಿನಲ್ ಸ್ವರೂಪದ ಗಂಭೀರ ಆರೋಪಗಳು ಬರೀ ಗಾಳಿಮಾತುಗಳಾಗಿ ಹಾರಿಹೋದರೆ ಹೇಗೆ? ಸೇರು ಸವ್ವಾಸೇರಿನ ಹೇಳಿಕೆಗಳ ಕದನ ಯಾವುದೇ ವ್ಯಕ್ತಿಗಳಿಗೆ, ಪಕ್ಷಗಳಿಗೆ ಸೀಮಿತವಾದುದೇನಲ್ಲ. ಬಹುಪಾಲು ರಾಜಕಾರಣಿಗಳು ಸಮಯಾನುಸಾರ ಪರಸ್ಪರ ಇಂಥ ಆರೋಪ, ಪ್ರತ್ಯಾರೋಪಗಳನ್ನು ಮಾಡಿಕೊಂಡ ರಾಶಿ ಪ್ರಸಂಗಗಳು ದೊರೆಯುತ್ತವೆ. ತಾರ್ಕಿಕ ಅಂತ್ಯ ಮುಟ್ಟಿದ್ದು ಶೂನ್ಯ. ಅವಕಾಶವಿದ್ದರೆ ನ್ಯಾಯಾಂಗವೇ ಸ್ವಯಂಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡು ಕ್ರಮ ಕೈಗೊಳ್ಳುವುದಷ್ಟೇ ಉಳಿದಿರುವ ಆಶಾಕಿರಣ.

ಚುರುಮುರಿ



ಬಾ ಗುರು ವೋಟ್ ಹಾಕು

• ಗುರು ಪಿ.ಎಸ್.

'ಮಹಾಪ್ರಭು, ನೀವೇನ್ ಇಲ್ಲಿ' ಪರಮಾಶ್ಚರ್ಯದಿಂದ ಕೇಳಿದ ಮತದಾರ ವಿಜಿ. 'ಯಾಕಪ್ಪ ವಿಜಿ, ನಿಮ್ಮ ಮನೆಗೆ, ಮನದೊಳಗೆ ನಾನು ಬರಬಾರದೇ?' ಹಲ್ಲುಗಿಂಜುತ್ತಾ ಕೇಳಿದ ಎಂ.ಪಿ. ಮುದ್ದಣ್ಣ.

'ಐದು ವರ್ಷದ ನಂತರ ಈಗಲೇ ನಿಮ್ಮನ್ನ ನೇರವಾಗಿ ನೋಡಿದ್ದಲ್ಲ, ಅದಕ್ಕೆ ಕೇಳ್ದೆ ಮಹಾಪ್ರಭು' ಮತ್ತೆ ವ್ಯಂಗ್ಯವಾಗಿ ಹೇಳಿದ ವಿಜಿ.

'ಗೆದ್ದ ಮೊದಲ ವರ್ಷ ಬೀದಿಗೆ ಬರೋಣ ಅಂದ್ಕೊಂಡೆ. ಆಗಿನ್ನೂ ವೋಟ್ ಕೇಳೋಕೆ ಬಂದೂ ಬಂದೂ ನಿಮಗೆ ವಾಕರಿಕೆ ಬರಿಸಿದ್ದೆನಲ್ಲ, ಮತ್ತೇಕೆ ಕಾಣಿಸಿಕೊಳ್ಳೋದು ಅಂತ ಬರಲಿಲ್ಲ'.

'ಮತ್ತೆ, ಎರಡನೆಯ ವರ್ಷವೂ ಬರಲಿಲ್ಲವಲ್ಲ?'

'ಆಗ ಕೋವಿಡ್ ಬಂದಿರಲಿಲ್ವ, ಯಾರೂ ಹೊರಗೆ ಓಡಾಡಬೇಡಿ ಅಂತ ನಾವೇ ರೂಲ್ಸ್ ಮಾಡಿ, ನಾವೇ ಹೊರಗೆಲ್ಲ ಓಡಾಡೋಕಾಗುತ್ತಾ?'

'ಮೂರನೇ ವರ್ಷವೂ ಕಾಣಿಸಿಕೊಳ್ಳಲಿಲ್ಲ'.

'ಹೇಗೆ ಕಾಣಿಸಿಕೊಳ್ಳೋಕಾಗುತ್ತೆ ಹೇಳು? ನೀವು ಅಷ್ಟೊಂದು ರೈತರಲ್ಲ ಸೇರ್ಕೊಂಡು ಪ್ರೊಟೆಸ್ಟ್ ಮಾಡ್ತಿದ್ರಿ. ಅಲ್ಲಿ ನಿಮಗೇ ನಿಲ್ಲೋಕೆ ಜಾಗ ಇಲ್ಲ, ನಾನು ಬಂದರೆ ಜನ ಜಾಸ್ತಿ ಸೇರಿ ನಿಮಗೆಲ್ಲ ತೊಂದರೆ ಆಗಲ್ವ?'

'ಮತ್ತೆ ನಾಲ್ಕನೇ ವರ್ಷವಾದರೂ ಬರಬಹುದಿತ್ತಲ್ಲ?'

'ಬಂದು ಏನ್ಮಾಡ್ಲಿ ನೀನೇ ಹೇಳು. ಬರ ಬಂದು ನಿಮಗೇ ತಿನ್ನೋಕೆ ಕೂಳಿಲ್ಲ, ಕುಡಿಯೋಕೆ ನೀರಿಲ್ಲ, ಅಂಥದ್ದರಲ್ಲಿ ನಾನು ಬೇರೆ ಬಂದು ನಿಮಗೆ ಭಾರವಾಗಬೇಕಿತ್ತಾ?'

'ಮತ್ತೆ ಈಗ ಬಂದಿದೀರಿ?'

'ಈಗಲೂ ಬಾರದಿದ್ದರೆ ಹೇಗೆ ವಿಜಿ, ನಿಮ್ಮನ್ನೆಲ್ಲ ನೋಡದೇ ಎಷ್ಟು ದಿನ ಅಂತ ಇರೋದು'.

'ನೋಡಾಯ್ತಲ್ಲ, ಹೊರಡಿ'.

'ನೀನು ನನಗೇ ವೋಟು ಹಾಕುತ್ತೇನೆ ಅಂದರೆ ಹೋಗಿಬಿಡುವೆ'.

'ಇಲ್ಲ, ನಾನು ಈ ಬಾರಿ ಸತ್ಯವಂತ, ಭ್ರಷ್ಟಾಚಾರ ಮಾಡದಿರುವ, ಸುಳ್ಳು ಹೇಳದೇ ಇರುವ, ಫ್ಯಾಮಿಲಿ- ಜಾತಿ- ಧರ್ಮದ ರಾಜಕೀಯ ಮಾಡದಿರುವವರಿಗೆ ವೋಟ್ ಹಾಕ್ತೀನಿ'.

'ಯಾವ ಪಾರ್ಟಿಯಲ್ಲೂ ಅಂತಹ ಒಬ್ಬರೂ ಕ್ಯಾಂಡಿಡೇಟ್ ನಿನಗೆ ಸಿಗಲ್ಲ ಬಿಡು' ಮುದ್ದಣ್ಣನೇ ನಗುತ್ತಾ ಅಲ್ಲಿಂದ ಹೊರಟ.

ಚರ್ಚೆ

ನೋಟಾ: ಇರಲಿ ನಿರ್ಲಿಪ್ತ ನೋಟ

ಸಜ್ಜನರ ನೋಟಾ ಮತಗಳು, ಮತದಾನ ಮಾಡದಿರುವಂತಹ ಜವಾಬ್ದಾರಿಯುತವಲ್ಲದ ನಿರ್ಲಿಪ್ತ ಮನೋಭಾವದಂತೆಯೇ ದುಷ್ಪರಿಣಾಮ ಉಂಟುಮಾಡುತ್ತವೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'ನೋಟಾ' ಮತದಾನಕ್ಕೆ ಸಂಬಂಧಿಸಿದ 'ನೀನಲ್ಲ, ಅವನಲ್ಲ, ಇವನೂ ಅಲ್ಲ' ಎಂಬ ಪ.ರಾಮಕೃಷ್ಣ ಶಾಸ್ತ್ರಿ ಅವರ ಲೇಖನ (ಸಂಗತ, ಏ. 17) ಮೇಲ್ನೋಟಕ್ಕೆ ಆದರ್ಶವಾಗಿ ಕಂಡರೂ ಪ್ರಸ್ತುತ ಸಂಕೀರ್ಣವಾದ ಚುನಾವಣಾ ಸಂದರ್ಭ ಮತ್ತು ಮತದಾನ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಪರಿಗಣಿಸಿದರೆ, ಲೇಖಕರ ಉದ್ದೇಶವನ್ನು ಈಡೇರಿಸಲಾರದು ಎನಿಸುತ್ತದೆ.

ನೋಟಾ ಮತದಾನ ಸಹ ಮತದಾನ ಮಾಡದಿರುವಷ್ಟೇ ಪರಿಣಾಮವನ್ನು ಉಂಟುಮಾಡುತ್ತದೆ. ಏಕೆಂದರೆ ಸದ್ಯಕ್ಕೆ ನಮ್ಮ ಮತದಾರ ಪ್ರಭುಗಳಾಗಲಿ, ಸ್ಪರ್ಧಿಗಳಾಗಲಿ, ಪಕ್ಷಗಳಾಗಲಿ ಅಂತಹ ಸೂಕ್ಷ್ಮ ಸಂವೇದಿಗಳಾಗಿಲ್ಲ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಾಗಿ ಮತದಾರರು ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ರಾಜಕೀಯ ಬೆಳವಣಿಗೆಗಳ ಬಗೆಗೆ ಅರಿವು ಪಡೆಯುತ್ತಿದ್ದಾರೆ ಎಂಬುದು ನಿಜವಾದರೂ ಅವು ಅವರಲ್ಲಿ ಆಳವಾದ ಪ್ರಜ್ಞೆಯನ್ನು ಉಂಟುಮಾಡುತ್ತಿಲ್ಲ ಎಂದೇ ಹೇಳಬೇಕಾಗುತ್ತದೆ. ಮತದಾರ ಬಹಳಷ್ಟು ಗೊಂದಲಕ್ಕೂ ಗುರಿಯಾಗಿದ್ದಾನೆ.

ನಮ್ಮದು ಅಮೆರಿಕದ ಹಾಗೆ ಅಧ್ಯಕ್ಷೀಯ ಮಾದರಿಯ ಚುನಾವಣೆ ಅಲ್ಲದಿದ್ದರೂ ಆ ಮಾದರಿಯಲ್ಲಿಯೇ ಚುನಾವಣಾ ಪ್ರಚಾರ ಸಾಗಿದೆ. ಮೊದಲಿನ ಹಾಗೆ ಭಿನ್ನ ರಾಜಕೀಯ ಪಕ್ಷಗಳಿಗೆ ಸೇರಿದ ವ್ಯಕ್ತಿಗಳ ನಡುವಿನ ಹೋರಾಟವಷ್ಟೇ ಆಗಿಲ್ಲದೆ ಪಕ್ಷಗಳ ಭಿನ್ನ ಸೈದ್ಧಾಂತಿಕ ಸಂಘರ್ಷವೂ ಆಗಿದೆ. ಹೀಗಾಗಿ, ಚುನಾವಣಾ ಕಣದಲ್ಲಿರುವ ವ್ಯಕ್ತಿಗಳ ಮೌಲ್ಯಮಾಪನವಷ್ಟೇ ಮುಖ್ಯವಾಗದೆ ಆ ವ್ಯಕ್ತಿಯ ಪಕ್ಷದ ತಾತ್ವಿಕತೆಯ ಔಚಿತ್ಯವನ್ನೂ ಅಳೆಯಬೇಕಾಗುತ್ತದೆ. ಹೀಗಾಗಿ, ವ್ಯಕ್ತಿಯ ಗುಣಾವಗುಣಗಳ ಜೊತೆಗೆ ಯಾವ ಪಕ್ಷವು ದೇಶದ ಭವಿಷ್ಯದ ದೃಷ್ಟಿಯಿಂದ ಎಷ್ಟು ಉತ್ತಮವಾದುದು ಎಂಬುದಕ್ಕಿಂತ, ಎಷ್ಟು ಅಪಾಯಕಾರಿ ಅಥವಾ ಎಷ್ಟು ಕಡಿಮೆ ಅಪಾಯಕಾರಿ ಎಂದು ಯೋಚಿಸಬೇಕಾದಂತಹ ಸಂದರ್ಭ ಒದಗಿಬಂದಿದೆ.

ಮತದಾನದ ಮೂಲ ಉದ್ದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಾಪನೆ ಮತ್ತು ಮುಂದುವರಿಕೆ. ಇಂದು ಭಾರತದ ಪ್ರಜಾಪ್ರಭುತ್ವ ಆತಂಕದ ಹಂತವನ್ನು ತಲುಪಿದೆ ಎಂದು ಹಲವಾರು ರಾಜಕೀಯ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

ಸ್ವೀಡನ್‌ನ ಗೊಥೆನ್‌ಬರ್ಗ್ ಮೂಲದ ವಿ- ಡೆಮ್ ಸಂಸ್ಥೆ ಪ್ರಕಟಿಸಿರುವ 'ಪ್ರಜಾಪ್ರಭುತ್ವ ವರದಿ- 2024'ರ ಪ್ರಕಾರ, ಭಾರತವು ಪ್ರಜಾಪ್ರಭುತ್ವದ ಹಲವಾರು ಮಾನದಂಡಗಳಲ್ಲಿ ಕೆಟ್ಟ ಸರ್ವಾಧಿಕಾರದ ಕಡೆಗೆ ಸಾಗುತ್ತಿರುವ ದೇಶಗಳಲ್ಲಿ ಒಂದು ಎಂದು ಅನಿಸಿಕೊಂಡಿದೆ. ಇದೇ ಸಂಸ್ಥೆಯ 2018ರ ವರದಿಯು ಭಾರತವು 'ಚುನಾವಣಾ ಸರ್ವಾಧಿಕಾರ'ದ ಹಂತದಲ್ಲಿದೆ ಎಂದು ಸೂಚಿಸಿತ್ತು. ಪ್ರಜಾಪ್ರಭುತ್ವವನ್ನು ಉಳಿಸುವ, ಬಲಪಡಿಸುವ ದಿಸೆಯಲ್ಲಿ ನಿರ್ಣಾಯಕ ಹಂತದಲ್ಲಿ ಈಗ ನಾವು ಇದ್ದೇವೆ. ಆದ್ದರಿಂದ ಇಂದು ಯಾವ ವ್ಯಕ್ತಿ ಕೆಟ್ಟವನು, ಯಾವ ವ್ಯಕ್ತಿ ಒಳ್ಳೆಯವನು ಎನ್ನುವುದಕ್ಕಿಂತ ಯಾವ ಪಕ್ಷ ಕಡಿಮೆ ಅಪಾಯಕಾರಿ ಎಂದು ಯೋಚಿಸಿ ಮತದಾನ ಮಾಡುವುದು ಅತ್ಯಗತ್ಯವಾಗಿದೆ.

ಇಂತಹ ಸಂದರ್ಭದಲ್ಲಿ, ಪಕ್ಷ ಪರವಾಗಿಲ್ಲ ಆದರೆ ವ್ಯಕ್ತಿ ಸರಿಯಿಲ್ಲ ಎಂದು ಯೋಚಿಸಿ ನೋಟಾ ಮತ ಚಲಾವಣೆ ಮಾಡಿದರೆ, ಕಡಿಮೆ ಅಪಾಯಕಾರಿ ಪಕ್ಷದ ಮತಗಳು ವಿಭಜನೆಗೆ ಒಳಪಟ್ಟು, ಹೆಚ್ಚು ಅಪಾಯಕಾರಿ ಪಕ್ಷವು ಗದ್ದುಗೆಯನ್ನು ಆಕ್ರಮಿಸಿಕೊಳ್ಳುವುದಕ್ಕೆ ನಮ್ಮ ಮತ ಸಹಕಾರಿಯಾಗಿರುತ್ತದೆ. ಆದ್ದರಿಂದ ನೋಟಾ ಮತದಾನವು ಪಲಾಯನವಾದಿ ಮಾತ್ರ ಆಗದೆ ನಕಾರಾತ್ಮಕ ನಿಲುವು ಕೂಡ ಆಗುವ ಸಂಭವ ಇರುತ್ತದೆ.

ಇದಕ್ಕಿಂತ ಮುಖ್ಯವಾದ ಕಾರಣವೆಂದರೆ, ನಮ್ಮಲ್ಲಿ ನೋಟಾದ ಪರಿಕಲ್ಪನೆ ಇನ್ನೂ ಬಹುಜನರಲ್ಲಿ ಮೂಡಿಲ್ಲ. ಎಲ್ಲೋ ಕೆಲವು ನೋಟಾ ಮತಗಳು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತಾಗುತ್ತವೆ ಅಷ್ಟೆ. ಅನೇಕ ಸಂದರ್ಭಗಳಲ್ಲಿ ಬರೀ ಶೇ 30ರಿಂದ 35ರಷ್ಟು ಮತಗಳನ್ನು ಪಡೆದವರು ಗೆಲುವನ್ನು ಪಡೆಯುತ್ತಾರೆ. ಉಳಿದ ಮತಗಳು ಬೇರೆ ಬೇರೆ ವ್ಯಕ್ತಿಗಳಿಗೆ ಹರಿದು ಹಂಚಿಹೋಗಿರುತ್ತವೆ. ಅಂತಹ ಸಂದರ್ಭದಲ್ಲಿ ಕೂಡ ತಾನು ಗೆದ್ದೆನೆಂಬ ಸಂಭ್ರಮಾಚರಣೆಯಲ್ಲಿ ಮುಳುಗಿರುತ್ತಾರೆಯೇ ವಿನಾ ವಾಸ್ತವದಲ್ಲಿ ತನ್ನನ್ನು ಬಹುಮಂದಿ ತಿರಸ್ಕರಿಸಿದ್ದಾರೆ ಎಂಬ ಅಳುಕು ಅವರನ್ನು ಕಾಡುವುದೇ ಇಲ್ಲ. ಅಷ್ಟರಮಟ್ಟಿಗೆ ಬಹುಮಂದಿ ರಾಜಕಾರಣಿಗಳು ಪಾಷಾಣಹೃದಯಿಗಳಾಗಿದ್ದಾರೆ. ಆದ್ದರಿಂದ ಮತದಾರ ಇಂದು ಹಿಂದೆಂದಿಗಿಂತಲೂ ಹೆಚ್ಚು ವಿವೇಚನಾಶೀಲನಾಗಬೇಕಾಗಿದೆ.

ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿಗಳನ್ನು ಒಳಗೊಂಡ ವಾತಾವರಣ ಇದ್ದಲ್ಲಿ ಮಾತ್ರ ನೋಟಾ ಮತಗಳಿಗೂ ಮಾನ್ಯತೆ ಇರುತ್ತದೆಯೇ ವಿನಾ ಪ್ರಸಕ್ತ ಅಧಿಕಾರದಾಹಿ ರಾಜಕೀಯ ಅಲೆಗಳ ಹೊಡೆತಕ್ಕೆ ಈ ಸೂಕ್ಷ್ಮ ಮನಸ್ಸಿನ ಪ್ರಾಮಾಣಿಕ ಅಭಿವ್ಯಕ್ತಿಯ ನೋಟಾಗಳು ಕೊಚ್ಚಿ ಹೋಗುವುದು ಖಂಡಿತ. ಆದಕಾರಣ, ಇದ್ದುದರಲ್ಲಿ ಯಾವುದು ಲೇಸು ಎಂದು ತಿಳಿದು ಮತದಾನ ಮಾಡುವುದು ಪ್ರಜ್ಞಾಪೂರ್ವಕ ಹೆಜ್ಜೆಯಾದೀತು.

'ಮತದಾನ ಮಾಡದ ಒಳ್ಳೆಯ ವ್ಯಕ್ತಿಗಳಿಂದಾಗಿ ಕೆಟ್ಟ ರಾಜಕಾರಣಿಗಳು ಸೃಷ್ಟಿಯಾಗುತ್ತಾರೆ' ಎಂಬ ಮಾತಿದೆ. ಪ್ರಸ್ತುತ ಲೋಕಸಭಾ ಚುನಾವಣೆಯು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಭವಿಷ್ಯವನ್ನು ನಿರ್ಧರಿಸುವಂತಹದ್ದಾಗಿದೆ. ಹೀಗಾಗಿ, ಸಜ್ಜನರ ನೋಟಾ ಮತಗಳು, ಮತದಾನ ಮಾಡದಿರುವಂತಹ ಜವಾಬ್ದಾರಿಯುತವಲ್ಲದ ನಿರ್ಲಿಪ್ತ ಮನೋಭಾವದಂತೆಯೇ ದುಷ್ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ.

ವಾಚಕರ ವಾಣಿ

ಬಚ್ಚಿಟ್ಟ ಮಾಹಿತಿ: ಪ್ರಕರಣ ದಾಖಲಿಸಬಾರದೇಕೆ?

ಪ್ರಸಕ್ತ ಲೋಕಸಭಾ ಚುನಾವಣೆಯ ಕಣ ಹಲವು ರೀತಿಯ ಅಪರಾಧಿಕ ಒಳಸುಳಿಗಳಿಂದ ಕೂಡಿದ ಆರೋಪ, ಪ್ರತ್ಯಾರೋಪಗಳ ಅನಾವರಣಕ್ಕೆ ವೇದಿಕೆಯಾಗಿದೆ. ಪ್ರಚಾರದ ಸಮಯದಲ್ಲಿ ನಾಯಕರು ಪರಸ್ಪರ ಮಾಡುತ್ತಿರುವ ವಿಧ ವಿಧದ ಆರೋಪಗಳು ಜನಸಾಮಾನ್ಯರನ್ನು ದಿಗ್ಭ್ರಮೆಗೊಳಿಸುತ್ತಿವೆ. ಒಂದೆಡೆ, 'ಆಸ್ತಿಗಾಗಿ ಬಾಲಕಿಯ ಕಿಡ್ನ್ಯಾಪ್ ಮಾಡಿ ಅಕ್ರಮ ಬಂಧನದಲ್ಲಿ ಇಡಲಾಗಿತ್ತು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಗಂಭೀರ ಆರೋಪ ಮಾಡಿದ್ದಾರೆ. ಇನ್ನೊಂದೆಡೆ, 'ಮತದಾರರಿಗೆ ಹಂಚಲು ಕೊಟ್ಟಿದ್ದ ಹಣ ಸರಿಯಾಗಿ ಹಂಚಿಕೆಯಾಗದಿದ್ದರಿಂದ ನಾನು ಸೋಲಬೇಕಾಯಿತು' ಎಂದು ಮಾಜಿ ಸಚಿವ ಎಂ.ಟಿ.ಬಿ. ನಾಗರಾಜ್ ದುಃಖ ತೋಡಿಕೊಂಡಿದ್ದಾರೆ. ಇದನ್ನೆಲ್ಲಾ ನೋಡಿದಾಗ ನಮಗೆ ಹೊಳೆಯುವ ಅಂಶವೆಂದರೆ, ಎಂಥೆಂಥ ಅಪರಾಧಗಳು ಜರುಗಿರುವ ಬಗ್ಗೆ ಮಹಾಮಹಿಮರಲ್ಲಿ ಮಾಹಿತಿಯಿದ್ದರೂ, ಚುನಾವಣೆಯ ಸಂದರ್ಭದಲ್ಲಿ ಮಾತ್ರ ಅವುಗಳನ್ನು ಬೆಳಕಿಗೆ ತರುವ ಒಂದು ಹೊಸ ಧೋರಣೆಯೇ ದಟ್ಟವಾಗಿ ಬೆಳೆಯುತ್ತಿದೆ.

ಪಕ್ಷಗಳು ಆರೋಪ, ಪ್ರತ್ಯಾರೋಪ ಮಾಡುವಾಗ ಅಪ್ರಜ್ಞಾಪೂರ್ವಕವಾಗಿ ಅಪರಾಧಗಳನ್ನು ಬಯಲಿಗೆ ಎಳೆಯುತ್ತಿರುವುದು ಒಬ್ಬ ಜವಾಬ್ದಾರಿಯುತ ನಾಗರಿಕನ ನಡೆಗೆ ವಿರುದ್ಧವಾಗಿದೆ. ಬಹಿರಂಗವಾಗಿ, ಘಂಟಾಘೋಷವಾಗಿ ಜರುಗಿರುವ ಒಂದು ಅಪರಾಧದ ಬಗ್ಗೆ ತಮಗೆ ಮಾಹಿತಿಯಿದ್ದರೂ ಅದನ್ನು ಪೊಲೀಸರಿಗೆ ತಿಳಿಸದೆ ಗೋಪ್ಯವಾಗಿರಿಸಿ, ಚುನಾವಣಾ ಪ್ರಚಾರಕ್ಕೆ ಆಯುಧವೆಂಬಂತೆ ಬಳಸಿಕೊಳ್ಳುತ್ತಿರುವ ನಾಯಕರ ಇಂತಹ ಪ್ರವೃತ್ತಿಯ ವಿರುದ್ಧ ಪೊಲೀಸರಾಗಲೀ ದಂಡಾಧಿಕಾರಿಗಳಾಗಲೀ ಸ್ವಯಂಪ್ರೇರಿತರಾಗಿ ಅಪರಾಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಲು ಏಕೆ ಮುಂದಾಗಬಾರದು ಎಂಬ ಪ್ರಶ್ನೆ ಕಾಡುತ್ತದೆ.

ಸಿ.ಎಚ್.ಹನುಮಂತರಾಯ, ಬೆಂಗಳೂರು

ಚೆಂಬಿಗೆ ವಿಶೇಷ ಪ್ರಾಪ್ತವಾಗುವುದೆಂದರೆ...

ಚೆಂಬಿಗೆ ಬಹು ಅವತಾರಗಳೂ ಅವುಗಳಿಂದ ನಾನಾ ರೀತಿಯ ಉಪಯೋಗಗಳೂ ಇವೆ ಎಂಬುದು ಇತ್ತೀಚಿನ ಮಕ್ಕಳಿಗೆ ಗೊತ್ತಿಲ್ಲ. ಅದನ್ನು ಗೊತ್ತುಮಾಡುವುದು ನಮ್ಮಂಥ ಹಿರಿಯರ ಜವಾಬ್ದಾರಿ. ಈಗ ಚೆಂಬಿನ ವಿಷಯ ಯಾಕೆ ಎಂದು ಮೂಗುಮುರಿಯುವವರ ಕಣ್ಣಮುಂದೆ ಪತ್ರಿಕೆಯ ಮುಖಪುಟದ ಜಾಹೀರಾತನ್ನು (ಪ್ರ.ವಾ., ಏ. 19) ಹಿಡಿದರೆ ಸಾಕು. ಚೆಂಬಿನ ಪೂರ್ವ ಅವತಾರ ಮಣ್ಣಿನ 'ಮಗೆ', ಆನಂತರ ಅದಕ್ಕೆ ಬಡ್ತಿ ದೊರೆತು ಕಂಚಿನ ಚೆಂಬು, ಹಿತ್ತಾಳೆ ಚೆಂಬು, ಅಲ್ಯೂಮಿನಿಯಂ ಚೆಂಬು, ಪ್ಲಾಸ್ಟಿಕ್ ಚೆಂಬು, ಸ್ಟೀಲ್ ಚೆಂಬು, ಬೆಳ್ಳಿ ಚೆಂಬು ಎಂಬ ನಾನಾ ಅವಸ್ಥೆಗಳನ್ನು ಪಡೆಯಿತು. ಚಿನ್ನದ ಚೆಂಬು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಚೆಂಬುಗಳನ್ನು ಉಪಯೋಗಿಸುವುದರ ಮೇಲೆ ಜನರ ಆರ್ಥಿಕ ಸ್ಥಿತಿಗತಿಯನ್ನು ಅಳೆಯಬಹುದು.

ಯಾರಿಗಾದರೂ ಬರೀ ಚೆಂಬು ಕೊಟ್ಟರೆ ಅದರಲ್ಲಿ ಯಾವುದೇ ವಿಶೇಷ ಇಲ್ಲ. ಚೆಂಬಿಗೆ ಅಥವಾ ಚೊಂಬಿಗೆ ವಿಶೇಷ ಪ್ರಾಪ್ತವಾಗುವುದು ಅದಕ್ಕೆ ಮೂರು ನಾಮ, ಅಂದರೆ ಎರಡು ಬಿಳಿ ನಾಮದ ಮಧ್ಯ ಒಂದು ಕೆಂಪು ನಾಮವನ್ನು ಹಾಕಿದಾಗ ಮಾತ್ರ. ಧಾರ್ಮಿಕ ಭಿಕ್ಷುಕರು ಬವನಾಸಿಗೆ (ದಾಸಯ್ಯಗಳು ಬಳಸುವ ಶಂಖ, ಜಾಗಟೆ, ಬವನಾಸಿ) ಮೂರು ನಾಮ ಹಾಕಿಕೊಂಡು ಮನೆ ಮನೆಗೆ ಉಪಾದಾನಕ್ಕೆ (ಭಿಕ್ಷೆ) ಹೋಗುತ್ತಾರೆ. ಬವನಾಸಿಯನ್ನೂ ಹೊಂಚಿಕೊಳ್ಳುವುದಕ್ಕೆ ಕಷ್ಟವಾದರೆ ಮನೆಯಲ್ಲೇ ದಿನಬಳಕೆಗೆ ಇಟ್ಟುಕೊಂಡಿದ್ದ ಚೆಂಬಿಗೆ ಮೂರು ನಾಮ ಹಾಕಿಕೊಂಡು ಅದನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಭಿಕ್ಷೆಗೆ ಹೋಗುತ್ತಾರೆ. ಇದನ್ನೇ 'ಕೈಗೆ ಚೊಂಬು ಕೊಡುವುದು' ಎನ್ನುವುದು. ಅಂದರೆ, ಭಿಕ್ಷೆಗೆ ಕಳಿಸುವುದು ಎನ್ನುವ ಅರ್ಥದಲ್ಲಿ ಕೈಗೆ ಚೊಂಬು ಕೊಡುವುದು ಎಂಬ ನುಡಿಗಟ್ಟು ಬಳಕೆಯಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮೂಲಸ್ರೋತ ಒಂದೇ, ವರಸೆ ಮಾತ್ರ ಬೇರೆ!

'ಏಕಪಕ್ಷದ ಸಾರ್ವಭೌಮತ್ವ ಅಪಾಯಕಾರಿ' ಎಂದು ರವಿಚಂದ್ರ ಎಂ. ಹೇಳಿದ್ದಾರೆ (ವಾ.ವಾ., ಏ. 19). ಏಕಪಕ್ಷದ ಸಾರ್ವಭೌಮತ್ವ ಮತ್ತು ಪ್ರಜಾತಂತ್ರ ವ್ಯವಸ್ಥೆ ಎರಡೂ ಪರಸ್ಪರ ವಿರೋಧಾಭಾಸದ ಪರಿಕಲ್ಪನೆಗಳು. ಆದರೇನು, ಪ್ರಜಾತಂತ್ರ ವ್ಯವಸ್ಥೆಯನ್ನು ನಾವು ಅಳವಡಿಸಿಕೊಂಡಿದ್ದರೂ ಭಾರತ ಈ 75 ವರ್ಷಗಳಲ್ಲಿ ಬಹಳ ಕಾಲದವರೆಗೂ ಏಕಪಕ್ಷದ ಸಾರ್ವಭೌಮತ್ವದಲ್ಲೇ ಸಾಗಿಬಂದಿದೆ. ಸ್ವಾತಂತ್ರ್ಯಾನಂತರದ ಹಲವು ದಶಕಗಳವರೆಗೆ ಈ ದೇಶವನ್ನು ಕಾಂಗ್ರೆಸ್ ಆಳಿತಲ್ಲವೇ? ಆಗ ನಮ್ಮಲ್ಲಿ ಇದ್ದುದು ಏಕಪಕ್ಷದ ಸಾರ್ವಭೌಮತ್ವವಷ್ಟೇ ಅಲ್ಲದೆ ಆ ಪಕ್ಷವೇ ಏಕವ್ಯಕ್ತಿಯ ನಿಯಂತ್ರಣದಲ್ಲಿ ಇತ್ತೆನ್ನುವುದೂ ಸತ್ಯವೇ ತಾನೆ?

ನೆಹರೂ ಮತ್ತು ಇಂದಿರಾ ಗಾಂಧಿ ಪ್ರಧಾನಿ ಆಗಿದ್ದಾಗ ಕಾಂಗ್ರೆಸ್ಸಿನಲ್ಲಿ ಇವರನ್ನು ಎದುರಿಸುವ ಎಂಟೆದೆ ಯಾರಿಗೆ ಇತ್ತು? ಅದರಲ್ಲೂ 'ಇಂದಿರಾ ಇಂಡಿಯಾ, ಇಂಡಿಯಾ ಇಂದಿರಾ' ಘೋಷಣೆಯನ್ನು ಕಾಂಗ್ರೆಸ್ಸಿಗರು ಪ್ರಶ್ನಿಸದೇ ಸ್ವೀಕರಿಸಿದ ದಿನಗಳೂ ಇದ್ದವಲ್ಲವೇ? ಈಗ ಬಿಜೆಪಿ ಕೂಡ ಹಿಂದಿನ ಕಾಂಗ್ರೆಸ್ ತರಹವೇ ಏಕವ್ಯಕ್ತಿ ಕೇಂದ್ರಿತ. ಇವು ಬೇರೆ ಬೇರೆ ಪಕ್ಷಗಳಾದರೂ ಅವುಗಳ ತತ್ವ ಮತ್ತು ಸಿದ್ಧಾಂತಗಳ ಮೂಲಸ್ರೋತ ವ್ಯಕ್ತಿಪೂಜೆ (ಕಲ್ಟ್ ಆಫ್ ಪರ್ಸನಾಲಿಟಿ). ವರಸೆ ಬೇರೆ ಇರಬಹುದು! ಎಲ್ಲ ಪಕ್ಷಗಳೂ ಏಕವ್ಯಕ್ತಿ ಅಥವಾ ಆ ವ್ಯಕ್ತಿಕುಟುಂಬ ಅವಲಂಬಿತವೆ. ಒಬ್ಬ ವ್ಯಕ್ತಿಯ ಹಿಡಿತಕ್ಕೆ ಇಲ್ಲಿ ಪ್ರಾಧಾನ್ಯ. ಇದು 'ಅಪಾಯಕಾರಿ' ಎಂದಾದರೂ ಇದೇ ನಮ್ಮ ಪ್ರಜಾಪ್ರಭುತ್ವ ಎಂದೇ ನಾವು ಪ್ರಜೆಗಳು ಒಪ್ಪಿಕೊಂಡಿರುವುದು.

ಸಾಮಗ ದತ್ತಾತ್ರಿ, ಬೆಂಗಳೂರು

ಅಂದೇ ಪೂರೈಕೆ, ಅಂದೇ ಪಾವತಿ ವ್ಯವಸ್ಥೆಯಾಗಲಿ

ಕಬ್ಬು ದೇಶದ ಪ್ರಮುಖ ಆರ್ಥಿಕ ಬೆಳೆ. ದೇಶದಲ್ಲಿ ಸುಮಾರು 700 ಹಾಗೂ ರಾಜ್ಯದಲ್ಲಿ 79 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ದೇಶದಾದ್ಯಂತ ಸುಮಾರು ಏಳು ಕೋಟಿ ರೈತರು ಕಬ್ಬು ಬೆಳೆಯುತ್ತಾರೆ. ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ಉದ್ದರಿ ಪೂರೈಸುತ್ತಾರೆ. ಇದು ಅತ್ಯಂತ ಅಪಾಯಕಾರಿ ಮತ್ತು ರೈತರನ್ನು ಶೋಷಣೆ ಮಾಡುವ ವಿಧಾನವಾಗಿದೆ. ಬಹಳಷ್ಟು ಕಾರ್ಖಾನೆಗಳು ರೈತರಿಗೆ ಸಕಾಲದಲ್ಲಿ ಹಣ ಪಾವತಿ ಮಾಡುವುದಿಲ್ಲ. ಕೆಲವು ಕಾರ್ಖಾನೆಗಳು ಅರ್ಧ ಬೆಲೆ ಕೊಟ್ಟು ಉಳಿದದ್ದನ್ನು ನುಂಗಿಹಾಕುತ್ತವೆ. ರೈತರು ಧರಣಿ ನಡೆಸಿದರೂ ಹಣ ಬರುವುದಿಲ್ಲ. ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ ದಿನವೇ ಹಣ ಪಾವತಿಸುವುದನ್ನು ಸರ್ಕಾರವು ಕಾನೂನಾತ್ಮಕವಾಗಿ ಕಡ್ಡಾಯಗೊಳಿಸಬೇಕು. ಇದರಿಂದ ರೈತರಿಗೆ ಬಹುದೊಡ್ಡ ರಕ್ಷಣೆ ದೊರೆಯುತ್ತದೆ ಮತ್ತು ಅವರ ಹಿತರಕ್ಷಣೆಯಲ್ಲಿ ದೊಡ್ಡ ಮೈಲಿಗಲ್ಲಾಗುತ್ತದೆ.

ಕೃಷ್ಣಪ್ಪ ಬಿಲಕೇರಿ, ಅಂಕಲಗಿ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಕ್ಸಲರ ನಿಗ್ರಹ ಮತ್ತು ಪುನರ್ವಸತಿ ಬದಲಾಯಿತೇ ಸರ್ಕಾರದ ಆದ್ಯತೆ?

ನಕ್ಸಲರನ್ನು ಇನ್ನೆರಡು ವರ್ಷಗಳಲ್ಲಿ ದೇಶದಿಂದ ನಿರ್ಮೂಲನೆ ಮಾಡುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಘೋಷಿಸಿದ್ದಾರೆ. ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಹಿಂದೆಯೂ ಈ ರೀತಿಯ ಮಾತುಗಳನ್ನಾಡಿದ್ದರು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದ ನಂತರ ನಕ್ಸಲರ ನಿರ್ವಹಣೆ ವಿಧಾನ ಬದಲಾಗಿತ್ತು. ಈ ಅವಧಿಯಲ್ಲಿ ನಕ್ಸಲರ ದಾಳಿ ಮತ್ತು ದಾಳಿಯಲ್ಲಿ ನಾಗರಿಕರು ಮೃತಪಟ್ಟ ಸಂಖ್ಯೆ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿತ್ತು. ಸರ್ಕಾರಕ್ಕೆ ಶರಣಾಗುವ ನಕ್ಸಲರ ಸಂಖ್ಯೆಯೂ ದೊಡ್ಡದೇ ಇತ್ತು. ನಕ್ಸಲರ ಚಟುವಟಿಕೆ ಕಡಿಮೆಯಾಗಿತ್ತು. ಆದರೆ ಛತ್ತೀಸಗಢದಲ್ಲಿ ಈಚೆಗೆ ನಡೆದ ಎನ್‌ಕೌಂಟರ್ ಬೇರೆಯದ್ದೇ ಕತೆ ಹೇಳುತ್ತದೆ. 2024ರ ಹೊತ್ತಿಗೆ ನಕ್ಸಲರ ನಿಭಾಯಿಸುವ ವಿಧಾನವನ್ನು ಸರ್ಕಾರ ಮತ್ತೆ ಬದಲಿಸಿತೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ

● ಜಯಸಿಂಹ ಆರ್.

ನಕ್ಸಲ್‌ವಾದವನ್ನು ದೇಶದ ಕಾನೂನು ಉಗ್ರವಾದ ಎಂದೇ ಪರಿಗಣಿಸುತ್ತದೆ. ಸರ್ಕಾರಿ ದಾಖಲೆಗಳಲ್ಲಿ ನಕ್ಸಲರನ್ನು ಎಡಪಂಥೀಯ ತೀವ್ರಗಾಮಿಗಳು ಎಂದೇ ಕರೆಯಲಾಗುತ್ತದೆ. ಆದರೆ ಉಗ್ರರನ್ನು ನಿಗ್ರಹಿಸುವ ರೀತಿಗೂ, ನಕ್ಸಲರ ನಿಗ್ರಹದ ರೀತಿಗೂ ಭಾರಿ ಅಂತರವಿದೆ. ಈ ಹಿಂದಿನ ಎಲ್ಲಾ ಸರ್ಕಾರಗಳು ಈ ಅಂತರವನ್ನು ಕಾಯ್ದುಕೊಂಡೇ ಬಂದಿವೆ. 2014ಕ್ಕೂ ಮುನ್ನ ಅಧಿಕಾರದಲ್ಲಿದ್ದ ಯುಪಿಎ-2 ಸರ್ಕಾರವೂ ನಕ್ಸಲರ ಶರಣಾಗತಿ ಮತ್ತು ಪುನರ್ವಸತಿಗೆ ಆದ್ಯತೆ ನೀಡಿತ್ತು. ಪರಿಸ್ಥಿತಿ ಕೈ ಮೀರಿದಾಗ ಬಲಪ್ರಯೋಗದ ಮೊರೆ ಹೋಗುತ್ತಿತ್ತು. 2014ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದಾಗಲೂ ಇದೇ ನೀತಿಯನ್ನು ಇನ್ನಷ್ಟು ತೀವ್ರವಾಗಿ ಜಾರಿಗೆ ತಂದಿತು. ಇದರ ಪರಿಣಾಮವಾಗಿ 10 ವರ್ಷಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ನಕ್ಸಲರು ಶರಣಾಗಿ, ಪುನರ್ವಸತಿ ಕಂಡುಕೊಂಡರು. ನಕ್ಸಲರ ಚಟುವಟಿಕೆಗಳೂ ಕಡಿಮೆಯಾಗಿದ್ದವು ಎನ್ನುತ್ತದೆ ಸರ್ಕಾರದ ದತ್ತಾಂಶಗಳು.

2004ರಿಂದ 2014ರ ನಡುವೆ ನಕ್ಸಲರು ದೇಶದಾದ್ಯಂತ ನಡೆಸಿದ್ದ ದಾಳಿಗಳ ಸಂಖ್ಯೆ 16 ಸಾವಿರಕ್ಕೂ ಹೆಚ್ಚು. ಆದರೆ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ನಕ್ಸಲರ ಪುನರ್ವಸತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ ಕಾರಣ 2014ರಿಂದ 2024ರ ನಡುವೆ ನಕ್ಸಲರ ದಾಳಿಗಳ ಸಂಖ್ಯೆ ಇಳಿಕೆಯಾಯಿತು. ಈ ಅವಧಿಯಲ್ಲಿ ನಕ್ಸಲರು ದೇಶದಾದ್ಯಂತ ನಡೆಸಿದ ದಾಳಿಗಳ ಸಂಖ್ಯೆ ಸುಮಾರು 7,900ಕ್ಕೆ ಇಳಿಯಿತು ಎಂದು ಸರ್ಕಾರವು ಹೇಳಿಕೊಂಡಿತ್ತು. 2014ರ ನಂತರ ಸುಮಾರು 11 ಸಾವಿರ ನಕ್ಸಲರು ಸರ್ಕಾರಕ್ಕೆ ಶರಣಾಗಿದ್ದಾರೆ ಎಂದು ಕೆಲವು ಸ್ವಯಂ ಸೇವಾ ಸಂಸ್ಥೆಗಳು ಅಂಕಿ-ಅಂಶ ನೀಡುತ್ತವೆ. ನಕ್ಸಲರ ನಿಗ್ರಹದಲ್ಲಿ ಇದು ಗಮನಾರ್ಹ ಪ್ರಗತಿಯೇ.

ಈ ಎಲ್ಲಾ ಪ್ರಗತಿಗಳ ಜತೆಗೆ ವರ್ಷಗಳ ಹಿಂದೆಯೇ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಇನ್ನು ಮೂರು ವರ್ಷದಲ್ಲಿ ನಕ್ಸಲರನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತೇವೆ ಎಂದು ಘೋಷಿಸಿದ್ದರು. ಆನಂತರದ ವರ್ಷಗಳಲ್ಲಿ ನಕ್ಸಲರ ಚಟುವಟಿಕೆಗಳು, ದಾಳಿಗಳ ಸುದ್ದಿಗಳು ಇಲ್ಲವೇ ಇಲ್ಲ ಎನಿಸುವಷ್ಟು ಕಡಿಮೆಯಾಗಿದ್ದವು.

ಆದರೆ ಈಚೆಗೆ ಛತ್ತೀಸಗಢ ಬಸ್ತಾರ್ ಪ್ರದೇಶದಲ್ಲಿ ಭದ್ರತಾ ಪಡೆಗಳು 29 ನಕ್ಸಲರನ್ನು ಎನ್‌ಕೌಂಟರ್‌ನಲ್ಲಿ ಹೊಡೆದುಉರುಳಿಸಿದವು. ಈ ಬಗ್ಗೆ ಮಾತನಾಡುತ್ತಲೇ ಗೃಹ ಸಚಿವ ಅಮಿತ್ ಶಾ, 'ಇನ್ನೆರಡು ವರ್ಷಗಳಲ್ಲಿ ನಕ್ಸಲರನ್ನು ದೇಶದಿಂದ ನಿರ್ಮೂಲನೆ ಮಾಡುತ್ತೇವೆ. ಅವರು ಶಸ್ತ್ರಾಸ್ತ್ರ ಕೆಳಗಿರಿಸದೇ ಇದ್ದರೆ, ಭದ್ರತಾ ಪಡೆಗಳು ಮಾತನಾಡುತ್ತವೆ' ಎಂದು ಘೋಷಿಸಿದ್ದರು.

ಇದಕ್ಕಿಂತ ಗಮನಾರ್ಹ ಸಂಗತಿ ಎಂದರೆ ಈ ವರ್ಷದ ಆರಂಭದಿಂದ ಈವರೆಗೆ ದೇಶದಾದ್ಯಂತ ಕೇಂದ್ರದ ಭದ್ರತಾ ಪಡೆಗಳು ಮತ್ತು ರಾಜ್ಯ ಪೊಲೀಸರು ಎನ್‌ಕೌಂಟರ್‌ನಲ್ಲಿ 80 ನಕ್ಸಲರನ್ನು ಹೊಡೆದುರುಳಿಸಿದ್ದು. ಈಚಿನ ವರ್ಷಗಳಲ್ಲಿ ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟೊಂದು ನಕ್ಸಲರ ಹತ್ಯೆ ನಡೆಸಿದ ಉದಾಹರಣೆ ಇದೊಂದೆ. 2022ರಲ್ಲಿ ದೇಶದಾದ್ಯಂತ ಭದ್ರತಾ ಪಡೆಗಳ ಕಾರ್ಯಾಚರಣೆಯಲ್ಲಿ ಮೃತಪಟ್ಟ ನಕ್ಸಲರ ಸಂಖ್ಯೆ 66. 2023ರಲ್ಲಿ ಹಾಗೆ ಮೃತಪಟ್ಟ ನಕ್ಸಲರ ಸಂಖ್ಯೆ 56ರಷ್ಟು ಇತ್ತು. ಆದರೆ 2024ರ ಮೊದಲ ನಾಲ್ಕು ತಿಂಗಳಲ್ಲಿ, ಛತ್ತೀಸಗಢ ಒಂದರಲ್ಲೇ ಒಟ್ಟು 79 ನಕ್ಸಲರು ಭದ್ರತಾ ಪಡೆಗಳ ಎನ್‌ಕೌಂಟರ್‌ನಲ್ಲಿ ಬಲಿಯಾಗಿದ್ದಾರೆ. ದೇಶದ ಬೇರೆಡೆ ಹತರಾದ ನಕ್ಸಲರ ಸಂಖ್ಯೆಯನ್ನು ಪರಿಗಣಿಸಿದರೆ ಈ ಸಂಖ್ಯೆ ಇನ್ನೂ ಹೆಚ್ಚುತ್ತದೆ.

ಈ ಸಂಖ್ಯೆ ದಿಢೀರ್ ಹೆಚ್ಚಾದುದರ ಬಗ್ಗೆ ಹಲವು ಸಾಮಾಜಿಕ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಸರ್ಕಾರವೂ ತಾನೇ ಪಟ್ಟು ಹಿಡಿದು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದ ನಕ್ಸಲರ ಪುನರ್ವಸತಿ ಕಾರ್ಯಕ್ರಮದಿಂದ ದೂರ ಸರಿಯುತ್ತಿದೆಯೇ ಎಂದು ಹಲವರು ಪ್ರಶ್ನೆ ಎತ್ತಿದ್ದಾರೆ. ಛತ್ತೀಸಗಢದಲ್ಲಿ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ಕೆಲವೇ ದಿನಗಳು ಉಳಿದಿದ್ದ ಸಂದರ್ಭದಲ್ಲಿ ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆದಿದೆ. ಕಾರ್ಯಾಚರಣೆಯ ನಂತರ ಕೇಂದ್ರ ಸರ್ಕಾರದ ಹಲವು ಪ್ರತಿನಿಧಿಗಳು ನಕ್ಸಲರು ಹತರಾದ ಬಗ್ಗೆ ಹೆಮ್ಮೆಯಿಂದ ಪ್ರತಿಕ್ರಿಯೆ ನೀಡಿದ್ದಾರೆ. ಈ ಕಾರ್ಯಾಚರಣೆ ನಡೆದ ಸಮಯದ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆ ಎತ್ತಿವೆ.

ಶರಣಾಗತಿ ಇಳಿಕೆ

2014ರಲ್ಲಿ ಬಿಜೆಪಿ ಸರ್ಕಾರವು ನಕ್ಸಲರ ಪುನರ್ವಸತಿಗೆ ಒತ್ತು ನೀಡಿದ್ದರಿಂದ ಪ್ರತಿ ವರ್ಷ ಸರ್ಕಾರಕ್ಕೆ ಶರಣಾಗುವ ನಕ್ಸಲರ ಸಂಖ್ಯೆ ಏರಿಕೆಯಾಗಿತ್ತು. ಅಲ್ಲಿಯವರೆಗೆ ನಕ್ಸಲ್ ಪೀಡಿತ ಪ್ರದೇಶಗಳಲ್ಲಿನ ಭದ್ರತಾ ವೆಚ್ಚ, ವಿಶೇಷ ಅನುದಾನ ಕಾರ್ಯಕ್ರಮಗಳು ಮತ್ತು ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚವನ್ನು ಕೇಂದ್ರ ಸರ್ಕಾರವೇ ಪೂರ್ಣ ಪ್ರಮಾಣದಲ್ಲಿ ಭರಿಸುತ್ತಿತ್ತು.

ಆದರೆ 2017ರಿಂದ ಈ ಅನುದಾನದಲ್ಲಿ ತನ್ನ ಪಾಲನ್ನು ಕೇಂದ್ರ ಸರ್ಕಾರವು ಕಡಿಮೆ ಮಾಡಿತು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರ್ಕಾರಗಳು ಭದ್ರತೆಗೆ ಮಾಡುವ ವೆಚ್ಚವನ್ನು ಮಾತ್ರ ಕೇಂದ್ರ ಸರ್ಕಾರವು ಭರಿಸತೊಡಗಿತು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರ್ಕಾರಗಳು ನಡೆಸುವ ಮೂಲಸೌಕರ್ಯ ಅಭಿವೃದ್ಧಿ ಚಟುವಟಿಕೆಗಳ ವೆಚ್ಚದಲ್ಲಿ ಕೇಂದ್ರ ಸರ್ಕಾರವು ತನ್ನ ಪಾಲನ್ನು ಶೇ 100ರಿಂದ ಶೇ 60ಕ್ಕೆ ಇಳಿಸಿತು. ಉಳಿದ ಶೇ40ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರಗಳೇ ಭರಿಸಿಕೊಳ್ಳಬೇಕು ಎಂದು ಹೇಳಿತು.

ಇದಲ್ಲದೇ ವಿಶೇಷ ಅನುದಾನಿತ ಕಾರ್ಯಕ್ರಮಗಳ ವೆಚ್ಚದಲ್ಲೂ ಕೇಂದ್ರ ಸರ್ಕಾರವು ತನ್ನ ಪಾಲನ್ನು ಶೇ 100ರಿಂದ ಶೇ 60ಕ್ಕೆ ಇಳಿಸಿತು. ಉಳಿದ ಶೇ 40ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರಗಳೇ ಹೊಂದಿಸಿಕೊಳ್ಳಬೇಕು ಎಂದು ಸೂಚಿಸಿತು. ರಾಜ್ಯ ಸರ್ಕಾರಗಳು ನಕ್ಸಲರ ಶರಣಾಗತಿ ಮತ್ತು ಪುನರ್ವಸತಿಗೆ ಆಗುವ ವೆಚ್ಚವನ್ನು ಈ ಅನುದಾನದ ಮೂಲಕವೇ ಭರಿಸಿಕೊಳ್ಳುತ್ತಿದ್ದವು. ಈ ಅನುದಾನದ ಪಾಲನ್ನು ಕೇಂದ್ರ ಸರ್ಕಾರವು ಶೇ 40ರಷ್ಟು ಕಡಿಮೆ ಮಾಡಿದ್ದರ ಪರಿಣಾಮವು ಕೇಂದ್ರ ಸರ್ಕಾರದ್ದೇ ದತ್ತಾಂಶಗಳಲ್ಲಿ ಕಾಣುತ್ತದೆ. 2017ರ ನಂತರ ಶರಣಾಗುವ ನಕ್ಸಲರ ಸಂಖ್ಯೆ ಇಳಿಕೆಯಾಗಿದೆ. ಇದಕ್ಕೆ ಅಪವಾದವೆಂದರೆ 2022 ಮಾತ್ರ. ಆ ವರ್ಷ 2,800ಕ್ಕೂ ಹೆಚ್ಚು ನಕ್ಸಲರು ಶರಣಾಗಿದ್ದರು. ನಂತರ, ಶರಣಾಗುವ ನಕ್ಸಲರ ಸಂಖ್ಯೆ ಮತ್ತೆ ಇಳಿದಿದೆ.

ಕೇಂದ್ರ ಸರ್ಕಾರವು ನಕ್ಸಲರ ಶರಣಾಗತಿ ಮತ್ತು ಪುನರ್ವಸತಿಗೆ ನೀಡುತ್ತಿದ್ದ ಆದ್ಯತೆಯನ್ನು ಬದಲಿಸಿದೆ ಎಂಬುದನ್ನೇ ಅನುದಾನ ಪಾಲು ಕಡಿತ ಮಾಡಿದ ಕ್ರಮ ಸೂಚಿಸುತ್ತದೆ. ಅದರ ಪರಿಣಾಮವಾಗಿ ಕೇಂದ್ರ ಸರ್ಕಾರದ್ದೇ ನೀತಿಗೆ ಹಿನ್ನಡೆಯಾಗಿದೆ ಎಂಬುದೂ ಢಾಳಾಗಿ ಕಾಣುತ್ತದೆ. ಇದರ ಬೆನ್ನಲ್ಲೇ ಸರ್ಕಾರವು ಶಸ್ತ್ರಾಸ್ತ್ರಗಳ ಮೂಲಕ ನಕ್ಸಲರ ನಿಗ್ರಹಕ್ಕೆ ಒತ್ತು ನೀಡುತ್ತಿದೆ ಎಂಬುದನ್ನು ಕೇಂದ್ರದ ಸಚಿವರ ಹೇಳಿಕೆಗಳು ಪುಷ್ಟೀಕರಿಸುತ್ತವೆ.



ಹತ್ತು ರಾಜ್ಯಗಳ 70 ಜಿಲ್ಲೆಗಳನ್ನು ನಕ್ಸಲ್ ಪೀಡಿತ ಪ್ರದೇಶ ಎಂದು ಗುರುತಿಸಲಾಗಿದೆ. 2013ರ ಹೊತ್ತಿಗೆ ಒಟ್ಟು 126 ಜಿಲ್ಲೆಗಳನ್ನು ನಕ್ಸಲ್ ಪೀಡಿತ ಎಂದು ಗುರುತಿಸಲಾಗಿತ್ತು. ಅದಕ್ಕೂ ಮೊದಲು ಕರ್ನಾಟಕದ ಕೆಲವು ಜಿಲ್ಲೆಗಳೂ ನಕ್ಸಲ್ ಪೀಡಿತ ಪ್ರದೇಶದ ವ್ಯಾಪ್ತಿಯಲ್ಲಿ ಇದ್ದವು. ನಕ್ಸಲ್ ಚಟುವಟಿಕೆ ಸಂಪೂರ್ಣವಾಗಿ ಇಲ್ಲವಾದ ಕಾರಣ, ಕರ್ನಾಟಕದ ಜಿಲ್ಲೆಗಳನ್ನು ಆ ವರ್ಗದಿಂದ ಕೈಬಿಡಲಾಗಿತ್ತು.

ಮೂಲಸೌಕರ್ಯ ಅಭಿವೃದ್ಧಿ ಮತ್ತು ಪುನರ್ವಸತಿ ಕಾರ್ಯಕ್ರಮಗಳ ಕಾರಣದಿಂದ ಬೇರೆ ರಾಜ್ಯಗಳ ನಕ್ಸಲ್ ಪೀಡಿತ ಪ್ರದೇಶಗಳಲ್ಲೂ ಪರಿಸ್ಥಿತಿ ಸುಧಾರಿಸಿದೆ. ಆದರೆ ಈಚಿನ ವರ್ಷಗಳಲ್ಲಿ ನಕ್ಸಲರ ಚಟುವಟಿಕೆ ಮತ್ತೆ ಏರಿಕೆಯಾಗುತ್ತಿದೆ ಎಂಬ ವರದಿಗಳೂ ಇವೆ. ಈಚೆಗಷ್ಟೇ ಕರ್ನಾಟಕ-ಕೇರಳ ಗಡಿಯಲ್ಲಿನ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಕ್ಸಲರು ಕಾಣಿಸಿಕೊಂಡಿದ್ದಾರೆ ಎಂದು ವರದಿಯಾಗಿತ್ತು. ರಾಜ್ಯ ಪೊಲೀಸರು ಶೋಧ ಕಾರ್ಯವನ್ನೂ ನಡೆಸಿದ್ದರು.

ಛತ್ತೀಸಗಢ ಮತ್ತು ಒಡಿಸಾದಲ್ಲೂ ಇಂಥದ್ದೇ ಬೆಳವಣಿಗೆಗಳನ್ನು ಮಾಧ್ಯಮಗಳು ವರದಿ ಮಾಡಿವೆ. ಕೇಂದ್ರ ಸರ್ಕಾರದ ಬದಲಾದ ನೀತಿಯ ಪರಿಣಾಮವಾಗಿಯೇ ನಕ್ಸಲ್ ಚಟುವಟಿಕೆ ಏರಿಕೆಯಾಗುತ್ತಿದೆ ಎಂದೂ ವಿರೋಧ ಪಕ್ಷಗಳು ಆರೋಪಿಸುತ್ತಿವೆ.

ಎನ್‌ಕೌಂಟರ್‌ನಲ್ಲಿ ಮೃತಪಟ್ಟವರು...

ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಗಳಲ್ಲಿ ಮೃತಪಟ್ಟ ನಕ್ಸಲರ ಸಂಖ್ಯೆ ಏರಿಕೆಯಾಗುತ್ತಲೇ ಇತ್ತು. ಆದರೆ 2024ರಲ್ಲಿ ನಕ್ಸಲರ ಎನ್‌ಕೌಂಟರ್ ಹತ್ಯೆಗಳ ಸಂಖ್ಯೆ ಏರಿಕೆಯಾಗಿದೆ. 2024ರ ಮೊದಲ ಮೂರೂವರೆ ತಿಂಗಳಲ್ಲಿ ಮೃತಪಟ್ಟಿದ್ದಾರೆ.



*(ಏಪ್ರಿಲ್ 17ರವರೆಗಿನ ಮಾಹಿತಿ)

ಆಧಾರ: ಕೇಂದ್ರ ಗೃಹ ಸಚಿವಾಲಯವು ಲೋಕಸಭೆ ಮತ್ತು ರಾಜ್ಯಸಭೆಗಳಿಗೆ ನೀಡಿದ ಲಿಖಿತ ಉತ್ತರಗಳು, ಕೇಂದ್ರ ಗೃಹ ಸಚಿವಾಲಯದ ಎಡಪಂಥೀಯ ತೀವ್ರವಾದ ನಿಗ್ರಹ ಘಟಕದ ವರದಿಗಳು, ಪಿಟಿಐ, ಸೌತ್ ಏಷ್ಯಾ ಟೆರರಿಸಂ ಪೋರ್ಟಲ್

'**ಮುಸ್ಲಿಂ ಅಸ್ಲಾಂ:** ಶುಚಿಯಾಗಿರುವವನು, ಆತನ ಅಂಗಡಿಯಿಂದ ಸಿಹಿತಿಂಡಿಗಳನ್ನು ಖರೀದಿಸಬೇಕು
ಹಿಂದೂ ಅಪ್ಪನ್: ಶುಚಿಯಾಗಿಲ್ಲದವನು, ಆತನ ಅಂಗಡಿಯಿಂದ ಯಾರೂ ಸಿಹಿತಿಂಡಿ ಖರೀದಿಸುವಂತಿಲ್ಲ
ಮುಸ್ಲಿಂ ಆದಿಲ್: ಶುಚಿಯಾಗಿರುವವನು ಮತ್ತು ಆತನಲ್ಲಿ ಒಳ್ಳೆಯ ಗುಣಗಳಿವೆ
ಹಿಂದೂ ಅಭಿಮನ್ಯು: ಶುಚಿಯಾಗಿಲ್ಲದವನು, ಸ್ನಾನವನ್ನೇ ಮಾಡದವನು, ಕೆಟ್ಟ ವಾಸನೆ ಸೂಸುವವನು

ಕೇರಳದಲ್ಲಿ ಮಕ್ಕಳಿಗೆ ಇಂಥದ್ದನ್ನು ಹೇಳಿಕೊಡಲಾಗುತ್ತಿದೆ. ಕಮ್ಮಿಗಳು (ಕಮ್ಯುನಿಷ್ಟರು) ಸಣ್ಣ ಮಕ್ಕಳನ್ನು ಹೀಗೆ ದಾರಿತಪ್ಪಿಸುತ್ತಿದ್ದಾರೆ...'

'ಸಿನ್ಹಾ (ಮೋದಿಯ ಪರಿವಾರ)' ಎನ್ನುವ 'ಎಕ್ಸ್' ಖಾತೆಯು ಈ ಪೋಸ್ಟ್ ಅನ್ನು ಇದೇ 6ರಂದು ಮಾಡಿದೆ. ಪಠ್ಯ ಪುಸ್ತಕವೊಂದರ ಪಠ್ಯದ ಚಿತ್ರಗಳನ್ನು ಪೋಸ್ಟ್‌ನೊಂದಿಗೆ ಅಂಟಿಸಲಾಗಿದೆ. ಇದನ್ನು ಸುಮಾರು 23 ಲಕ್ಷ ಜನರು ನೋಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಇದೇ ಪಠ್ಯದ ಚಿತ್ರಗಳನ್ನು ಬಳಸಿಕೊಂಡು ಸಾವಿರಾರು ಸಂಖ್ಯೆಯಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗಿದೆ. ಕೇರಳ ಸರ್ಕಾರವನ್ನು ದೂರಲಾಗಿದೆ. 'ಕೇರಳ ರಾಜ್ಯದಲ್ಲಿ ಬಹುದೊಡ್ಡದಾದ ಪ್ರಚಾರ ತಂತ್ರವೊಂದು ನಡೆಯುತ್ತಿದೆ. ಕೇರಳ ಸರ್ಕಾರವು ನಡೆಸುವ ಶಾಲೆಗಳಲ್ಲಿ ಇಂಥ ಪಠ್ಯಗಳನ್ನು ಮಕ್ಕಳು ಓದುತ್ತಿದ್ದಾರೆ. ನಾಚಿಕೆಯಾಗಬೇಕು' ಎಂದು 'ಹಿಂದೂಪರಿವಾರ್' ಎನ್ನುವ ಇನ್‌ಸ್ಟಾಗ್ರಾಂ ಖಾತೆ ಬರೆದುಕೊಂಡಿದೆ.

ಆದರೆ, ಇದೊಂದು ಸುಳ್ಳು ಸುದ್ದಿ. ಕೇರಳದ ಶಾಲಾ ಮಂಡಳಿಯು ಇಂಥದ್ದೊಂದು ಪಠ್ಯದ ಮುದ್ರಣ ಮಾಡಿಯೇ ಇಲ್ಲ.

ಪಿವಿ ಫ್ಯಾಕ್ಟ್ ಚೆಕ್



ಪಿಟಿಐ ಈ ಕುರಿತು ಫ್ಯಾಕ್ಟ್‌ಚೆಕ್ ನಡೆಸಿದೆ. ತನ್ನ ಹುಡುಕಾಟದ ಹಾದಿಯನ್ನು ವಿಸ್ತೃತವಾಗಿ ವಿವರಿಸಿದೆ.

'ಇಂಥ ಪೋಸ್ಟ್‌ಗಳ ಜಾಡು ಹಿಡಿದು ಹೋಗಲಾಯಿತು. ಸಾಮಾಜಿಕ ಜಾಲತಾಣಗಳನ್ನು ತಡಕಾಡುವಾಗ ಕೇರಳದ ಶಿಕ್ಷಣ ಮತ್ತು ಕಾರ್ಮಿಕ ಸಚಿವ ವಿ. ಶಿವನ್‌ಕುಟ್ಟಿ ಅವರ ಪೋಸ್ಟ್ ದೊರೆಯಿತು.

'ಮಿಸ್ಟರ್ ಸಿನ್ಹಾ' ಎಂಬ 'ಎಕ್ಸ್' ಖಾತೆದಾರರು ಕೇರಳ ಸರ್ಕಾರವನ್ನು ಗುರಿಯಾಗಿರಿಸಿಕೊಂಡು ಸುಳ್ಳು ಪ್ರಚಾರವೊಂದನ್ನು ಮಾಡುತ್ತಿದ್ದಾರೆ ಎಂದು ಕೇರಳದ ಪೊಲೀಸ್ ಮಹಾನಿರ್ದೇಶಕರಿಗೆ ದೂರನ್ನು ನೀಡಲಾಗಿದೆ. ಸುಳ್ಳು ಸುದ್ದಿ ಹಬ್ಬಿಸುತ್ತಿರುವ ಈತನ ಮೇಲೆ ಕಾನೂನ ಕ್ರಮ ಜರುಗಿಸಬೇಕು ಎಂದು ದೂರಿನಲ್ಲಿ ಕೋರಲಾಗಿದೆ' ಎಂದು ಶಿವನ್‌ಕುಟ್ಟಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಈ ಪೋಸ್ಟ್ ಅನ್ನು 1.96 ಲಕ್ಷ ಜನರು ನೋಡಿದ್ದಾರೆ.

'ಇನ್ನೂ ಹೆಚ್ಚಿನ ಹುಡುಕಾಟ ನಡೆಸಿದಾಗ, ಕೇರಳ ರಾಜ್ಯ ಮಂಡಳಿಯ 'ಸಮಗ್ರ' ಎನ್ನುವ ವೆಬ್‌ಸೈಟ್ ದೊರೆಯಿತು. ಇಲ್ಲಿ ಕೇರಳ ಸರ್ಕಾರವು ಮುದ್ರಿಸುವ ಎಲ್ಲ ಪಠ್ಯದ ಪ್ರತಿಗಳು ದೊರೆಯುತ್ತವೆ.

'ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರಗಳಿರುವ ಪಠ್ಯವನ್ನು ಹುಡುಕಲಾಯಿತು. ಆದರೆ, ಇಂಥ ಚಿತ್ರವಿರುವ ಪಠ್ಯವು ದೊರೆಯಲಿಲ್ಲ. ಆದರೆ, ಸಚಿವ ಶಿವನ್‌ಕುಟ್ಟಿ ಅವರ ಪೋಸ್ಟ್‌ಗೆ ಪ್ರತಿಕ್ರಿಯೆಯೊಂದು ಬಂದಿತ್ತು. 'ಈ ಪಠ್ಯಗಳು ಪೀಸ್ ಇಂಟರ್‌ನ್ಯಾಷನಲ್ ಶಾಲೆಯದ್ದು, ಕೇರಳ ಸರ್ಕಾರ ಮುದ್ರಿಸಿದ ಪಠ್ಯಗಳಲ್ಲ' ಎನ್ನುವ ಪ್ರತಿಕ್ರಿಯೆ ಅದಾಗಿತ್ತು.

'ಇದನ್ನೇ ಆಧಾರವಾಗಿಸಿಕೊಂಡು, ಹೆಚ್ಚಿನ ಹುಡುಕಾಟ ನಡೆಸಿದಾಗ, 2018ರ ಜನವರಿ 8ರಂದು 'ಬ್ಯುಸಿನೆಸ್ ಸ್ಟಾಂಡರ್ಸ್' ಪತ್ರಿಕೆಯಲ್ಲಿ ಪ್ರಕಟವಾದ ವರದಿಯೊಂದು ಸಿಕ್ಕಿತು. 'ಆಕ್ಷೇಪಾರ್ಹ ಪಠ್ಯವನ್ನು ಪಾಠ ಮಾಡುತ್ತಿರುವುದಕ್ಕಾಗಿ ಕೊಚ್ಚಿಯ ಪೀಸ್ ಇಂಟರ್‌ನ್ಯಾಷನಲ್ ಶಾಲೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎನ್ನುವುದು ಆ ವರದಿಯಾಗಿತ್ತು. ಎರ್ನಾಕುಲಂ ಜಿಲ್ಲಾ ಶಿಕ್ಷಣ ಅಧಿಕಾರಿಯ ದೂರಿನ ಮೇಲೆ ಪ್ರಕರಣ ದಾಖಲಾಗಿತ್ತು. ಸಿಬಿಎಸ್‌ಇಯಿಂದಲೂ ಈ ಶಾಲೆ ಮಾನ್ಯತೆ ಪಡೆದಿರಲಿಲ್ಲ ಎಂದೂ ಈ ವರದಿಯಲ್ಲಿ ಹೇಳಲಾಗಿತ್ತು. 2016ರ ಡಿಸೆಂಬರ್ 3ರಂದು 'ದಿ ನ್ಯೂಸ್ ಮಿನಿಟ್' ಪ್ರಕಟಿಸಿದ್ದ ವರದಿಯೂ ದೊರೆಯಿತು. 'ಆಕ್ಷೇಪಾರ್ಹ ಶಾಲಾ ಪಠ್ಯವನ್ನು ಮುದ್ರಿಸಿದ್ದಕ್ಕಾಗಿ ಮೂವರು ಪ್ರಕಾಶಕರನ್ನು ಕೇರಳ ಪೊಲೀಸರು ಬಂಧಿಸಿದ್ದಾರೆ' ಎಂದು ಆ ವರದಿಯಲ್ಲಿತ್ತು.

'ಆದ್ದರಿಂದ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪಠ್ಯದ ಚಿತ್ರಗಳು ಕೇರಳ ಸರ್ಕಾರ ರೂಪಿಸಿದ ಪಠ್ಯಗಳಲ್ಲ, ಬದಲಿಗೆ ಪೀಸ್ ಇಂಟರ್‌ನ್ಯಾಷನಲ್ ಎಂಬ ಖಾಸಗಿ ಶಾಲೆಯದ್ದು. ಈ ಪಠ್ಯಗಳಿಗೂ ಕೇರಳ ಶಿಕ್ಷಣ ಇಲಾಖೆಗೂ ಸಂಬಂಧವಿಲ್ಲ' ಎಂದು ಪಿಟಿಐ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಆಸ್ಪತ್ರೆಯಲ್ಲಿ ಅರಳಿದ ಪ್ರೇಮ!

ನಾವು ನೋಡಿದ ಸಿನಿಮಾ

02
- **ನಿರ್ಮಾಣ:** ಅಶ್ವಿನಿ ಪುನೀತ್
- **ನಿರ್ದೇಶನ:** ಪ್ರಶಾಂತ್ ರಾಜೇಂದ್ರ, ರಾಘವ್ ನಾಯಕ್
- **ತಾರಾಗಣ:** ಆಶಿಕಾ ರಂಗನಾಥ್, ರಾಘವ್ ನಾಯಕ್, ಪ್ರವೀಣ್ ತೇಜ್, ಸಿರಿ ರವಿಕುಮಾರ್ ಮತ್ತಿತರರು

ಅವಳು ಸಂಶೋಧನಾನಿರತ ವೈದ್ಯೆ. ಅವನು ರೇಡಿಯೊ ಜಾಕಿ. ಆಸ್ಪತ್ರೆಯ ಕಾರಿಡಾರ್‌ನಲ್ಲಿಯೇ ಪ್ರೀತಿ ಅರಳುತ್ತದೆ. ಡಾಕ್ಟರ್ ಶ್ರದ್ಧಾ ಆಗಿ ಆಶಿಕಾ ರಂಗನಾಥ್ ಕಾಣಿಸಿಕೊಂಡಿದ್ದರೆ, ಜಾಕಿ ಓಶೋ ಆಗಿ ರಾಘವ್ ನಾಯಕ್ ಅಭಿನಯಿಸಿದ್ದಾರೆ. ಇವರಿಬ್ಬರ ಪ್ರೀತಿಯ ಕೆಮಿಸ್ಟ್ರಿ ಅದೆಷ್ಟು ಚೆಂದವಾಗಿ ವರ್ಕ್ ಆಗಿದೆ ಎಂದರೆ, ಚಿತ್ರ ನೋಡುತ್ತಿದ್ದಾಗ ಸಾಕಷ್ಟು ಕಡೆ ನಿರ್ದೇಶಕರು ಇದನ್ನೊಂದು ಪರಿಶುದ್ಧ ಪ್ರೇಮಕಥೆಯಾಗಿಸಬಾರದಿತ್ತೆ ಎನ್ನಿಸುತ್ತದೆ.

ಹೃದಯಾಘಾತದಿಂದ ಮರಣ ಹೊಂದಿದ ಕೆಲ ನಿಮಿಷಗಳಲ್ಲಿ ದೇಹಕ್ಕೆ 02 ಇಂಜೆಕ್ಟ್ ಮಾಡಿದರೆ ಮನುಷ್ಯ ಬದುಕುಳಿಯುವ ಸಾಧ್ಯತೆಯಿದೆ ಎಂಬ ವಿಷಯದ ಸುತ್ತ ಚಿತ್ರ ಸಾಗುತ್ತದೆ. ಡಾಕ್ಟರ್ ಶ್ರದ್ಧಾ ಇದೇ ವಿಷಯದಲ್ಲಿ ಸಂಶೋಧನೆ ನಡೆಸುತ್ತ ಇರುತ್ತಾಳೆ. ಡಾಕ್ಟರ್ ದೇವ್ ಆಗಿ ಪ್ರವೀಣ್ ತೇಜ್ ಹಾಗೂ ಡಾಕ್ಟರ್ ಸೃಷ್ಟಿಯಾಗಿ ಸಿರಿ ರವಿಕುಮಾರ್ ಈ ತಂಡ ಸೇರಿಕೊಳ್ಳುತ್ತಾರೆ. ಆದರೆ ಅಂದುಕೊಂಡಂತೆ ಸಂಶೋಧನೆ ನಡೆಯುವುದಿಲ್ಲ. ಹತ್ತಾರು ವಿಘ್ನಗಳು. ಸಂಶೋಧನೆ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದೇ ಚಿತ್ರಕಥೆ. ಖಳನಾಯಕನ ಪಾತ್ರದಲ್ಲಿ ಡಾ. ಮೃತ್ಯುಂಜಯನಾಗಿ ಬರುವ ಪ್ರಕಾಶ್ ಬೆಳವಾಡಿ ಈ ಸಂಶೋಧನೆಗೆ ಅಡ್ಡಗಾಲಾಗಿ ನಿಲ್ಲುತ್ತಾರೆ.

ಕಥಾವಸ್ತು ಹೊಸತಾಗಿದೆ. ಕಥೆಯನ್ನು ಕಟ್ಟಿಕೊಟ್ಟಿರುವ ರೀತಿಯು ಭಿನ್ನವಾಗಿದೆ. ಸಂಶೋಧನೆ ನಡುವೆ ತೆರೆದುಕೊಳ್ಳುವ ಆಶಿಕಾ ಪ್ರೇಮಕಥೆ ಹಿತವಾದ ಅನುಭವ ನೀಡುತ್ತದೆ. ಆಶಿಕಾ ಹಾಗೂ ರಾಘವ್ ನಟನೆ ಅದ್ಭುತ. ಆಶಿಕಾ ಸಾಕಷ್ಟು ಕಡೆ ಕಣ್ಣಿನ ನೋಟದಿಂದಲೇ ಕೊಲ್ಲುತ್ತಾರೆ. ಚಿತ್ರದ ನಿರ್ದೇಶಕರಲ್ಲೊಬ್ಬರಾಗಿ, ಪ್ರಮುಖ ಪಾತ್ರದಲ್ಲಿಯೂ ನಟಿಸಿರುವ ರಾಘವ್ ನಾಯಕ್ ನಟನಾಗಿ ಬಹಳ ಭರವಸೆ ಮೂಡಿಸುತ್ತಾರೆ. ಪ್ರಕಾಶ್ ಬೆಳವಾಡಿ ನಟನೆ ಗಮನೀಯ. ಡಾಕ್ಟರ್ ವೆಂಕಿಯಾಗಿ ಪುನೀತ್ ಬಿ.ಎ ಅಲ್ಲಲ್ಲಿ ನಗಿಸುತ್ತಾರೆ.

ಇಷ್ಟಾಗಿಯೂ ಚಿತ್ರ ಮನಸ್ಸಿಗೆ ನಾಟುವುದಿಲ್ಲ. ಸಂಶೋಧನೆ ಟ್ರ್ಯಾಕ್ ಅನ್ನು ಗಟ್ಟಿಯಾಗಿಸಿ ಸೈ-ಫೈ (ಸೈನ್ಸ್ ಫಿಕ್ಷನ್) ಚಿತ್ರವನ್ನಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಇಲ್ಲವಾದಲ್ಲಿ ಇದೇ ಪಾತ್ರಗಳನ್ನಿಟ್ಟುಕೊಂಡು ಪೂರ್ತಿಯಾಗಿ ಪ್ರೇಮಕಥೆಯಾಗಿಸಿದ್ದರೂ ಸಾಕಿತ್ತು. ಚಿತ್ರದಲ್ಲಿ ತೋರಿಸಿರುವ ಆಸ್ಪತ್ರೆ, ಲ್ಯಾಬ್ ಯಾವುದೂ ಈ ರೀತಿಯ ಗಂಭೀರ ವಿಷಯದ ಸಂಶೋಧನೆಗೆ ಸಹಜ ವಾತಾವರಣವನ್ನು ನಿರ್ಮಿಸಿಕೊಡುವುದಿಲ್ಲ. ಸನ್ನಿವೇಶಗಳಲ್ಲಿ ಕುತೂಹಲ, ಒತ್ತಡವಿಲ್ಲ. ಬಹಳ ಸುಲಭವಾಗಿ ಕಥೆ ನಡೆದಂತೆ ಭಾಸವಾಗುತ್ತದೆ. ಸಂಗೀತ ನಿರ್ದೇಶಕ ವಿವಾನ್ ರಾಧಾಕೃಷ್ಣ ಹಿನ್ನೆಲೆ ಸಂಗೀತ ಹಿತವಾಗಿದೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ನವೀನ್ ಕುಮಾರ್ ಛಾಯಾಚಿತ್ರಗ್ರಹಣ ಅಚ್ಚುಕಟ್ಟಾಗಿದೆ.

ವಿನಾಯಕ ಕೆ.ಎಸ್

ಪದಬಂಧ 5656

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈಕೆ ಮಾವನ ಹೆಂಡತಿ (2)
3.ಜಗಲಿಯಲ್ಲೇ ಪ್ರಪಂಚ ಕಾಣುತ್ತಿದೆ! (2)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲ!ಬಹಳ ಹತ್ತಿರ! (3)
7.ಮಾವು ಅಥವಾ ನೆಲ್ಲಿಯ ಮುರಬ್ಬ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ ಸ್ಥಾಪಿಸುವುದು (5)
9.ಮಾಸ ಕಳೆದಾಗ ಕಟ್ಟಿಸಿದ ಗೋರಿ (3)
10.ಕಕ್ಷದೊಳಗಿನ ಕೃಪಾದೃಷ್ಟಿ (3)
13.ಒಣಹೆಮ್ಮೆಯಿದು (5)
14.ಎಳೆಗಂದಿ ಹಾಲನ್ನು ಕಾಯಿಸಿ ಮಾಡುವ ಸಿಹಿ (2)
15.ಈತ ಮಾತು ಬಾರದವನು (2)

ಮೇಲಿಂದ ಕೆಳಕ್ಕೆ

1.ತುಂಬಾ ಗಟ್ಟಿಯಾದ ನಗು (4)
2.ಅಕಾರ ಮೊದಲಾದ ವರ್ಣ (3)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಸಮನಾಗಿ ಹಂಚಿಕೊಳ್ಳುವವನು (4)
11.ಈತ ಜೈನ ಸನ್ಯಾಸಿ (4)
12.ಸಭೆಯಲ್ಲಿ ಕುಳಿತಿರುವವನು (3)



5655ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಮದಗಜ 3.ಒಬ್ಬಂಟಿಗ
5.ಜುಲುಮೆ 6.ರಿಕಾಪು
8.ಸಾಕ್ಷರ 9.ಪಲ್ಲಂಗ
10.ನಗದು 12.ವಿರಾಮ
14.ರತ್ನಾಕರ 15.ಅರಮನೆ

ಮೇಲಿಂದ ಕೆಳಕ್ಕೆ:

1.ಮದನಾರಿ 2.ಜಹಜು
3.ಒಲುಮೆ 4.ಗತ್ಯಂತರ
7.ಪುಲ್ಲಿಂಗ 8.ಸಾಧನ
9.ಪರಿಕರ 11.ದುರ್ವರ್ತನೆ
12.ವಿಧುರ 13.ಮಸಲ

ಸುಡೊಕು 6041

				4		8		7
4		8					9	
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6040 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ದ್ವಾದಶಿ ಗಂ. 22-42 ನಕ್ಷತ್ರ: ಪೂರ್ವಫಲ್ಗುನಿ ಗಂ. 14-04 ಯೋಗ: ಧ್ರುವ ಗಂ. 26-47 ಕರಣ: ಬವ ಗಂ. 09-24, ಮೇಷ ಮಾಸದ 08 ನೇ ದಿನ, ಮಳೆನಕ್ಷತ್ರ: ಅಶ್ವಿನಿ 3.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-18 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 10 ಶವ್ವಾಲ್
ಅದೃಷ್ಟ ಸಂಖ್ಯೆ : 4, 7

ಮೇಷ: ನಿಮ್ಮ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ತಿಳಿಯಲಿದೆ. ಮನೆ ನಿರ್ಮಾಣದ ಕೆಲಸಗಳನ್ನು ಪೂರ್ತಿಗೊಳ್ಳುವ ಹಂತ ತಲುಪಲಿದೆ.

ವೃಷಭ: ವಾಸ್ತವವಾಗಿ ಕಚೇರಿಯಲ್ಲಿರುವ ವಿಷಯಗಳು ಹಾಗೂ ತಲುಪುತ್ತಿರುವ ವಿಚಾರಗಳ ನಡುವೆ ಇರುವ ವ್ಯತ್ಯಾಸವು ಇಂದು ನಿಮಗೆ ತಿಳಿಯುತ್ತದೆ. ಜಾತ್ರೆಯಂಥ ಮಹೋತ್ಸವದಲ್ಲಿ ಚಿನ್ನದ ಮೇಲೆ ಜಾಗ್ರತೆ ಇರಲಿ.

ಮಿಥುನ: ನಿಮ್ಮ ಸಾಂಸಾರಿಕ ವಿಚಾರದಲ್ಲಿ ಬೇರೆಯವರ ಸಲಹೆಗಳನ್ನು ಕಡೆಗಣಿಸುವುದು ಮತ್ತು ಹೋಲಿಕೆಯನ್ನು ಮಾಡಿಕೊಳ್ಳದೇ ಇರುವುದು ಒಳ್ಳೆಯದು.

ಕರ್ಕಾಟಕ : ವಿವಾಹದ ಭಾವನೆಗಳನ್ನು ತಂದೆ ತಾಯಿಯ ಬಳಿ ವ್ಯಕ್ತಪಡಿಸಲು ಇದು ಸುಸಮಯ. ಆಭರಣಗಳಿಗಾಗಿ ಹಣ ಖರ್ಚು ಮಾಡುವಿರಿ. ಸಹೋದ್ಯೋಗಿಗಳ ಬೆಂಬಲ ಚೆನ್ನಾಗಿರುತ್ತದೆ.

ಸಿಂಹ : ಆರ್ಥಿಕ ಜೀವನದ ಪುನರುಜ್ಜೀವನಗೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಅಕ್ರಮವಾದ ವ್ಯವಹಾರ ಕೈಬಿಡುವುದು ಕ್ಷೇಮಕರ. ಗೃಹೋಪಯೋಗಿ ವಸ್ತುಗಳ ಮಾರಾಟದಿಂದ ಲಾಭ ಬರಲಿದೆ.

ಕನ್ಯಾ: ಅತ್ಯಾಪ್ತರಿಗಾಗಿ ಉಡುಗೊರೆ ಕೊಡುವ ಸಲುವಾಗಿ ಹುಡುಕುತ್ತಿರುವ ವಸ್ತುವು ಲಭ್ಯವಾಗುವುದು. ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು.

ತುಲಾ: ಮುಖ್ಯ ಗಣ್ಯರ ಭೇಟಿಯಲ್ಲಿ ನಿಮ್ಮ ಉಡುಗೆ ತೊಡುಗೆಗಳು ಪ್ರಾಮುಖ್ಯತೆ ಹೊಂದುತ್ತವೆ. ಮನೋಬಲವು ಹೆಚ್ಚಿರುವುದರಿಂದ ದೈಹಿಕ ವೈಕಲ್ಯತೆ ಅಡ್ಡಿ ಪಡಿಸುವುದಿಲ್ಲ.

ವೃಶ್ಚಿಕ : ಸಜ್ಜನರ ಸಹವಾಸ ಹಾಗೂ ಜನಬಳಕೆಯಿಂದಾಗಿ ಪ್ರಾಪಂಚಿಕವಾದ ಜ್ಞಾನ ವೃದ್ಧಿ. ಸ್ನೇಹಪರ, ದಾನ-ಧರ್ಮದ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ವಾಹನ ಚಲಾಯಿಸುವಾಗ ಎಚ್ಚರವಿರಲಿ.

ಧನು: ವಿದೇಶದಲ್ಲಿ ನೆಲೆಸಿರುವವರಿಗೆ ಸ್ವಸ್ಥಾನದಲ್ಲಿ ಇರುವಂಥ ಪೋಷಕರ ಬಗ್ಗೆ ತಲೆಬಿಸಿಯಾಗುತ್ತದೆ. ಗೃಹ ವಿನ್ಯಾಸಗಾರರಿಗೆ ಹಾಗೂ ಆಂತರಿಕ ವಿನ್ಯಾಸಗಾರರಿಗೆ ಉತ್ತಮ ಅವಕಾಶಗಳು ದೊರೆಯಲಿವೆ.

ಮಕರ: ಮಂಗಳಕರವಾದ ಕಾರ್ಯಕ್ರಮಕ್ಕೆ ದೃಷ್ಟಿದೋಷಗಳನ್ನು ಉಂಟುಮಾಡುವಂಥ ಅಮಂಗಳಕಾರಿ ವ್ಯಕ್ತಿಗಳನ್ನು ಆಹ್ವಾನಿಸದಿರಿ. ಸಂಬಂಧಗಳನ್ನು ಗಟ್ಟಿಪಡಿಸಲು ಸ್ವಗೃಹದಲ್ಲಿ ಕಾರ್ಯಕ್ರಮ ಆಯೋಜಿಸಿ.

ಕುಂಭ: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ನಂತರದಲ್ಲಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ. ಭಾವನಾತ್ಮಕ ಪ್ರವೃತ್ತಿಯು ಹೆಚ್ಚು ಕೆಲಸ ಮಾಡಿಸುವಂತೆ ಮಾಡಬಹುದು.

ಮೀನ: ಮಾತೃ ಸಂಬಂಧಿ ಬಂಧುಗಳ ಆಗಮನದಿಂದ ಸಂತೋಷ ಹೊಂದುವಿರಿ. ಸುಖಮಯವಾಗಿರುವ ಜೀವನವನ್ನು ಮೂರನೇ ವ್ಯಕ್ತಿಗಳ ಮಾತನ್ನು ಕೇಳಿ ಹಾಳುಮಾಡಿಕೊಳ್ಳದಿರಿ.

ಕಣದಲ್ಲಿ ಮಾತಿನ ಬಾಣಗಳ ಭರಾಟೆ

ಮೊದಲ ಮತದ ಸಂಭ್ರಮ

ಶ್ರೇಯಸ್ ಕೇದಾರಿ ಜಲಾಲಪುರೆ, ಜೈನ್ ಎಂಜಿನಿಯರಿಂಗ್ ಕಾಲೇಜು, ಬೆಳಗಾವಿ

ಮತದಾನ ಹಕ್ಕನ್ನು ಚಲಾಯಿಸಲು ನಾನು ತುಂಬ ಉತ್ಸುಕನಾಗಿರುವೆ. ದೇಶದ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯುತ ಕೆಲಸವಿದು. ಯುವಜನರೇ ದೇಶದ ಸಂಪತ್ತು, ಪ್ರಗತಿಯ ಭರವಸೆ ಎಂದು ಹಿರಿಯರು ಹೇಳುತ್ತಾರೆ. ಅದರ ನಿಜವಾದ ಅರ್ಥ ಏನೆಂದು ಈ ಹಕ್ಕಿನ ಮೂಲಕ ನನಗೆ ಅರಿವಾಗಿದೆ. ಜನಪರ ಕಾಳಜಿಯುಳ್ಳ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಸಿಕ್ಕಿದೆ. ನನ್ನ ಖುಷಿ ಇಮ್ಮಡಿಯಾಗಿಸಿದೆ.

ಅಭಿಷೇಕ ವೀರೇಶ ಚಿಂಚೋಳಿ, ಯಾದಗಿರಿ ಜಿಲ್ಲೆ

ಮೊದಲ ಬಾರಿ ಮತ ಚಲಾಯಿಸುತ್ತಿದ್ದು, ನನ್ನ ವೋಟಿನ ನಿರ್ಣಯದಿಂದ ನನ್ನ ಭವಿಷ್ಯ ಹಾಗೂ ದೇಶದ ಹಿತವನ್ನು ನಾನು ನಿರ್ಧರಿಸುತ್ತಿದ್ದೇನೆ ಎಂಬ ಭರವಸೆ ಬಂದಿದೆ. ನಾಗರಿಕ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂಬ ಬಗ್ಗೆ ನನಗೆ ಗೌರವವಿದೆ. ವಿಕಾಸ ನೀತಿಗಳನ್ನು ಆಧರಿಸುವ ಮತ್ತು ನಿರ್ದಿಷ್ಟ ದೃಢನಿಶ್ಚಯಗಳಿಗೆ ಬೆಂಬಲ ನೀಡುವ ಪಕ್ಷಕ್ಕೆ ಬೆಂಬಲಿಸುತ್ತೇನೆ.

ಮತ ಆಮಿಷ: ಆಯೋಗದ ವಶ

₹74.85 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹80.40 ಕೋಟಿ
ಮದ್ಯ	₹176.58 ಕೋಟಿ (1.46 ಕೋಟಿ ಲೀ)
ಮಾದಕವಸ್ತು	₹10.66 ಕೋಟಿ (506.83 ಕೆ.ಜಿ.)
ಚಿನ್ನ	₹57.56 ಕೋಟಿ (108.29 ಕೆ.ಜಿ.)
ಬೆಳ್ಳಿ	₹1.17 ಕೋಟಿ (301.54 ಕೆ.ಜಿ.)

ಎಂಥಾ ಮಾತು!

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 'ಗ್ಯಾರಂಟಿ' ಯೋಜನೆಗಳನ್ನು ಸ್ಥಗಿತಗೊಳಿಸುತ್ತದೆ ಎಂಬ ಅಪಪ್ರಚಾರವನ್ನು ಬಿಜೆಪಿ, ಜೆಡಿಎಸ್‌ನವರು ಮಾಡುತ್ತಿದ್ದಾರೆ. 2028ರಲ್ಲೂ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಲಿದೆ. ಗ್ಯಾರಂಟಿ ಯೋಜನೆಗಳು ಆಗಲೂ ಮುಂದುವರಿಯಲಿವೆ. ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಜನರಿಗೆ ಶಕ್ತಿ ತುಂಬುತ್ತಿವೆ. ಜನರು ಆ ಯೋಜನೆಗಳ ಪರ ಇದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಕಂಗೆಟ್ಟಿರುವ ಬಿಜೆಪಿ, ಜೆಡಿಎಸ್‌ನವರು ಸುಳ್ಳು ಹೇಳಿ ಜನರನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ
(ಮಾಲೀಕಯ್ಯ ಗುತ್ತೇದಾರ್, ಶಾರದಾ ಮೋಹನ ಶೆಟ್ಟಿ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮ)

ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಇಚ್ಛೆ ಇರಲಿಲ್ಲ. ಕಾರ್ಯಕರ್ತರು ಒತ್ತಡ ಹಾಕಿ ಮಂಡ್ಯ ಕ್ಷೇತ್ರದಿಂದ ನಿಲ್ಲಿಸಿದ್ದಾರೆ. ಗೆದ್ದರೆ ಕೃಷಿ ಸಚಿವನಾಗಿ ಗ್ರಾಮೀಣ ಭಾಗದಲ್ಲಿ ಶಾಶ್ವತ ನೀರಾವರಿ ಯೋಜನೆ ಜಾರಿಗೆ ತರಲು ಯತ್ನಿಸುವೆ. ಇನ್ನೊಂದು ವರ್ಷದಲ್ಲಿ ಕುಂಚಿಟಿಗ ಮತ್ತು ಕಾಡುಗೊಲ್ಲರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲಾಗುತ್ತದೆ.

ಎಚ್.ಡಿ.ಕುಮಾರಸ್ವಾಮಿ, ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

'ಕಾಂಗ್ರೆಸ್‌ನದ್ದು ಗ್ಯಾರಂಟಿ, ಬಿಜೆಪಿಯದ್ದು ಚೊಂಬು'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಗ್ಯಾರಂಟಿ' ಪದ ಕಾಂಗ್ರೆಸ್‌ನ ಕಾಪಿರೈಟ್. ಅದನ್ನು ಪ್ರಧಾನಿ ನರೇಂದ್ರ ಮೋದಿ ಕಳವು ಮಾಡಿದ್ದಾರೆ. ಹೀಗಾಗಿಯೇ ಲೋಕಸಭಾ ಚುನಾವಣೆ ಪ್ರಚಾರದಲ್ಲಿ ಪದೇಪದೇ 'ಗ್ಯಾರಂಟಿ' ಪದ ಬಳಕೆ ಮಾಡುತ್ತಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಲೇವಡಿ ಮಾಡಿದರು.

'ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಘೋಷಿಸಿದ್ದ ಗ್ಯಾರಂಟಿ ಯೋಜನೆಯನ್ನು ಮೋದಿ ಹಾಗೂ ಬಿ.ಎಸ್.ಯಡಿಯೂರಪ್ಪ ಅಪಹಾಸ್ಯ ಮಾಡಿದ್ದರು. ಕಾಂಗ್ರೆಸ್ ಯಾವತ್ತೂ ಅಧಿಕಾರಕ್ಕೆ ಬರೊಲ್ಲ. ಗ್ಯಾರಂಟಿಗಳ ಅನುಷ್ಠಾನ ಸಾಧ್ಯವಿಲ್ಲ ಎಂದು ಅಣಕವಾಡಿದ್ದರು. ಈಗ ಗ್ಯಾರಂಟಿ ಹೆಸರು ಮುಂದಿಟ್ಟುಕೊಂಡು ಚುನಾವಣೆಗೆ ಹೊರಟಿದ್ದಾರೆ' ಎಂದು ಮೂದಲಿಸಿದರು.

'ಸುಳ್ಳು ಹೇಳು, ಮತ್ತಷ್ಟು ಸುಳ್ಳು ಹೇಳು, ಮತ್ತೆ ಮತ್ತೆ ಸುಳ್ಳು ಹೇಳು' ಎಂಬ ತಂತ್ರದ ಮೂಲಕ ಕರ್ನಾಟಕದ 27 ಜನ ಬಿಜೆಪಿ ಸಂಸದರು ರಾಜ್ಯದ ಜನರಿಗೆ ಕಳೆದ ಐದು ವರ್ಷಗಳಲ್ಲಿ ಬರೀ ಚೊಂಬು ಕೊಟ್ಟಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಮತದಾರರು ಆ ಚೊಂಬನ್ನು ಅವರಿಗೆ ಹಿಂತಿರುಗಿಸಲಿದ್ದಾರೆ ಎಂದರು.

ಚಿತ್ರದುರ್ಗ ವರದಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಒಂದು ತಂಡವಾಗಿ ಆಡಳಿತ ನಡೆಸುತ್ತಿದೆ. ಪಕ್ಷವು ಆಡಳಿತದ ಅವಧಿಯನ್ನು ಪೂರ್ಣಗೊಳಿಸಲಿದೆ' ಎಂದು ಸುರ್ಜೇವಾಲಾ ಹೇಳಿದರು.

'ಸಿದ್ದರಾಮಯ್ಯ ಸಮರ್ಥ ಮುಖ್ಯಮಂತ್ರಿ. ಸಚಿವ ಸಂಪುಟದ ಸದಸ್ಯರು, ಶಾಸಕರು ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ತಂಡವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಸರ್ಕಾರಕ್ಕೆ ಯಾವುದೇ ಸಮಸ್ಯೆ ಎದುರಾಗದು' ಎಂದು ಸ್ಪಷ್ಟನೆ ನೀಡಿದರು.

ಚಿಕ್ಕಮಗಳೂರು ವರದಿ: 'ಕರ್ನಾಟಕದ ಜನರ ಮುಂದೆ ಎರಡು ಮಾದರಿಗಳಿದ್ದು, ಒಂದು ಕಾಂಗ್ರೆಸ್‌ನ ಐದು ಗ್ಯಾರಂಟಿಗಳ ಮಾದರಿ, ಮತ್ತೊಂದು ಮೋದಿ ಸರ್ಕಾರ ನೀಡಿದ ಚೊಂಬಿನ ಮಾದರಿ. ಇದೇ ಖಾಲಿ ಚೊಂಬನ್ನು ಜನ ಮೋದಿ ಅವರಿಗೆ ವಾಪಸ್ ನೀಡಲಿದ್ದಾರೆ' ಎಂದು ಸುರ್ಜೇವಾಲಾ ಲೇವಡಿ ಮಾಡಿದರು.

'ಬರ ಸ್ಥಿತಿ ನಿರ್ವಹಣೆಗೆ ₹17 ಸಾವಿರ ಕೋಟಿ ಕೇಳಿದರೆ ಮೋದಿ ಅವರು ನೀಡಿದ್ದು ಖಾಲಿ ಚೊಂಬು ಮಾತ್ರ. ಭದ್ರ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ ಪ್ರಕಾರ ₹6 ಸಾವಿರ ಕೋಟಿ ಕೇಳಿದರೆ ನೀಡಿದ್ದು ಚೊಂಬು, ರಾಜ್ಯದಲ್ಲಿ ಸಂಗ್ರಹವಾಗಿರುವ ತೆರಿಗೆಯಲ್ಲಿ ಪಾಲು ಕೇಳಿದರೆ ಮೋದಿ ಕೊಟ್ಟಿರುವುದು ಚೊಂಬು, ಎಲ್ಲಾ ಬ್ಯಾಂಕ್ ಖಾತೆಗೆ ₹15 ಲಕ್ಷ ಹಣ ಎಲ್ಲಿ ಎಂದು ಕೇಳಿದರೆ ಮೋದಿ ನೀಡಿರುವುದು ಚೊಂಬು, 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ಎಲ್ಲಿ ಎಂದರೆ ಚೊಂಬು, ರಾಜ್ಯದ 27 ಸಂಸದರ ಸಾಧನೆ ಕೇಳಿದರೆ ಅದು ಕೂಡ ಚೊಂಬು. ಒಟ್ಟಾರೆ ಕೇಂದ್ರದಿಂದ ರಾಜ್ಯಕ್ಕೆ ಚೊಂಬಿನ ಕೊಡುಗೆಯನ್ನೇ ಮೋದಿ ನೀಡಿದ್ದಾರೆ' ಎಂದರು.

'ಎಲ್ಲರ ಮೇಲೂ ಕಣ್ಣಿಟ್ಟಿದ್ದೇನೆ, ಕೆಲಸ ಮಾಡಿ'

ರಣದೀಪ್ ಸಿಂಗ್ ಸುರ್ಜೇವಾಲಾ

'ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿ ಗೆಲ್ಲಿಸಲು ಎಲ್ಲರೂ ಶ್ರಮ ವಹಿಸಲೇಬೇಕು. ಎಲ್ಲರ ಮೇಲೂ ಕಣ್ಣಿಟ್ಟಿದ್ದೇನೆ. ಸಚಿವರು ಕೆಲಸ ಮಾಡದಿದ್ದರೆ ಸ್ಥಾನ ಕಳೆದುಕೊಳ್ಳುತ್ತಾರೆ. ಶಾಸಕರು ಕೆಲಸ ಮಾಡದಿದ್ದರೆ ಮುಂದಿನ ಚುನಾವಣೆಯಲ್ಲಿ ಬೇರೆಯವರಿಗೆ ಟಿಕೆಟ್ ಸಿಗಲಿದೆ' ಎಂದು ಎಐಸಿಸಿ ಕರ್ನಾಟಕ ಉಸ್ತುವಾರಿಯೂ ಆಗಿರುವ ರಣದೀಪ್ ಸಿಂಗ್ ಸುರ್ಜೇವಾಲಾ ಎಚ್ಚರಿಸಿದರು.

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ 'ಗ್ಯಾರಂಟಿ ಹಬ್ಬ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ನಮ್ಮ ಬೂತ್ ನಮ್ಮ ಜವಾಬ್ದಾರಿ' ಹೆಸರಲ್ಲಿ ಕಾಂಗ್ರೆಸ್ ಚುನಾವಣೆಗೆ ಹೊರಟಿದೆ. ಮುಂದಿನ ಐದು ದಿನಗಳಲ್ಲಿ ಎಲ್ಲ ಮನೆ, ಬೂತ್‌ಗಳಲ್ಲಿ ಕಾಂಗ್ರೆಸ್‌ನ ಸ್ಟಿಕ್ಕರ್ ಹಾಗೂ ಗ್ಯಾರಂಟಿ ಕಾರ್ಡ್ ತಲುಪಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

'ರಾಜಧಾನಿಯಲ್ಲಿ ನಡೆದಿದೆ ಡಿಕೆಶಿ 'ಸ್ಕ್ವೇರ್‌ಫೀಟ್' ವಸೂಲಿ'

ಪ್ರಜಾವಾಣಿ ವಾರ್ತೆ

ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪಪಟ್ಟಿ ಬಿಡುಗಡೆ ಮಾಡಿದರು. ಈ ಸಂದರ್ಭ, ರಾಜ್ಯ ವಕ್ತಾರ ಡಾ. ನರೇಂದ್ರ ರಂಗಪ್ಪ, ಶಾಸಕರಾದ ಉದಯ ಗರುಡಾಚಾರ್, ಎಸ್. ಮುನಿರಾಜು, ಎಲ್.ಎ. ರವಿಸುಬ್ರಹ್ಮಣ್ಯ ಇದ್ದರು

ಬೆಂಗಳೂರು: 'ರಾಜ್ಯದಲ್ಲಿ 'ಸ್ಕ್ವೇರ್‌ಫೀಟ್' ಎಂಬ ಹೊಸ 'ತೆರಿಗೆ'ಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಕಿದ್ದು, ಈ ಮೂಲಕ ಬಿಲ್ಡರ್‌ಗಳಿಂದ ಕೋಟಿಗಟ್ಟಲೆ ಹಣ ಲೂಟಿ ಮಾಡುತ್ತಿದ್ದಾರೆ. ಸರ್ಕಾರದ ದಿವಾಳಿತನಕ್ಕೆ ಇದು ಸಾಕ್ಷಿ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪಪಟ್ಟಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, 'ಸ್ಕ್ವೇರ್‌ಫೀಟ್' ಎಂಬ ಪದ ಇತ್ತೀಚಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಚಾಲ್ತಿಯಲ್ಲಿದೆ. ಇದು ಏನೆಂಬುದು ಬಹುತೇಕ ಜನರಿಗೆ ಗೊತ್ತಿಲ್ಲ. ಬಿಲ್ಡರ್‌ಗಳಿಂದ ಸುಲಿಗೆಗಾಗಿ ಬಳಸುತ್ತಿರುವ 'ಕೋಡ್‌ವರ್ಡ್' ಅದು ಎಂದು ಅವರು ಹೇಳಿದರು.

ಹೊಸ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುವ ಬಿಲ್ಡರ್‌ಗಳು ಪ್ರತಿ ಚದರಡಿಗೆ ₹100ರಂತೆ ನೀಡಬೇಕು. ಪ್ರತಿ ಅಪಾರ್ಟ್‌ಮೆಂಟ್‌ಗಳಿಂದಲೂ ತಲಾ ಕನಿಷ್ಠ ₹7 ಕೋಟಿಯಿಂದ ₹10 ಕೋಟಿಯಷ್ಟು ವಸೂಲಿ ಮಾಡುತ್ತಿದ್ದಾರೆ. ಸಾವಿರಾರು ಬಿಲ್ಡರ್‌ಗಳಿಂದ ವಸೂಲಿಗೆ ಇಳಿದಿದ್ದಾರೆ ಎಂದು ದೂರಿದರು.

ಜನರ ಹಣವನ್ನೇ ಸುಲಿಗೆ ಮಾಡಿ ಗ್ಯಾರಂಟಿಗಳನ್ನು ಕೊಡುತ್ತಿದ್ದಾರೆಯೇ ಹೊರತು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ರಾಹುಲ್ ಗಾಂಧಿಯವರ ಜೇಬಿನಿಂದ ಹಣವನ್ನೇನೂ ಕೊಡುತ್ತಿಲ್ಲ. ಒಬ್ಬ ಗೃಹಣಿಗೆ ₹2,000 ಕೊಡಲು ಆ ಮನೆಯ ಯಜಮಾನನಿಂದ ₹5,000 ಕಸಿದುಕೊಳ್ಳುತ್ತಿದೆ. ಹಾಲು, ಮದ್ಯ, ವಿದ್ಯುತ್ ಶುಲ್ಕದ ದರವನ್ನು ವಿಪರೀತವಾಗಿ ಏರಿಕೆ ಮಾಡಿದೆ. ಜೆಸಿಬಿ ಹಾಕಿ ಬಾಚುವಂತೆ ಜನರಿಂದ ಹಣವನ್ನು ಬಾಚುತ್ತಿದೆ. ಈ ರೀತಿಯಲ್ಲಿ ರಾಜ್ಯದ ಜನರಿಗೆ ಕಾಂಗ್ರೆಸ್ ಸರ್ಕಾರ ಚೊಂಬು ಕೊಟ್ಟಿದೆ ಎಂದು ಅಶೋಕ ಕಿಡಿ ಕಾರಿದರು.

ಸರ್ಕಾರದ ವಿರುದ್ಧದ ದೋಷಾರೋಪಗಳು

- ಅಧಿಕಾರಕ್ಕೆ ಬಂದ 6 ತಿಂಗಳಲ್ಲೇ ಸಚಿವರು ಮತ್ತು ಅವರ ಕುಟುಂಬದ ಸದಸ್ಯರಿಂದ ಆಡಳಿತದಲ್ಲಿ ಮಿತಿ ಮೀರಿದ ಹಸ್ತಕ್ಷೇಪ. ಕಾಮಗಾರಿ ಮಂಜೂರಾತಿಗೂ ಲಂಚ, ಕಾಮಗಾರಿ ಮುಗಿದ ನಂತರ ಗುತ್ತಿಗೆದಾರರಿಗೆ ಬಿಲ್ ನೀಡಲೂ ಲಂಚ. ಶೇ 50ರ ಲಂಚದ ಸರ್ಕಾರವಾಗಿದೆ
- ಅಬಕಾರಿ ಆದಾಯ ₹36 ಸಾವಿರ ಕೋಟಿ ನಿಗದಿ ಮಾಡಿ, ಈ ಮೊತ್ತ ಸಂಗ್ರಹಿಸಲು ಬಿಯರ್ ಮೇಲೆ ಶೇ10, ಇನ್ನುಳಿದ ಮದ್ಯದ ಮೇಲೆ ಶೇ 20ರಷ್ಟು ದರ ಏರಿಕೆ ಮಾಡಿದೆ.
- ಜನನ ಪ್ರಮಾಣಪತ್ರ ಪಡೆಯಲು ಇದ್ದ ಶುಲ್ಕವನ್ನು ವಿಪರೀತ ಏರಿಸಿದೆ. ವರ್ಷದ ಬಳಿಕ ಪ್ರಮಾಣ ಪತ್ರ ಪಡೆಯಲು ಇದ್ದ ಶುಲ್ಕದ ಮೊತ್ತ ₹10 ಅನ್ನು ₹1000 ಕ್ಕೆ ಏರಿಸಿದೆ.
- ಮುದ್ರಾಂಕ ಶುಲ್ಕದಲ್ಲೂ ಏರಿಕೆ. ದತ್ತು ಡೀಡ್ ₹500ರಿಂದ ₹1000ಕ್ಕೆ ಏರಿಕೆ, ಪ್ರಮಾಣಪತ್ರ ₹20 ಇದ್ದದ್ದು ₹100ಕ್ಕೆ ಏರಿಕೆ, ₹10 ಲಕ್ಷದೊಳಗಿನ ಅಗ್ರಿಮೆಂಟ್‌ಗೆ ₹100 ರಿಂದ ₹200ಕ್ಕೆ ಏರಿಕೆ, ₹1000 ವರೆಗಿನ ಬಾಂಡ್, ಪವರ್ ಆಫ್ ಅಟಾರ್ನಿ ಶುಲ್ಕವನ್ನೂ ಏರಿಸಿದೆ.
- ಸರ್ಕಾರದ ಬರ ನಿರ್ವಹಣೆ ವೈಫಲ್ಯದಿಂದ ರಾಜ್ಯದಲ್ಲಿ ಕಳೆದ 10 ತಿಂಗಳಲ್ಲಿ 692 ರೈತರ ಆತ್ಮಹತ್ಯೆ ನಡೆದಿದೆ. ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ನೀಡುತ್ತಿದ್ದ ₹4,000 ಅನ್ನು ಕಾಂಗ್ರೆಸ್ ಸರ್ಕಾರ ನಿಲ್ಲಿಸಿದೆ.
- ಕಾಂಗ್ರೆಸ್ ಅವಧಿಯ ಒಂದೇ ವರ್ಷದಲ್ಲಿ ರಾಜಧಾನಿ ಬೆಂಗಳೂರಿನಲ್ಲಿ 176 ಅತ್ಯಾಚಾರ ಪ್ರಕರಣಗಳು ನಡೆದಿವೆ. 1,135 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ
- ಎಸ್‌ಸಿ- ಎಸ್‌ಟಿ ಸಮುದಾಯಕ್ಕೆ ಮೀಸಲಾದ ₹11 ಸಾವಿರ ಕೋಟಿಯನ್ನು ಕಾಂಗ್ರೆಸ್ ಸರ್ಕಾರದ ಇತರ ಯೋಜನೆಗಳು ಬಳಸಿಕೊಂಡು ಶೋಷಿತ ಸಮುದಾಯಕ್ಕೆ ಅನ್ಯಾಯವೆಸಗಿದೆ

ಹಾಸನ ಜಿಲ್ಲೆಯ ಬೇಲೂರಿನಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡುವ ವೇಳೆ, ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ತಾಯಿ ಅನುಪಮಾ ಸೆರಗೊಡ್ಡಿ ಮತ ಯಾಚಿಸಿದರು.

ರಾಜ್ಯಕ್ಕೆ ಆದ ಅನ್ಯಾಯ ಪ್ರಶ್ನಿಸದ ಗೌಡರು: ಸಿ.ಎಂ

ಪ್ರಜಾವಾಣಿ ವಾರ್ತೆ

ಹಾಸನ: 'ರಾಜ್ಯಕ್ಕೆ ಬಿಜೆಪಿ ಮಾಡುತ್ತಿರುವ ಅನ್ಯಾಯದ ಬಗ್ಗೆ ಸಂಸದ ಪ್ರಜ್ವಲ್ ರೇವಣ್ಣ, ಎಚ್.ಡಿ.ದೇವೇಗೌಡರು ನೆಪಕ್ಕೂ ಸಂಸತ್ತಿನಲ್ಲಿ ಧ್ವನಿ ಎತ್ತಿಲ್ಲ ಏಕೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಜಿಲ್ಲೆಯ ಬೇಲೂರು, ಸಕಲೇಶಪುರ, ಅರಕಲಗೂಡಿನಲ್ಲಿ ಶುಕ್ರವಾರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೇಯಸ್ ಪಟೇಲ್ ಪರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಕಳೆದ ಲೋಕಸಭೆ ಚುನಾವಣೆಯಲ್ಲಿ ಮೋದಿಯವರನ್ನು ಬೈದಿದ್ದ ದೇವೇಗೌಡರಿಗೆ, ಈ ಬಾರಿ ಅವರ ಬಗ್ಗೆ ಅತಿಯಾದ ಪ್ರೇಮ ಬಂದಿದೆ. ಸ್ವಾರ್ಥ, ಕುಟುಂಬ ರಾಜಕಾರಣಕ್ಕಾಗಿ ಮೈತ್ರಿ ಮಾಡಿಕೊಂಡಿದ್ದಾರೆ' ಎಂದು ಟೀಕಿಸಿದರು.

'ಹಾಸನದಲ್ಲಿ ಮೊಮ್ಮಗ, ಮಂಡ್ಯದಲ್ಲಿ ಮಗ, ಬೆಂಗಳೂರು ಗ್ರಾಮಾಂತರದಲ್ಲಿ ಅಳಿಯನನ್ನು ಚುನಾವಣೆಗೆ ನಿಲ್ಲಿಸಿದ್ದಾರೆ. ಕೋಲಾರ ಮೀಸಲು ಕ್ಷೇತ್ರ ಆಗದೇ ಇದ್ದಿದ್ದರೆ, ಅಲ್ಲಿಯೂ ಕುಟುಂಬದವರನ್ನೇ ನಿಲ್ಲಿಸುತ್ತಿದ್ದರು' ಎಂದು ಲೇವಡಿ ಮಾಡಿದರು.

'ಕಳೆದ ಚುನಾವಣೆಯಲ್ಲಿ ಹಾಸನಕ್ಕೆ ಬಂದು ಪ್ರಜ್ವಲ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದ್ದೆ. ನಾನು ಬರದೇ ಹೋಗಿದ್ದರೆ, ಆಗಲೇ ಪ್ರಜ್ವಲ್ ಸೋಲುತ್ತಿದ್ದರು. ನಾನು ತಪ್ಪು ಮಾಡಿಬಿಟ್ಟೆ' ಎಂದು ಹೇಳಿದರು.

'ಸಿದ್ದರಾಮಯ್ಯನಿಗೆ ಗರ್ವ ಬಂದಿದೆ. ಗರ್ವಭಂಗ ಮಾಡುತ್ತೇನೆ ಎಂದು ದೇವೇಗೌಡರು ಹೇಳುತ್ತಿದ್ದಾರೆ. ಆದರೆ, ನನಗೆ ಗರ್ವವೇ ಇಲ್ಲ. ಗರ್ವ ಭಂಗ ಹೇಗೆ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಈ ಚುನಾವಣೆ ನಂತರ ಸರ್ಕಾರ ಬಿದ್ದು ಹೋಗುತ್ತದೆ ಎಂದು ಗೌಡರು ಹೇಳಿದ್ದಾರೆ. ಸರ್ಕಾರ ಹೇಗೆ ಬೀಳುತ್ತದೆ? ಇದೇನು ಮಡಕೆನಾ? ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಮತದಿಂದ ರಚನೆಯಾದ ಸರ್ಕಾರ. ಹಾಸನ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರದಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ನನ್ನ ಈ ಮಾತನ್ನು ಬರೆದಿಟ್ಟುಕೊಳ್ಳಿ' ಎಂದರು.

'ಕಮಲದ ಕೊಳ'ದಲ್ಲಿ ಹೆಚ್ಚಿದ ಒಳಸುಳಿ

ಕ್ಷೇತ್ರ ಸಮೀಕ್ಷೆ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **54.76%**



ಕ್ಷೇತ್ರವನ್ನು ಕಾಡುವ ವಿಷಯಗಳು

- ನಗರದ ಜತೆಗೆ ಗ್ರಾಮೀಣ ಸೊಗಡಿನ ವಿಶಾಲ ಮತ್ತು ಬೃಹತ್ ಕ್ಷೇತ್ರವಿದು. ಗಾರ್ಮೆಂಟ್, ಗುಡಿ ಕೈಗಾರಿಕೆ, ಅರೆ ಕೈಗಾರಿಕೆ ಪ್ರದೇಶವಾಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಮೂಲಸೌಲಭ್ಯಗಳು ಅಭಿವೃದ್ಧಿ ಆಗಿಲ್ಲ ಅಪಾರ್ಟ್‌ಮೆಂಟ್ಸ್, ಹಾಗೂ ವಸತಿ ಸೌಲಭ್ಯಗಳಿಗೆ ಹೆಚ್ಚಿನ ಭೂ ಭಾಗ ಬಳಕೆ ಆಗುತ್ತಿರುವುದರಿಂದ ಹಲವೆಡೆ ನೀರಿನ ಸಮಸ್ಯೆಯಿದೆ.



ಶಾಸಕರ ಬಲಾಬಲ
ಬಿಜೆಪಿ 5
ಕಾಂಗ್ರೆಸ್ 3

1. ಬ್ಯಾಟರಾಯನಪುರ
2. ಕೆ.ಆರ್.ಪುರ
3. ಹೆಬ್ಬಾಳ
4. ಪುಲಿಕೇಶಿನಗರ (ಎಸ್‌ಸಿ)
5. ಮಲ್ಲೇಶ್ವರ
6. ಮಹಾಲಕ್ಷ್ಮಿ ಬಡಾವಣೆ
7. ಯಶವಂತಪುರ
8. ದಾಸರಹಳ್ಳಿ

ಎಂ.ವಿ. ರಾಜೀವ್ ಗೌಡ (ಕಾಂಗ್ರೆಸ್)

- 👍 'ಚುನಾವಣಾ ರಾಜಕೀಯ'ಕ್ಕೆ ಹೊಸಬರಾದರೂ ಬೆಂಗಳೂರು ಆಸುಪಾಸಿನ ಮೂಲ ಒಕ್ಕಲಿಗ ಎಂಬ ಕಾರ್ಡ್. ಸುಶಿಕ್ಷಿತ ಮತದಾರರನ್ನು ಸೆಳೆಯಬಲ್ಲ ವ್ಯಕ್ತಿತ್ವ
- 👍 ಕ್ಷೇತ್ರ ವ್ಯಾಪ್ತಿಯ ಇಬ್ಬರು ಸಚಿವರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಬೆನ್ನಿಗೆ ನಿಂತಿರುವುದು
- 👎 ಕ್ಷೇತ್ರದಲ್ಲಿ ಬಿಜೆಪಿ ಶಾಸಕರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು
- 👎 ಜನಸಾಮಾನ್ಯರ ಜತೆಗೆ ನಿಕಟ ಸಂಪರ್ಕದ ಕೊರತೆ, ತಳಮಟ್ಟದ ಕಾರ್ಯಕರ್ತರ ಒಡನಾಟ ಇಲ್ಲದಿರುವುದು

ಶೋಭಾ ಕರಂದ್ಲಾಜೆ (ಬಿಜೆಪಿ)

- 👍 ಬಿಜೆಪಿ ಭದ್ರಕೋಟೆ. ಯಶವಂತಪುರ, ರಾಜಾಜಿನಗರ ಕ್ಷೇತ್ರದ ಜನರಿಗೆ ಸಚಿವೆಯಾಗಿ ಪರಿಚಿತರು
- 👍 ಜೆಡಿಎಸ್ ಜೊತೆಗಿನ ಮೈತ್ರಿ, ಮೋದಿ ಅಲೆಯ ಮೇಲೆ ವಿಶ್ವಾಸ
- 👎 ಕರಾವಳಿ ಒಕ್ಕಲಿಗರು. ಕ್ಷೇತ್ರ ಬಿಟ್ಟು ವಲಸೆ ಬಂದಿದ್ದಾರೆಂದು ಪಕ್ಷದ ಕಾರ್ಯಕರ್ತರ ಅಸಮಾಧಾನ
- 👎 ಕಾಂಗ್ರೆಸ್ ಕಡೆ ಮುಖ ಮಾಡಿರುವ ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಬಿಜೆಪಿ ಶಾಸಕರಿಗೆ ಅವರ ಬಗ್ಗೆ ಇರುವ ತಕರಾರು

• ರಾಜೇಶ್ ರೈ ಚಟ್ಲ

ಬೆಂಗಳೂರು ಉತ್ತರ

ಬೆಂಗಳೂರು: ಸತತ ನಾಲ್ಕು ಅವಧಿಯಿಂದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ 'ಕಮಲ' ಅರಳುತ್ತಿದೆ. ಈ ಬಾರಿ ಪಂಚ 'ಗ್ಯಾರಂಟಿ'ಗಳ ನೆರಳಿನಲ್ಲಿ ಕ್ಷೇತ್ರ 'ಕೈ'ವಶ ಖಚಿತವೆಂಬ ಲೆಕ್ಕಾಚಾರ-ವಿಶ್ವಾಸ ಕಾಂಗ್ರೆಸ್ ನಾಯಕರದ್ದು.

1952ರ ಮೊದಲ ಚುನಾವಣೆಯಿಂದ ಕೆಂಗಲ್ ಹನುಮಂತಯ್ಯ, ಸಿ.ಕೆ. ಜಾಫರ್ ಷರೀಫ್ ಅವರಂಥ ಘಟಾನುಘಟಿ ನಾಯಕರನ್ನು ಚುನಾಯಿಸುವ ಮೂಲಕ ಹಿಂದೊಮ್ಮೆ ಈ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿತ್ತು. ಆದರೆ, 2004ರಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಎಚ್.ಟಿ. ಸಾಂಗ್ಲಿಯಾನ, 2009ರಲ್ಲಿ ಡಿ.ಬಿ. ಚಂದ್ರೇಗೌಡ 2014 ಹಾಗೂ 2019ರಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡರನ್ನು ಆರಿಸುವ ಮೂಲಕ ಮತದಾರರು ಒಲವು ಬದಲಿಸಿದ್ದರು.

ಹಾಲಿ ಸಂಸದ ಸದಾನಂದ ಗೌಡರ ಬದಲು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಬಿಜೆಪಿ ಈ ಬಾರಿ ಕಣಕ್ಕಿಳಿಸಿದೆ. ಉಡುಪಿ- ಚಿಕ್ಕಮಗಳೂರು ಕ್ಷೇತ್ರದ ಹಾಲಿ ಸಂಸದೆ, ಶೋಭಾ ಅವರ ಹೆಸರು ಘೋಷಣೆ ಆಗುತ್ತಿದ್ದಂತೆ ಕ್ಷೇತ್ರದ ಕೆಲವೆಡೆ 'ಗೋ ಬ್ಯಾಕ್ ಶೋಭಕ್ಕಾ' ಭಿತ್ತಿಪತ್ರಗಳನ್ನು ಹಿಡಿದು ಬಿಜೆಪಿ ಕಾರ್ಯಕರ್ತರು ಬೀದಿಗಿಳಿದಿದ್ದರು. 'ಎರಡು ಬಾರಿ ಗೆದ್ದರೂ ಕ್ಷೇತ್ರ ಅಭಿವೃದ್ಧಿ ಮಾಡದ ಶೋಭಾ ನಮ್ಮ ಕ್ಷೇತ್ರಕ್ಕೆ ಬರುವುದು ಬೇಡ. ಸ್ಥಳೀಯ ಒಕ್ಕಲಿಗರ ನಾಯಕರಲ್ಲಿ ಯಾರಿಗಾದರು ಟಿಕೆಟ್ ಕೊಡಿ. ಸದಾನಂದಗೌಡರನ್ನೇ ಮತ್ತೊಮ್ಮೆ ಕಣಕ್ಕಿಳಿಸಿ' ಎಂದೂ ಬೇಡಿಕೆ ಇಟ್ಟಿದ್ದರು. ಆರಂಭದಲ್ಲಿದ್ದ ಈ ಅಪಸ್ವರ ಈಗ ತಣ್ಣಗಾಗಿದೆ. 'ಯಾರೋ ತಮಿಳುನಾಡಿನಿಂದ ಬಂದು ದಿ ರಾಮೇಶ್ವರ ಕೆಫೆಯಲ್ಲಿ ಬಾಂಬ್ ಇರಿಸಿ ಹೋಗುತ್ತಾರೆ' ಎಂದು ತಾವು ನೀಡಿದ್ದ ಹೇಳಿಕೆ ವಿವಾದದ ಸ್ವರೂಪ ಪಡೆಯುತ್ತಿದ್ದಂತೆ ಶೋಭಾ ಕ್ಷಮೆ ಯಾಚಿಸಿದ್ದೂ ಮರೆಗೆ ಸರಿದಿದೆ. ಅದೇನೇ ಇದ್ದರೂ, ಮೋದಿ ಅಲೆ ಹಾಗೂ ಬಿಜೆಪಿಯ ನಿಶ್ಚಿತ ಮತಗಳು ಆರಾಮವಾಗಿ ದಡ ಸೇರಿಸಬಹುದೆಂಬ ವಿಶ್ವಾಸ ಶೋಭಾ ಅವರದ್ದು.

ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಅವರಿಗೆ 'ಚುನಾವಣಾ' ರಾಜಕೀಯ ಹೊಸತು. ಸೂಕ್ತ ಅಭ್ಯರ್ಥಿಯ ಶೋಧದಲ್ಲಿದ್ದ ಕಾಂಗ್ರೆಸ್ ನಾಯಕರು, ರಾಜ್ಯಸಭೆ ಸದಸ್ಯರಾಗಿ ಅನುಭವ ಹೊಂದಿರುವ ಈ 'ಪ್ರೊಫೆಸರ್'ಗೆ ಟಿಕೆಟ್ ನೀಡಿದೆ. 2019ರ ಚುನಾವಣೆಯಲ್ಲಿ ವರಿಷ್ಠರ ಒತ್ತಾಸೆ, ಮನವೊಲಿಕೆ ಮೇರೆಗೆ ಒಲ್ಲದ ಮನಸ್ಸಿನಿಂದ ಕಣಕ್ಕಿಳಿದು ಸೋಲು ಕಂಡಿದ್ದ ಸಚಿವ ಕೃಷ್ಣ ಬೈರೇಗೌಡರು ರಾಜೀವ್ ಗೌಡರ ಬೆನ್ನಿಗೆ ನಿಂತಿದ್ದಾರೆ.

ಯಡಿಯೂರಪ್ಪ ಅವರ ಸಂಪುಟದಲ್ಲಿ ಸಚಿವರಾಗಿದ್ದಾಗ ಮಾಡಿದ ಕೆಲಸ ಯಶವಂತಪುರ ಮತ್ತು ಕೆಂಗೇರಿಯಲ್ಲಿ ಹೆಚ್ಚು ಮತಗಳನ್ನು ತಂದುಕೊಡಬಹುದು ಎಂಬ ವಿಶ್ವಾಸ ಶೋಭಾ ಅವರದ್ದು. ಆದರೆ, ಬಿಜೆಪಿಯಿಂದ ಅಂತರ ಕಾಯ್ದುಕೊಂಡು ಕಾಂಗ್ರೆಸ್ ಕಡೆ ಮುಖ ಮಾಡಿರುವ ಶಾಸಕ ಎಸ್.ಟಿ. ಸೋಮಶೇಖರ್ ಮಗ್ಗುಲ ಮುಳ್ಳು ಆಗಬಹುದೇ ಎಂಬ ಆತಂಕವೂ ಇದೆ. ಕ್ಷೇತ್ರವ್ಯಾಪ್ತಿಯ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರೇ ಇದ್ದರೂ, ಭವಿಷ್ಯದ ರಾಜಕೀಯ ಲೆಕ್ಕಾಚಾರಗಳ ಕಾರಣಕ್ಕೆ ಎಲ್ಲರೂ 'ಕಮಲ' ಅರಳಿಸಲು ಶ್ರಮ ಹಾಕುತ್ತಾರೆ ಎಂಬ ವಿಶ್ವಾಸವೂ ಬಿಜೆಪಿ ನಾಯಕರಲ್ಲಿ ಕಾಣಿಸುತ್ತಿಲ್ಲ. ಇದೂ ಶೋಭಾ ಅವರಿಗೆ ಹಿನ್ನಡೆಯಾಗುವ ಸಾಧ್ಯತೆ ಇದೆ.

2023ರ ವಿಧಾನಸಭಾ ಚುನಾವಣೆಯ ಸಮಯದಲ್ಲಿ ರಾಜೀವ್ ಗೌಡ ಅವರು ಅಪಾರ್ಟ್‌ಮೆಂಟ್ ಸಂಘಗಳನ್ನು ಒಲೈಸಿ ಕಾಂಗ್ರೆಸ್‌ಗೆ ಒಂದಷ್ಟು ಮತಗಳನ್ನು ಸೆಳೆದಿದ್ದರು. 'ಕಾಂಗ್ರೆಸ್ ನನ್ನಂಥ ಮಣ್ಣಿನ ಮಗನನ್ನು ಆಯ್ಕೆ ಮಾಡಿದೆ. ಇಲ್ಲಿ ನನಗೆ ಸಂಬಂಧಿಕರು ಮತ್ತು ಕುಟುಂಬ ಸದಸ್ಯರಿರುವುದರಿಂದ ಕ್ಷೇತ್ರದ ಮನೆ ಮಗನಾಗಿದ್ದೇನೆ' ಎಂದು ಪ್ರತಿಪಾದಿಸುತ್ತಿರುವ ರಾಜೀವ್ ಗೌಡರು, 'ಗ್ಯಾರಂಟಿ'ಗಳು ಕೈ ಹಿಡಿಯಬಹುದೆಂದು ನಂಬಿದ್ದಾರೆ.

ಇಬ್ಬರು ಅನುಭವಿಗಳ ನಡುವಿನ 'ಕುಸ್ತಿ'

• ಕೆ.ಜೆ. ಮರಿಯಪ್ಪ

ತುಮಕೂರು

ತುಮಕೂರು: ಒಂದು ಕಡೆ ಕ್ಷೇತ್ರ ಉಳಿಸಿಕೊಳ್ಳಲು ಬಿಜೆಪಿ ಪಣತೊಟ್ಟಿದ್ದರೆ, ಮತ್ತೊಂದೆಡೆ ಶತಾಯಗತಾಯ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ಪಣ ತೊಟ್ಟಿದೆ. 'ನೀ ಕೊಡೆ, ನಾ ಬಿಡೆ' ಎಂಬಂತೆ ಹಣಾಹಣಿ ನಡೆದಿದೆ.

ಕಾಂಗ್ರೆಸ್‌ನ ಎಸ್.ಪಿ.ಮುದ್ದಹನುಮೇಗೌಡ ಹಾಗೂ ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿ.ಸೋಮಣ್ಣ ಗೆಲುವಿಗಾಗಿ ಬೆವರು ಹರಿಸುತ್ತಿದ್ದು, ಇಬ್ಬರು ಅನುಭವಿ ನಾಯಕರ ಕಾದಾಟ ಕುತೂಹಲ ಮೂಡಿಸಿದೆ.

ಕಳೆದ ಬಾರಿ ದೋಸ್ತಿಗಳಾಗಿದ್ದವರು ಈ ಸಲ ಎದುರಾಳಿಗಳು. ಎದುರಾಳಿಗಳಾಗಿದ್ದವರು ಈಗ ಒಂದಾಗಿ ನಿಂತಿದ್ದಾರೆ. ಕಳೆದ ಬಾರಿ ವಲಸಿಗ ಮತ್ತು ಹೇಮಾವತಿ ನೀರಿನ ವಿಚಾರ ಮುಂದಿಟ್ಟುಕೊಂಡು ಎಚ್.ಡಿ.ದೇವೇಗೌಡ ಅವರನ್ನು ಮಣಿಸಲು ಬಿಜೆಪಿ ಬಳಸಿದ್ದ ಅಸ್ತ್ರವನ್ನೇ ಈಗ ಕಾಂಗ್ರೆಸ್ ಬಳಸುತ್ತಿದೆ. 'ವಲಸಿಗ' ಹಾಗೂ 'ಸ್ಥಳೀಯ' ಎಂಬ ವಿಚಾರ ಮುನ್ನೆಲೆಗೆ ಬಂದಿದೆ.

ಇದಕ್ಕೆ ಪ್ರತಿ ತಂತ್ರವಾಗಿ ನರೇಂದ್ರ ಮೋದಿ, ರಾಮನ ವಿಚಾರ ಪ್ರಸ್ತಾಪಿಸಿ ಭಾವನಾತ್ಮಕವಾಗಿ ಮತದಾರರನ್ನು ಕಟ್ಟಿ ಹಾಕಲು ಬಿಜೆಪಿ ನಾಯಕರು ಮುಂದಾಗಿದ್ದಾರೆ.

ಒಳ ಒಪ್ಪಂದದ ಬೇಗುದಿ: ಕಳೆದ ಲೋಕಸಭೆ ಚುನಾವಣೆಯಲ್ಲಿ ಒಳ ಒಪ್ಪಂದವೇ ಫಲಿತಾಂಶ ನಿರ್ಧರಿಸಿತ್ತು. ಈ ಬಾರಿಯೂ ಎರಡೂ ಪಕ್ಷಗಳಿಗೆ ಇದು ಕಾಡುತ್ತಿದೆ. 'ಬೆಳಗಿನ ಜಾವ ಐದು ಗಂಟೆ ಹೊತ್ತಿಗೆ ನಡೆಯುವ ದೂರವಾಣಿ ಸಂಭಾಷಣೆ' ಫಲಿತಾಂಶದ ದಿಕ್ಕು ಬದಲಿಸಬಹುದು. ಈ ಕುತೂಹಲದ ವಿಚಾರ ರಾಜಕೀಯ ಪಕ್ಷಗಳ ನಾಯಕರ ನಡುವೆ ಪ್ರಮುಖವಾಗಿ ಚರ್ಚೆಯಾಗುತ್ತಿದೆ.

ಪಂಚ ಗ್ಯಾರಂಟಿ, ಸಂಸದನಾಗಿದ್ದಾಗ ಮಾಡಿದ ಕೆಲಸ ಮತಬುಟ್ಟಿ ತುಂಬಿಸಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೈ ಹಿಡಿಯಬಹುದು. ಜೆಡಿಎಸ್, ಬಿಜೆಪಿಯಿಂದ ವಲಸೆ ಬಂದವರು ಊರುಗೋಲಾಗುತ್ತಾರೆ. ಬೆಲೆ ಏರಿಕೆಯಿಂದ ಜನರು ಬೇಸತ್ತಿರುವುದು ನೆರವಿಗೆ ಬರಬಹುದು ಎಂಬ ಉತ್ಸಾಹದಲ್ಲಿ ಮುದ್ದಹನುಮೇಗೌಡ ಇದ್ದಾರೆ.

ಕಳೆದ ಬಾರಿ ಕಾಂಗ್ರೆಸ್- ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರೂ ಒಳ ಒಪ್ಪಂದದಿಂದಾಗಿ ಎಚ್.ಡಿ.ದೇವೇಗೌಡ ಸೋಲಬೇಕಾಯಿತು. ಆದರೆ, ಈ ಬಾರಿ ಬಿಜೆಪಿ- ಜೆಡಿಎಸ್ ಮೈತ್ರಿಯಲ್ಲಿ ಬಿರುಕು ಮೂಡದಂತೆ ಎಚ್ಚರ ವಹಿಸಲಾಗಿದೆ. 'ಮೈತ್ರಿ ಗಟ್ಟಿಯಾಗಿದೆ'. ಎರಡೂ ಪಕ್ಷದವರು ಒಟ್ಟಾಗಿ ಕೆಲಸ ಮಾಡುತ್ತಿರುವುದು ಸೋಮಣ್ಣ ಉತ್ಸಾಹ ಇಮ್ಮಡಿಗೊಳಿಸಿದೆ. ಈ ಒಗ್ಗಟ್ಟೇ ಬಿಜೆಪಿಗೆ ಬಲ ತಂದುಕೊಟ್ಟಿದೆ.

ಟಿಕೆಟ್ ಸಿಗದೆ ಮುನಿಸಿಕೊಂಡಿರುವ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ಬೆಂಬಲಿಗರು ಪ್ರಚಾರದಿಂದ ದೂರ ಉಳಿದಿರುವುದು ಸೋಮಣ್ಣ ತಲೆಬಿಸಿಗೆ ಕಾರಣವಾಗಿದ್ದರೆ, ತಿಪಟೂರು ಭಾಗದಲ್ಲಿ ಕಾಂಗ್ರೆಸ್ ನಾಯಕರ ನಿರುತ್ಸಾಹ ಮುದ್ದಹನುಮೇಗೌಡರಿಗೆ ತಲೆ ನೋವಾಗಿದೆ.

ಒಕ್ಕಲಿಗರು ದೊಡ್ಡಗೌಡರನ್ನು ನೋಡಿ ಬಿಜೆಪಿ ಬೆಂಬಲಿಸುತ್ತಾರೋ, ಇಲ್ಲವೆ ಮುದ್ದಹನುಮೇಗೌಡ ಕೈ ಹಿಡಿಯುತ್ತಾರೋ ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ. ಕಳೆದ ಬಾರಿ ದೇವೇಗೌಡರ ಸೋಲಿಗೆ ಕಾರಣರಾದ ಮುದ್ದಹನುಮೇಗೌಡರಿಗೆ ಒಕ್ಕಲಿಗರು ಪಾಠ ಕಲಿಸುವಂತೆ ಪ್ರಚಾರ ಮಾಡಲಾಗುತ್ತಿದೆ. ಪದೇ ಪದೇ 'ನಾನು ಕಾರಣನಲ್ಲ' ಎಂದು ಮುದ್ದುಹನುಮೇಗೌಡರು ಹೇಳುವ ಮೂಲಕ ಕೋಪ ತಣಿಸುತ್ತಿದ್ದಾರೆ.

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **77.43%**



ಕ್ಷೇತ್ರವನ್ನು ಕಾಡುವ ವಿಷಯಗಳು

- ಕೊಬ್ಬರಿ ಬೆಲೆ ಕುಸಿತ, ಬೆಂಬಲ ಬೆಲೆ ಹೆಚ್ಚಿಸದಿರುವುದು, ಖರೀದಿ ವಿಳಂಬ
- ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ₹5,300 ಕೋಟಿ ನೀಡದಿರುವುದು
- ತುಮಕೂರು– ದಾವಣಗೆರೆ ಹಾಗೂ ರಾಯದುರ್ಗ ರೈಲ್ವೆ ಯೋಜನೆ ವಿಳಂಬ
- ನಿರ್ಮಾಣವಾಗದ ತೆಂಗು ಪಾರ್ಕ್
- ಎತ್ತಿನಹೊಳೆ ನೀರಾವರಿ ಯೋಜನೆ ಅನುಷ್ಠಾನ ವಿಳಂಬ



ಶಾಸಕರ ಬಲಾಬಲ
ಕಾಂಗ್ರೆಸ್ 4
ಬಿಜೆಪಿ 2
ಜೆಡಿಎಸ್ 2

1. ಮಧುಗಿರಿ
2. ಕೊರಟಗೆರೆ
3. ತುಮಕೂರು ನಗರ
4. ತುಮಕೂರು ಗ್ರಾಮಾಂತರ
5. ತುರುವೇಕೆರೆ
6. ತಿಪಟೂರು
7. ಚಿಕ್ಕನಾಯಕನಹಳ್ಳಿ
8. ಗುಬ್ಬಿ

ಎಸ್.ಪಿ.ಮುದ್ದಹನುಮೇಗೌಡ (ಕಾಂಗ್ರೆಸ್)

ಸಮರ್ಥವಾಗಿ ಸಂಸತ್ ಪ್ರತಿನಿಧಿಸಬಲ್ಲೆ. ಎದುರಾಳಿಗೆ ಅಂತಹ ಜ್ಞಾನ, ಶಕ್ತಿ, ಸಾಮರ್ಥ್ಯ ಇದೆಯೆ?

- 👍 ಸ್ಥಳೀಯ, ಸರಳ ವ್ಯಕ್ತಿ, ಈ ಹಿಂದೆ ಸಂಸದರಾಗಿದ್ದ ಅನುಭವ
- 👍 ಜನರ ಜತೆಗೆ ನೇರ ಸಂಪರ್ಕ, ಅಭಿವೃದ್ಧಿ ಕೆಲಸ, ಅವಕಾಶ 'ವಂಚಿತ' ಎಂಬ ಅನುಕಂಪ
- 👎 ಲೋಕಸಭೆ ಚುನಾವಣೆಯಲ್ಲಿ ಎಚ್.ಡಿ.ದೇವೇಗೌಡ ಸೋಲಿಗೆ ಕಾರಣರೆಂಬ ಅಪವಾದ
- 👎 ಪದೇ ಪದೇ ಪಕ್ಷಾಂತರ, ಚುನಾವಣೆ ಸಮಯದಲ್ಲಿ ಮತ್ತೆ ಕಾಂಗ್ರೆಸ್‌ಗೆ ಬಂದಿರುವುದು

ವಿ.ಸೋಮಣ್ಣ (ಬಿಜೆಪಿ)

ನಾನು ಮಾಡಿದ ಅಭಿವೃದ್ಧಿ ಕಾರ್ಯ ಗುರುತಿಸಿ ವರಿಷ್ಠರು ಇಲ್ಲಿಗೆ ಕಳುಹಿಸಿದ್ದಾರೆ

- 👍 ಮೈತ್ರಿಯಲ್ಲಿ ಒಗ್ಗಟ್ಟು, ಜಿ.ಎಸ್. ಬಸವರಾಜು ಬಲ, ಸಿದ್ಧಗಂಗಾ ಮಠದ ಒಡನಾಟ
- 👍 ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ ಮಾಡಿದ ಅನುಭವ, ಅಭಿವೃದ್ಧಿ ಕುರಿತು ಹೊಂದಿದ ದೃಷ್ಟಿಕೋನ
- 👎 ಕ್ಷೇತ್ರಕ್ಕೆ ಹೊಸಬರು, ಹೊರಗಿನವರು ಎಂಬ ದೂರು ಲಿಂಗಾಯತ ನೊಳಂಬರಿಗೆ ಟಿಕೆಟ್ ಕೈತಪ್ಪಿದ ಸಿಟ್ಟು
- 👎 ಮಾಧುಸ್ವಾಮಿ ಮುನಿಸು, ಗ್ರಾಮ ಮಟ್ಟದಲ್ಲಿ ಪಕ್ಷ ಸಂಘಟನೆ ಕೊರತೆ

‘ಇಂಡಿಯಾ’ ಮೈತ್ರಿಕೂಟ ಸೇರಲು ದಲಿತ ನಾಯಕಿ ನಕಾರ; ಎನ್‌ಡಿಎ ಪರ ರಹಸ್ಯ ಒಲವು?

ಮಾಯಾವತಿ ಆನೆ ‘ಸ್ವತಂತ್ರ’ ಹೆಜ್ಜೆ

● ಮಂಜುನಾಥ ಹೆಬ್ಬಾರ್

ಮಾಯಾವತಿ ಅವರು ದಲಿತರ ಜತೆಗೆ ಯಾದವೇತರ ಹಿಂದುಳಿದ ಜಾತಿಗಳು, ಬ್ರಾಹ್ಮಣರು, ಮುಸ್ಲಿಮರನ್ನು ಒಲಿಸಿಕೊಂಡು ಉತ್ತರ ಪ್ರದೇಶದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು. 2007ರಲ್ಲಿ ಮಾಯಾವತಿ ಅವರನ್ನು ಮುಖ್ಯಮಂತ್ರಿ ಗಾದಿಗೆ ಕೂರಿಸಿದ್ದು ದಲಿತ–ಮುಸ್ಲಿಂ–ಬ್ರಾಹ್ಮಣ ಜಾತಿ ಸಮೀಕರಣ

ನವದೆಹಲಿ: ಉತ್ತರ ಪ್ರದೇಶದಲ್ಲಿ 2012ರ ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ಪತನಮುಖಿಯಾಗುತ್ತ ಬಂದ ಬಹುಜನ ಸಮಾಜ ಪಕ್ಷಕ್ಕೆ (ಬಿಎಸ್‌ಪಿ) 2022ರ ಚುನಾವಣೆಯಲ್ಲಿ ಸಿಕ್ಕಿದ್ದು ಒಂದು ಸ್ಥಾನವಷ್ಟೇ. ಅಂದಿನಿಂದ ವಿಪಕ್ಷಗಳು ಬಿಎಸ್‌ಪಿಗೆ ‘ಬಿಜೆಪಿಯ ಬಿ–ಟೀಮ್’ ಎಂಬ ಹಣೆಪಟ್ಟಿಯನ್ನು ಅಂಟಿಸಿ ಹಂಗಿಸುತ್ತಾ ಬಂದಿವೆ. ಟೀಕೆ, ನಿಂದನೆ ಹಾಗೂ ಆರೋಪಗಳಿಗೆ ಪಕ್ಷದ ನಾಯಕಿ ಮಾಯಾವತಿ ಅವರದ್ದು ಮೌನವೇ ಉತ್ತರ. ಸಂಸದರು ಬೇರೆ ಪಕ್ಷಗಳ ಕಡೆಗೆ ಗುಳೆ ಹೊರಟಾಗಲೂ ತಲೆ ಕೆಡಿಸಿಕೊಂಡಿದ್ದು ಕಡಿಮೆ. ಪಕ್ಷದ ನೇತೃತ್ವವನ್ನು ತಮ್ಮ ಸೋದರಳಿಯ ಆಕಾಶ್ ಅವರಿಗೆ ಬಿಟ್ಟುಕೊಟ್ಟು ಸಾರ್ವಜನಿಕ ವೇದಿಕೆಗಳಿಂದ ದೂರ ಉಳಿದಿದ್ದರು. ಲೋಕಸಭಾ ಚುನಾವಣೆಯ ಪ್ರಚಾರ ಕಾವು ಪಡೆಯುತ್ತಿದ್ದಂತೆಯೇ ಮಾಯಾವತಿ ಅವರು ದಿಗ್ಗನೆದ್ದು ನಿಂತಿದ್ದಾರೆ.

ಪಕ್ಷವು ಟಿಕೆಟ್ ಹಂಚಿಕೆಯಲ್ಲಿ ಮಾಡಿರುವ ಜಾತಿ ಸಮೀಕರಣವು ಎನ್‌ಡಿಎ ಹಾಗೂ ‘ಇಂಡಿಯಾ’ ಮೈತ್ರಿಕೂಟಗಳ ಲೆಕ್ಕಾಚಾರವನ್ನು ಏರುಪೇರು ಮಾಡಲಿದೆ ಎಂಬ ಚರ್ಚೆಗಳು ನಡೆದಿವೆ. ಅಧಿಕಾರಕ್ಕೆ ಬಂದರೆ ಉತ್ತರ ಪ್ರದೇಶದ ಪಶ್ಚಿಮ ಭಾಗಕ್ಕೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ನೀಡಲಾಗುತ್ತದೆ ಎಂಬ ‘ಅಸ್ತ್ರ’ವನ್ನೂ ದಲಿತ ನಾಯಕಿ ಪ್ರಯೋಗಿಸಿದ್ದಾರೆ.

ಮಾಯಾವತಿ ಅವರು ದಲಿತರ ಜತೆಗೆ ಯಾದವೇತರ ಹಿಂದುಳಿದ ಜಾತಿಗಳು, ಬ್ರಾಹ್ಮಣರು, ಮುಸ್ಲಿಮರನ್ನು ಒಲಿಸಿಕೊಂಡು ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದವರು. 2007ರಲ್ಲಿ ಮಾಯಾವತಿ ಅವರನ್ನು ಮುಖ್ಯಮಂತ್ರಿ ಗಾದಿಗೆ ಕೂರಿಸಿದ್ದು ದಲಿತ–ಮುಸ್ಲಿಂ–ಬ್ರಾಹ್ಮಣ ಜಾತಿ ಸಮೀಕರಣ. ಪಕ್ಷವು ಕಳೆದೊಂದು ದಶಕದಲ್ಲಿ ನಿಧಾನವಾಗಿ ನೆಲೆ ಕಳೆದುಕೊಳ್ಳುತ್ತಾ ಬಂದಿದೆ. ಬ್ರಾಹ್ಮಣರು ಬಿಜೆಪಿ ತೆಕ್ಕೆಗೆ ಮರಳಿದ್ದಾರೆ. ಯಾದವೇತರ ಜಾತಿಗಳು ಪಕ್ಷದಿಂದ ದೂರ ಸರಿದಿವೆ. 2014ರ ಲೋಕಸಭಾ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗೆಲ್ಲಲು ಪಕ್ಷಕ್ಕೆ ಸಾಧ್ಯವಾಗಿರಲಿಲ್ಲ. 2018ರಲ್ಲಿ ಎಸ್‌ಪಿ ಹಾಗೂ ಬಿಎಸ್‌ಪಿ ಮೈತ್ರಿ ಮಾಡಿಕೊಂಡು ಗೋರಖಪುರ ಹಾಗೂ ಫೂಲ್ಪುರ ಲೋಕಸಭಾ ಕ್ಷೇತ್ರಗಳ ಉಪ ಚುನಾವಣೆಯನ್ನು ಎದುರಿಸಿದ್ದವು. ಎರಡೂ ಪಕ್ಷಗಳು ಒಟ್ಟುಗೂಡಿ ಸ್ಪರ್ಧಿಸಿದರೆ ಬಿಜೆಪಿಯನ್ನು ಸೋಲಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದವು.

2019ರ ಲೋಕಸಭಾ ಚುನಾವಣೆಯಲ್ಲಿ ಉಭಯ ಪಕ್ಷಗಳ ನಡುವಿನ ಮೈತ್ರಿ ಮುಂದುವರಿದಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ಉತ್ತುಂಗದ ಅಲೆಯ ನಡುವೆಯೂ ಪಕ್ಷವು 10 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಎಸ್‌ಪಿ ಐದರಲ್ಲಿ ಗೆದ್ದಿತ್ತು. ಬಳಿಕ ಉಭಯ ಪಕ್ಷಗಳು ಮೈತ್ರಿ ಮುರಿದುಕೊಂಡಿದ್ದವು. 2022ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಸ್ವತಂತ್ರವಾಗಿ ಸ್ಪರ್ಧಿಸಿತ್ತು. ಇದರಿಂದಾಗಿ, ವಿಪಕ್ಷಗಳ ಮತ ವಿಭಜನೆಯಾಗಿ ಕಮಲ ಪಾಳಯಕ್ಕೆ ಅನುಕೂಲವಾಗಿತ್ತು. ‘ಇಂಡಿಯಾ’ ಮೈತ್ರಿಕೂಟಕ್ಕೆ ಸೇರ್ಪಡೆಯಾಗುವಂತೆ ವಿರೋಧ ಪಕ್ಷಗಳ ನಾಯಕರು ಕಳೆದೊಂದು ವರ್ಷದಲ್ಲಿ ಹಲವು ಬಾರಿ ಮಾಯಾ ಅವರಿಗೆ ಆಹ್ವಾನ ನೀಡಿದ್ದರು. ‘ಇಂಡಿಯಾ’ ಮೈತ್ರಿಕೂಟದ ಭಾಗವಾಗುವುದಿಲ್ಲ ಎಂದು ಅವರು ಹಲವು ಬಾರಿ ‘ಎಕ್ಸ್’ ಜಾಲತಾಣದಲ್ಲಿ ಸ್ಪಷ್ಟಪಡಿಸಿದ್ದರು. ಸಾರ್ವಜನಿಕ ವೇದಿಕೆಗಳಿಂದಲೂ ದೂರ ಉಳಿದಿದ್ದರು.

ದಲಿತ–ಮುಸ್ಲಿಂ–ಒಬಿಸಿ ಸಂಯೋಜನೆ: ಉತ್ತರ ಪ್ರದೇಶದ 56 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪಕ್ಷ ಪ್ರಕಟಿಸಿದೆ. ಟಿಕೆಟ್ ಹಂಚಿಕೆಯಲ್ಲಿ ದಲಿತ–ಮುಸ್ಲಿಂ–ಒಬಿಸಿ ಸಂಯೋಜನೆಗೆ ಪಕ್ಷ ಒತ್ತು ಕೊಟ್ಟಿದೆ. ಬಿಎಸ್‌ಪಿಯ ಈ ಸಮೀಕರಣವು ಎನ್‌ಡಿಎ ಹಾಗೂ ‘ಇಂಡಿಯಾ’ ಮೈತ್ರಿಕೂಟಗಳ ತಲೆನೋವನ್ನು ಹೆಚ್ಚಿಸಿದೆ.

ರಾಜ್ಯದಲ್ಲಿ ಸುಮಾರು ಶೇ 45ರಷ್ಟು ಇತರ ಹಿಂದುಳಿದ ವರ್ಗದವರು (ಒಬಿಸಿ) ಇದ್ದಾರೆ. ಮುಸ್ಲಿಮರ ಜನಸಂಖ್ಯೆ ಶೇ 19ರಿಂದ 20ರಷ್ಟು ಇದೆ. ಪಕ್ಷವು ಮುಸ್ಲಿಂ ಸಮುದಾಯದ 14 ನಾಯಕರಿಗೆ ಟಿಕೆಟ್ ಕೊಟ್ಟಿದೆ. ಇದು ಎಸ್‌ಪಿಗಿಂತ ಜಾಸ್ತಿ. ರಾಜ್ಯದ ಪಶ್ಚಿಮ ಭಾಗದ ಅಲ್ಪಸಂಖ್ಯಾತ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಪಕ್ಷವು ಮುಸ್ಲಿಂ ಸಮುದಾಯದ ಹುರಿಯಾಳುಗಳನ್ನು ಕಣಕ್ಕಿಳಿಸಿದೆ. ಇದರಿಂದಾಗಿ, ‘ಇಂಡಿಯಾ’ ಮೈತ್ರಿಕೂಟಕ್ಕೆ ಹೊಡೆತ ಬೀಳಬಹುದು ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ಇನ್ನೊಂದೆಡೆ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪ್ರತಿನಿಧಿಸುತ್ತಿದ್ದ ಗೋರಖಪುರ ಕ್ಷೇತ್ರ ಹಾಗೂ ಪ್ರಧಾನಿ ನರೇಂದ್ರ ಮೋದಿ ಪ್ರತಿನಿಧಿಸುತ್ತಿರುವ ವಾರಾಣಸಿಯಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ಮಣೆ ಹಾಕಿದೆ.

2017ರ ವಿಧಾನಸಭಾ ಚುನಾವಣೆಯಲ್ಲೂ ಮಾಯಾವತಿ ಇದೇ ರೀತಿಯ ಪ್ರಯೋಗ ಮಾಡಿದ್ದರು. ಆದರೆ, ಈ ಪ್ರಯೋಗ ಕೈಕೊಟ್ಟಿತ್ತು. ಪಕ್ಷದ ಚಿಹ್ನೆಯಡಿ 99 ಮುಸ್ಲಿಂ ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದರು. ಮುಸ್ಲಿಂ ಮತಗಳು ಸಮಾಜವಾದಿ ಪಕ್ಷ–ಕಾಂಗ್ರೆಸ್ ಮೈತ್ರಿಕೂಟ ಹಾಗೂ ಬಿಎಸ್‌ಪಿ ನಡುವೆ ವಿಭಜನೆಯಾಗಿತ್ತು. ಬಿಜೆಪಿಯು 313 ಕ್ಷೇತ್ರಗಳಲ್ಲಿ ಗೆದ್ದಿತು. ಬಿಎಸ್‌ಪಿ 19 ಸ್ಥಾನಗಳಿಗಷ್ಟೇ ಸಮಾಧಾನಪಟ್ಟುಕೊಂಡಿತ್ತು.

ಕೆಲವು ತಿಂಗಳ ಹಿಂದೆ ಪಕ್ಷ ವಿರೋಧಿ ಚಟುವಟಿಕೆಯ ನೆಪವೊಡ್ಡಿ ಸಂಸದ ಡ್ಯಾನಿಶ್ ಅಲಿ ಅವರನ್ನು ಮಾಯಾವತಿ ಪಕ್ಷದಿಂದ ಅಮಾನತು ಮಾಡಿದ್ದರು. ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ಉಚ್ಚಾಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಂಡಿಸಿದ ನಿರ್ಣಯವನ್ನು ಖಂಡಿಸಿದ್ದು ಡ್ಯಾನಿಶ್ ಮಾಡಿದ ತಪ್ಪಾಗಿತ್ತು. ಮಾಯಾವತಿ ನಡೆಗೆ ಟೀಕೆಗಳು ವ್ಯಕ್ತವಾಗಿದ್ದವು.

ಅಕ್ಬರ್‌ಪುರದಿಂದ ರಾಕೇಶ್ ದ್ವಿವೇದಿ, ಮಿರ್ಜಾಪುರದಿಂದ ಮನೀಶ್ ತ್ರಿಪಾಠಿ, ಉನ್ನಾವ್‌ನಿಂದ ಅಶೋಕ್ ಕುಮಾರ್ ಪಾಂಡೆ, ಫೈಜಾಬಾದ್‌ನಿಂದ ಸಚ್ಚಿದಾನಂದ ಪಾಂಡೆ, ಬಸ್ತಿಯಿಂದ ದಯಾಶಂಕರ್ ಮಿಶ್ರಾ ಸೇರಿದಂತೆ ಗಮನಾರ್ಹ ಸಂಖ್ಯೆಯ ಬ್ರಾಹ್ಮಣರಿಗೂ ಬಿಎಸ್‌ಪಿ ಟಿಕೆಟ್ ನೀಡಿದೆ. ಈ ಮೂಲಕ, ಬಿಜೆಪಿ ಮತಗಳಿಗೂ ಕನ್ನ ಹಾಕಬಹುದು ಎಂಬ ಚರ್ಚೆಗಳು ನಡೆದಿವೆ.

ಪ್ರತ್ಯೇಕ ರಾಜ್ಯ– ಸಹೋದರತ್ವದ ಮಾತು: ಆರ್ಥಿಕವಾಗಿ ಸಮೃದ್ಧವಾಗಿರುವ ರಾಜ್ಯದ ಪಶ್ಚಿಮ ಭಾಗವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸಬೇಕು ಎಂಬ ಬೇಡಿಕೆ ಬಹುಕಾಲದಿಂದಲೂ ಇದೆ. ಈ ಬಗ್ಗೆ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಈ ಹಿಂದೆ ಧ್ವನಿ ಎತ್ತಿತ್ತು. ಇದೀಗ, ಮಾಯಾವತಿ ಅವರೂ ಇದೇ ಮಂತ್ರ ಪಠಿಸಲು ಆರಂಭಿಸಿದ್ದಾರೆ. ಈ ಭಾಗದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಜಾಟ್ ಹಾಗೂ ಮುಸ್ಲಿಂ ಮತಗಳನ್ನು ಸೆಳೆಯುವ ಉದ್ದೇಶದಿಂದ ಈ ಬಾಣ ಹೂಡಿದ್ದಾರೆ. ಜತೆಗೆ, ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಜಾಟ್–ಮುಸ್ಲಿಂ ಸಮುದಾಯಗಳ ಸಹೋದರತ್ವದ (ಬೈಚಾರ) ಅಗತ್ಯವನ್ನು ಒತ್ತಿ ಹೇಳುತ್ತಿದ್ದಾರೆ. ಈ ಮೂಲಕ, ಪಕ್ಷದಿಂದ ದೂರ ಸರಿದಿರುವ ಸಮುದಾಯಗಳನ್ನು ಸೆಳೆಯಲು ಮತ್ತೆ ಕಸರತ್ತು ಆರಂಭಿಸಿದ್ದಾರೆ.

‘ಮಾಯಾ’ ಸ್ಥಾನಕ್ಕೆ ‘ರಾವಣ’ ಕಣ್ಣು

ಕಳೆದ ಎರಡು ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಬಹುಜನ ಸಮಾಜ ಪಕ್ಷದ ನೀರಸ ಪ್ರದರ್ಶನದ ಬಳಿಕ, ಆಜಾದ್ ಸಮಾಜ ಪಕ್ಷದ (ಕಾನ್ಶಿ ರಾಮ್) ಚಂದ್ರಶೇಖರ್ ಆಜಾದ್ ರಾವಣ ಅವರು ಉತ್ತರ ಪ್ರದೇಶದಲ್ಲಿ ಹೊಸ ಪೀಳಿಗೆಯ ದಲಿತ ನಾಯಕರಾಗಿ ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ‘ರಾವಣ’ ಅವರ ವಾಕ್ಚರಿಗೆ ತಲೆದೂಗುವವರ ಸಂಖ್ಯೆ ದೊಡ್ಡದು. ಅವರು ಈ ಸಲ ನಗೀನಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಈ ಚುನಾವಣೆಯಲ್ಲಿ ಗೆಲ್ಲುವುದು ಅವರಿಗೂ ಅನಿವಾರ್ಯ. ಗೆದ್ದರೆ ದಲಿತ ನಾಯಕರಾಗಿ ಗುರುತಿಸಿಕೊಳ್ಳಲು ಹಾಗೂ ಪಕ್ಷ ಸಂಘಟನೆಗೆ ಅನುಕೂಲವಾಗುತ್ತದೆ ಎಂಬುದು ಅವರ ಲೆಕ್ಕಾಚಾರ.

ಚುನಾವಣಾ ಕಣದಲ್ಲಿ...

ಅಮಿತ್ ಶಾ ನಾಮಪತ್ರ ಸಲ್ಲಿಕೆ

ಗಾಂಧಿನಗರ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಾಂಧಿನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಗಾಂಧಿನಗರ ಜಿಲ್ಲಾಧಿಕಾರಿ ಮತ್ತು ಚುನಾವಣಾ ಅಧಿಕಾರಿಯೂ ಆಗಿರುವ ಎಂ.ಕೆ.ದವೆ ಅವರಿಗೆ ನಾಮಪತ್ರ ಸಲ್ಲಿಸುವಾಗ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಜತೆಗಿದ್ದರು. ಮಧ್ಯಾಹ್ನ 12.39ರ ‘ವಿಜಯ ಮುಹೂರ್ತ’ದಲ್ಲಿ ಅವರು ನಾಮಪತ್ರ ಸಲ್ಲಿಸಿದರು.

ಶಾ ಅವರು 2019ರ ಚುನಾವಣೆಯಲ್ಲಿ ಗಾಂಧಿನಗರ ಕ್ಷೇತ್ರದಿಂದ 5 ಲಕ್ಷಕ್ಕೂ ಅಧಿಕ ಮತಗಳಿಂದ ಆಯ್ಕೆಯಾಗಿದ್ದರು. ಈ ಬಾರಿ ಅವರು ಕಾಂಗ್ರೆಸ್‌ನ ಸೋನಲ್ ಪಟೇಲ್ ವಿರುದ್ಧ ಪೈಪೋಟಿ ನಡೆಸುವರು. ಗುಜರಾತ್‌ನ 26 ಲೋಕಸಭಾ ಕ್ಷೇತ್ರಗಳಿಗೆ ಮೇ 7 ರಂದು ಮತದಾನ ನಡೆಯಲಿದೆ.

ನಾಮಪತ್ರ ಸಲ್ಲಿಸಿದ ಪ್ರಮುಖರು

- ನಾರಾಯಣ ರಾಣೆ (ಬಿಜೆಪಿ, ರತ್ನಾಗಿರಿ– ಸಿಂಧುದುರ್ಗ)
- ಅಸಾದುದ್ದೀನ್ ಒವೈಸಿ (ಎಐಎಂಐಎಂ, ಹೈದರಾಬಾದ್)
- ಜಿ.ಕಿಶನ್ ರೆಡ್ಡಿ (ಬಿಜೆಪಿ, ಸಿಕಂದರಾಬಾದ್)

ರಾಹುಲ್ ‘ಹಳೆ ಹೆಸರು’ ಉಲ್ಲೇಖಿಸಿ ಪಿಣರಾಯಿ ಲೇವಡಿ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಲೇವಡಿ ಮಾಡಲು ಬಳಸಿದ್ದ ಹಳೆಯ ಹೆಸರನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶುಕ್ರವಾರ ಉಲ್ಲೇಖಿಸಿದ್ದು, ಇದಕ್ಕೆ ಕಾಂಗ್ರೆಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಪಿಎಂನ ಹಿರಿಯ ಮುಖಂಡ ವಿ.ಎಸ್.ಅಚ್ಯುತಾನಂದನ್ ಅವರು ದಶಕದ ಹಿಂದೆ ‘ಅಮೂಲ್ ಬೇಬಿ’ ಎಂದು ರಾಹುಲ್ ಅವರನ್ನು ಕರೆದಿದ್ದನ್ನು ಪಿಣರಾಯಿ ಅವರು ಉಲ್ಲೇಖಿಸಿದ್ದಾರೆ.

ಪಿಣರಾಯಿ ವಿಜಯನ್ ಅವರನ್ನು ಕೇಂದ್ರದ ಬಿಜೆಪಿ ಸರ್ಕಾರವು ಯಾಕೆ ಜೈಲಿಗೆ ಕಳುಹಿಸಿಲ್ಲ ಎಂದು ರಾಹುಲ್ ಗಾಂಧಿ ಅವರು ಚುನಾವಣಾ ರ‍್ಯಾಲಿಯಲ್ಲಿ ಪ್ರಶ್ನಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿ ವಿಜಯನ್ ಅವರು ಈ ಹೇಳಿಕೆ ನೀಡಿದ್ದರು. ರಾಹುಲ್ ಅವರು ತಮ್ಮ ವರ್ಚಸ್ಸನ್ನು ಸುಧಾರಿಸಿಕೊಂಡಿಲ್ಲ ಎಂದೂ ಹೇಳಿದ್ದರು.

ರಾಹುಲ್ ಕುರಿತು ವಿಜಯನ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ, ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೆಚ್ಚಿಸಲು ವಿಜಯನ್ ಅವರು ತೀರಾ ಕೆಳಮಟ್ಟಕ್ಕೆ ಇಳಿದಿದ್ದಾರೆ’ ಎಂದು ಆರೋಪಿಸಿದರು.

‘ಸಂವಿಧಾನ ಬದಲಾಯಿಸುವ ಹುನ್ನಾರ’

ನವದೆಹಲಿ (ಪಿಟಿಐ): ‘ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಅಧಿಕ ಸ್ಥಾನಗಳನ್ನು ಗೆಲ್ಲುತ್ತೇವೆ ಎಂಬ ಬಿಜೆಪಿಯ ಕೂಗು, ಸಂವಿಧಾನ ಬದಲಿಸಬೇಕೆಂಬ ಅವರ ಬಯಕೆಯನ್ನು ತೋರಿಸುತ್ತದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರ ಆರಂಭಿಸುವುದಕ್ಕೂ ಮುನ್ನ ಜೈರಾಮ್ ಅವರು ‘ಎಕ್ಸ್’ನಲ್ಲಿ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ.

‘ಮಹಾರಾಷ್ಟ್ರದ ವಾರ್ಧಾಗೆ ತೆರಳುತ್ತಿರುವ ಪ್ರಧಾನಿ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ: ರೈತರ ಆತ್ಮಹತ್ಯೆ ತಡೆಯಲು ಪ್ರಧಾನಿ ಯಾವ ಕ್ರಮ ತೆಗೆದುಕೊಂಡಿದ್ದಾರೆ? ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನದಲ್ಲಿ ಬಿಜೆಪಿಯು ಆದಿವಾಸಿಗಳಿಗೆ ನಿರಾಸೆ ಉಂಟುಮಾಡಿರುವುದು ಏಕೆ? ಮಹಾತ್ಮ ಗಾಂಧಿ ಮತ್ತು ಗೋಡ್ಸೆ – ಇವರಲ್ಲಿ ಯಾರ ಪರ ನಿಲ್ಲುವಿರಿ?’ ಎಂದು ಪೋಸ್ಟ್ ಮಾಡಿದ್ದಾರೆ.

‘ಬಿಜೆಪಿಯ ಕೆಲವು ನಾಯಕರು ಮಹಾತ್ಮ ಗಾಂಧಿ ಅವರನ್ನು ನಿಂದಿಸಿದ್ದಾರೆ. ಮತ್ತೆ ಕೆಲವರು, ಗೋಡ್ಸೆ ಮತ್ತು ಗಾಂಧಿ ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡುವುದು ಕಷ್ಟ ಎಂದಿದ್ದಾರೆ. ಬಿಜೆಪಿಯ ‘ಅಬ್ ಕಿ ಬಾರ್ 400 ಪಾರ್’ ಘೋಷಣೆಯು ಸಂವಿಧಾನ ಬದಲಾಯಿಸುವ ಬಯಕೆಯನ್ನು ಸೂಚಿಸುತ್ತದೆ. ಬಿಜೆಪಿ ನಾಯಕರು ಪದೇ ಪದೇ ಸಂವಿಧಾನವನ್ನು ಬದಲಾಯಿಸುವ ಬಗ್ಗೆ ಮಾತನಾಡುವುದು ಏಕೆ? ಈ ಬಗ್ಗೆ ಮೋದಿ ಮೌನ ಮುರಿಯಬೇಕು’ ಎಂದು ಹೇಳಿದ್ದಾರೆ.

‘ಬಿಜೆಪಿ ಅತಿದೊಡ್ಡ ಸುಳ್ಳುಗಾರ’

ನೊಯ್ಡಾ: ‘ಬಹುಶಃ ಬಿಜೆಪಿಯಷ್ಟು ಸುಳ್ಳುಗಳನ್ನು ಯಾವ ರಾಜಕೀಯ ಪಕ್ಷವೂ ಹೇಳಿಲ್ಲ. ಬಿಜೆಪಿಯು ಇಡೀ ವಿಶ್ವದಲ್ಲೇ ಅತಿದೊಡ್ಡ ಸುಳ್ಳುಗಾರ’ ಎಂದು ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಟೀಕಿಸಿದರು.

ನೊಯ್ಡಾದಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ‘ಬಿಜೆಪಿಯು ಈ ಬಾರಿ ಅಧಿಕಾರ ಕಳೆದುಕೊಳ್ಳಲಿದೆ. ಮೊದಲ ಹಂತದ ಮತದಾನದಲ್ಲೇ ಅದರ ಮುನ್ಸೂಚನೆ ಲಭಿಸಿದೆ’ ಎಂದರು.

ಹಕ್ಕು ಚಲಾವಣೆ ಮೇಘಾಲಯದ ಮತಗಟ್ಟೆಯೊಂದಕ್ಕೆ ಶುಕ್ರವಾರ ಮಕ್ಕಳೊಂದಿಗೆ ಬಂದು ಮತದಾನ ಮಾಡಿದ ಮಹಿಳೆಯರು ಶಾಯಿ ಗುರುತನ್ನು ತೋರಿಸಿದರು–ಪಿಟಿಐ ಚಿತ್ರ

ಕಣದಿಂದ ಹಿಂದೆ ಸರಿದ ಭುಜಬಲ್

ಮುಂಬೈ (ಪಿಟಿಐ): ಎನ್‌ಸಿಪಿ ಹಿರಿಯ ಮುಖಂಡ ಮತ್ತು ಮಹಾರಾಷ್ಟ್ರ ಸರ್ಕಾರದ ಸಚಿವ ಛಗನ್ ಭುಜಬಲ್ ತಾವು ನಾಸಿಕ್ ಲೋಕಸಭಾ ಕ್ಷೇತ್ರದ ಟಿಕೆಟ್ ಬಯಸುವುದಿಲ್ಲ ಎಂದು ಘೋಷಿಸಿದ್ದಾರೆ. ಈ ಮೂಲಕ ಮಿತ್ರಪಕ್ಷ ಶಿವಸೇನಾದೊಂದಿಗೆ ಕ್ಷೇತ್ರದ ಟಿಕೆಟ್‌ಗಾಗಿ ನಡೆಯುತ್ತಿದ್ದ ಪೈಪೋಟಿಯನ್ನು ಅಂತ್ಯಗೊಳಿಸಿ, ಅದರ ಹಾದಿ ಸುಗಮಗೊಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕ್ಷೇತ್ರದ ಅಭ್ಯರ್ಥಿಯ ಬಗ್ಗೆ ಚರ್ಚೆ ಮಾಡುವಾಗ ಸಮೀರ್ ಭುಜಬಲ್ ಹೆಸರು ಪ್ರಸ್ತಾಪವಾಯಿತು. ಆಗ, ನಾನು ಟಿಕೆಟ್ ಕೇಳದಿದ್ದರೂ, ಅಮಿತ್ ಶಾ ನನ್ನನ್ನು ಸ್ಪರ್ಧಿಸುವಂತೆ ಕೇಳಿದರು. ಆದರೆ, ಹಾಲಿ ಸಂಸದರು ತಮ್ಮ ಪಕ್ಷದವರಾದ್ದರಿಂದ ಕ್ಷೇತ್ರದ ಟಿಕೆಟ್ ತಮ್ಮ ಪಕ್ಷಕ್ಕೇ ಬೇಕು ಎಂದು ಮುಖ್ಯಮಂತ್ರಿ ಶಿಂದೆ ಒತ್ತಾಯಿಸಿದರು. ಗೊಂದಲ ನಿವಾರಿಸಲು ನಾನು ಕಣದಿಂದ ಹಿಂದೆ ಸರಿಯಲು ನಿರ್ಧರಿಸಿದೆ’ ಎಂದು ಹೇಳಿದರು.

‘80 ಕೋಟಿ ಜನರಿಗೆ ಉಚಿತ ಪಡಿತರ’

ಅಮ್ರೋಹಾ (ಉತ್ತರ ಪ್ರದೇಶ) (ಪಿಟಿಐ): ಪಾಕಿಸ್ತಾನದಲ್ಲಿ ಜನರು ಹಸಿವಿನಿಂದ ಬಳಲುತ್ತಿದ್ದರೆ, ನಮ್ಮ ದೇಶದಲ್ಲಿ 80 ಕೋಟಿ ಜನರು ಉಚಿತವಾಗಿ ಪಡಿತರ ಪಡೆಯುತ್ತಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಶುಕ್ರವಾರ ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಹೇಳಿದರು.

ಪೂರ್ಣ ಬಹುಮತದೊಂದಿಗೆ ಪಕ್ಷವನ್ನು ಗೆಲ್ಲಿಸುವ ಅಗತ್ಯ ಪ್ರತಿಪಾದಿಸಿದ ಪ್ರಧಾನಿ ಮೋದಿ

‘ಯುದ್ಧದ ಕಾರ್ಮೋಡ: ಬಲಿಷ್ಠ ಬಿಜೆಪಿ ಸರ್ಕಾರ ಬೇಕು’

ಪ್ರಜಾವಾಣಿ ವಾರ್ತೆ/ಪಿಟಿಐ

ದಮೋಹ್: ಜಗತ್ತಿನಲ್ಲಿ ಯುದ್ಧದ ಕಾರ್ಮೋಡ ಸುಳಿಯುತ್ತಿದ್ದು, ಇಂಥ ಸಂದರ್ಭದಲ್ಲಿ ಎದುರಾಗುವ ಯಾವುದೇ ಪರಿಸ್ಥಿತಿ ಎದುರಿಸಲು ಮತ್ತು ದೇಶದ ಹಿತಾಸಕ್ತಿ ರಕ್ಷಿಸಲು ಪರಿಪೂರ್ಣ ಬಹುಮತದೊಂದಿಗೆ ಬಲಿಷ್ಠ ಬಿಜೆಪಿ ಸರ್ಕಾರದ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಶುಕ್ರವಾರ ಪ್ರತಿಪಾದಿಸಿದರು.

ಮಧ್ಯಪ್ರದೇಶದ ದಮೋಹ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಸ್ಥಿರ ಮತ್ತು ಸಮರ್ಥ ಸರ್ಕಾರ ಹೇಗೆ ಕೆಲಸ ಮಾಡುತ್ತದೆ ಎನ್ನುವುದು ಕೊರೊನಾ ಸಾಂಕ್ರಾಮಿಕದ ವೇಳೆ ಸಾಬೀತಾಗಿದೆ. ಸರ್ಕಾರ ಕೋಟ್ಯಂತರ ಮಂದಿಗೆ ಉಚಿತ ಲಸಿಕೆ ನೀಡಿತು. ಬಡವರಿಗೆ ಪಡಿತರ ವಿತರಿಸಿತು’ ಎಂದು ತಿಳಿಸಿದರು.

‘ಇಂದು ದೇಶವನ್ನು ಆಳುತ್ತಿರುವ ಸರ್ಕಾರ ಯಾವುದೇ ಒತ್ತಡಕ್ಕೂ ಒಳಗಾಗುವುದಿಲ್ಲ, ಯಾರ ಮುಂದೆಯೂ ತಲೆಬಾಗುವುದಿಲ್ಲ. ದೇಶ ಮೊದಲು ಎನ್ನುವುದು ನಮ್ಮ ತತ್ವ’ ಎಂದು ಪ್ರತಿಪಾದಿಸಿದರು.

ಮೋದಿ ಅವರು ಹೆಸರು ಹೇಳದೆಯೇ ನೆರೆಯ ಪಾಕಿಸ್ತಾನದ ಕಾಲೆಳೆದರು. ‘ಜಗತ್ತಿನ ಕೆಲವು ದೇಶಗಳ ಪರಿಸ್ಥಿತಿ ಕಳವಳಕಾರಿಯಾಗಿದೆ. ಅನೇಕ ದೇಶಗಳು ದಿವಾಳಿಯಾಗುತ್ತಿವೆ. ‘ಆತಂಕ್’ (ಉಗ್ರವಾದ) ಪೂರೈಸುವ ನಮ್ಮ ನೆರೆಯ ದೇಶವೊಂದು ‘ಆಟಾ’ಕ್ಕಾಗಿ (ಹಿಟ್ಟು) ಪರದಾಡುತ್ತಿದೆ’ ಎಂದು ಹೇಳಿದರು.

‘ದಶಕಗಳ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್, ದೇಶದ ರಕ್ಷಣಾ ವಲಯವನ್ನು ದುರ್ಬಲಗೊಳಿಸಿತು. ಫ್ರಾನ್ಸ್ ನಿರ್ಮಿತ ರಫೇಲ್ ಯುದ್ಧವಿಮಾನಗಳು ಭಾರತಕ್ಕೆ ಬರುವುದು ಅವರಿಗೆ ಬೇಕಿರಲಿಲ್ಲ. ಭಾರತದ ವಾಯುಪಡೆ ಸಮಸ್ಯೆಗಳಲ್ಲಿಯೇ ಉಳಿಯಲಿ ಎಂದು ಅವರು ಬಯಸಿದ್ದರು. ವಾಯುಪಡೆ ಸಬಲವಾಗದಂತೆ ನೋಡಿಕೊಳ್ಳಲು ತಮ್ಮ ಸರ್ವಶಕ್ತಿಯನ್ನೂ ಬಳಸಿದರು. ಬಿಜೆಪಿ ಆಡಳಿತದಲ್ಲಿ ಸೇನಾ ಪಡೆಗಳು ಸ್ವಾವಲಂಬಿಯಾದವು. ಅವರು ಶಸ್ತ್ರಾಸ್ತ್ರಗಳ ಖರೀದಿಯಲ್ಲಿ ತಮ್ಮ ಸ್ವಂತ ಹಿತಾಸಕ್ತಿಯನ್ನಷ್ಟೇ ನೋಡಿದರು’ ಎಂದು ಆರೋಪಿಸಿದರು.

‘ಭಾರತವು ಶಸ್ತ್ರಾಸ್ತ್ರ ರಫ್ತುದಾರ ದೇಶವಾಗುತ್ತಿದೆ. ಪ್ರಸಕ್ತ ವರ್ಷದಲ್ಲಿಯೇ ಭಾರತವು ₹21 ಸಾವಿರ ಕೋಟಿಯ ಶಸ್ತ್ರಾಸ್ತ್ರ ಪೂರೈಕೆ ಮಾಡಿದೆ. ನಾನು ಭಾಷಣ ಮಾಡುತ್ತಿರುವ ಈ ಸಮಯದಲ್ಲಿ ಫಿಲಿಪ್ಪೀನ್ಸ್‌ಗೆ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಪೂರೈಸಲಾಗುತ್ತಿದೆ’ ಎಂದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ಆಹ್ವಾನ ಸ್ವೀಕರಿಸಿದ್ದಕ್ಕಾಗಿ ರಾಮಜನ್ಮಭೂಮಿ–ಬಾಬ್ರಿ ಮಸೀದಿ ಪ್ರಕರಣದಲ್ಲಿ ಪ್ರತಿವಾದಿಯಾಗಿದ್ದ ಇಕ್ಬಾಲ್ ಅನ್ಸಾರಿ ಅವರನ್ನು ಶ್ಲಾಘಿಸಿದ ಮೋದಿ, ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದ ವಿಪಕ್ಷವನ್ನು ಟೀಕಿಸಿದರು.

ಶ್ರೀ ಕೃಷ್ಣ, ಶಮಿ ಹೆಸರು ಪ್ರಸ್ತಾಪಿಸಿದ ಮೋದಿ

ಲಖನೌ: ಸಮಾಜವಾದಿ ಪಕ್ಷದ ಮತಬುಟ್ಟಿಗೆ ಕೈಹಾಕಿದ ಪ್ರಧಾನಿ ಮೋದಿ, ಯಾದವ ಸಮುದಾಯದ ಶ್ರೀ ಕೃಷ್ಣ ಮತ್ತು ಮುಸ್ಲಿಂ ಸಮುದಾಯದ ಕ್ರಿಕೆಟ್ ಆಟಗಾರ ಮೊಹಮದ್ ಶಮಿ ಅವರನ್ನು ಸ್ಮರಿಸಿದರು.

‘ನಾನು ದ್ವಾರಕಾದಲ್ಲಿ ನೀರಿನೊಳಗೆ ಹೋಗಿ ಶ್ರೀಕೃಷ್ಣನನ್ನು ಪೂಜಿಸಿದೆ. ಆದರೆ ಕಾಂಗ್ರೆಸ್‌ನ ಶಹಜಾದೆ (ರಾಹುಲ್ ಗಾಂಧಿ) ನೀರಿನೊಳಗೆ ಪೂಜಿಸುವಂಥದ್ದು ಏನೂ ಇಲ್ಲ ಎಂದರು. ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಅವರು ನೂರಾರು ವರ್ಷಗಳ ನಂಬಿಕೆಯನ್ನು ತಿರಸ್ಕರಿಸುತ್ತಿದ್ದಾರೆ. ಅಂಥವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಹೇಗೆ ಸಾಧ್ಯ ಎಂದು ನಾನು ಯದುವಂಶದ ನಾಯಕರೆಂದು ಹೇಳಿಕೊಳ್ಳುವವರನ್ನು ಕೇಳಲು ಬಯಸುತ್ತೇನೆ’ ಎಂದು ಹೇಳಿದರು.

ಅಮ್ರೋಹ ಮೂಲದ ಕ್ರಿಕೆಟ್ ಆಟಗಾರ ಮೊಹಮ್ಮದ್ ಶಮಿ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, ‘ಕ್ರಿಕೆಟ್‌ನ ಅದ್ಭುತ ಸಾಧನೆಗಾಗಿ ಅವರಿಗೆ ಕೇಂದ್ರವು ಅರ್ಜುನ ಪ್ರಶಸ್ತಿ ನೀಡಿತು’ ಎಂದರು.



ಚುಟುಕು

ಛಿಂದವಾಡ ಮೇಯರ್ ‘ಯೂ–ಟರ್ನ್’

ಛಿಂದವಾಡ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಛಿಂದವಾಡ ನಗರದ ಮೇಯರ್ ವಿಕ್ರಮ್ ಅಹಾಕೆ ಅವರು ಮತದಾನದ ದಿನ ‘ಉಲ್ಟಾ’ ಹೊಡೆದಿದ್ದು, ಕಾಂಗ್ರೆಸ್‌ಗೆ ಬೆಂಬಲ ನೀಡುವಂತೆ ಮತದಾರರಿಗೆ ಮನವಿ ಮಾಡಿದ್ದಾರೆ.

ಛಿಂದವಾಡ ಲೋಕಸಭಾ ಕ್ಷೇತ್ರದ ಮತದಾನ ಶುಕ್ರವಾರ ನಡೆಯಿತು. ಇಲ್ಲಿ ಕಾಂಗ್ರೆಸ್‌ನ ನಕುಲ್‌ನಾಥ್ (ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಅವರ ಪುತ್ರ) ಮತ್ತು ಬಿಜೆಪಿಯ ವಿವೇಕ್ ಬಂಟಿ ಸಾಹು ಮಧ್ಯೆ ಪೈಪೋಟಿಯಿದೆ.

ವಿಕ್ರಮ್ ಅವರು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಸಮ್ಮುಖದಲ್ಲಿ ಏಪ್ರಿಲ್ 1ರಂದು ಬಿಜೆಪಿ ಸೇರಿದ್ದರು. ಆದರೆ ಶುಕ್ರವಾರ ಅವರು ‘ಕಾಂಗ್ರೆಸ್ ಅಭ್ಯರ್ಥಿ ನಕುಲ್‌ನಾಥ್‌ಗೆ ಮತ ನೀಡಿ’ ಎಂದು ಮನವಿ ಮಾಡಿದ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

‘ಬಿಜೆಪಿ ಸೇರಿದ ಬಳಿಕ ನನಗೆ ಉಸಿರು ಕಟ್ಟಿದಂತಹ ಅನುಭವ ಉಂಟಾಗಿದೆ. ಛಿಂದವಾಡದ ಅಭಿವೃದ್ಧಿಗೆ ಶ್ರಮಿಸಿದ ಕಮಲ್‌ನಾಥ್ ಮತ್ತು ನಕುಲ್‌ನಾಥ್ ಅವರ ಪರ ನಾನು ನಿಲ್ಲುತ್ತೇನೆ. ನಕುಲ್‌ನಾಥ್ ಅವರ ಗೆಲುವನ್ನು ಖಾತರಿಪಡಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತೇನೆ’ ಎಂದು ಸಂದೇಶದಲ್ಲಿ ತಿಳಿಸಿದ್ದಾರೆ.

ಚಂದ್ರಬಾಬು ಆಸ್ತಿ ₹810 ಕೋಟಿ

ಅಮರಾವತಿ (ಪಿಟಿಐ): ಟಿಡಿಪಿ ಮುಖಂಡ, ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಕುಟುಂಬದ ಆಸ್ತಿಯ ಮೌಲ್ಯ ಕಳೆದ ಐದು ವರ್ಷಗಳಲ್ಲಿ ಶೇ 41ರಷ್ಟು ಹೆಚ್ಚಳವಾಗಿದೆ.



ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕುಪ್ಪಂ ಕ್ಷೇತ್ರದಿಂದ ಕಣಕ್ಕಿಳಿದಿರುವ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದು, ₹810.42 ಕೋಟಿ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದಾರೆ. ಚಂದ್ರಬಾಬು ಅವರ ಪರವಾಗಿ ಪತ್ನಿ ಎನ್. ಭುವನೇಶ್ವರಿ ಅವರು ನಾಮಪತ್ರ ಸಲ್ಲಿಸಿದರು. ವಿಧಾನಸಭಾ ಚುನಾವಣೆ ಮೇ 13ರಂದು ನಡೆಯಲಿದೆ.

ಕಳೆದ ಚುನಾವಣೆ ಸಮಯದಲ್ಲಿ ನಾಯ್ಡು ಅವರು ₹574.3 ಕೋಟಿ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದರು. ಭುವನೇಶ್ವರಿ ಅವರು ಹೆರಿಟೇಜ್ ಫುಡ್ಸ್ ಲಿಮಿಟೆಡ್ ಕಂಪನಿಯ 2.26 ಕೋಟಿ ಷೇರುಗಳನ್ನು ಹೊಂದಿದ್ದು, ಇದರ ಮಾರುಕಟ್ಟೆ ಮೌಲ್ಯ ₹764 ಕೋಟಿ ಇದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿದ್ದಾರೆ. 2019ರಲ್ಲಿ ಈ ಷೇರುಗಳ ಮೌಲ್ಯ ₹545.76 ಕೋಟಿಯಷ್ಟಿತ್ತು.

ನಾಯ್ಡು ಅವರು ₹4.80 ಲಕ್ಷ ಮೌಲ್ಯದ ಚರಾಸ್ತಿ ಮತ್ತು ₹36.31 ಲಕ್ಷ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ಭುವನೇಶ್ವರಿ ಬಳಿ 3.4 ಕೆ.ಜಿ. ಚಿನ್ನ ಹಾಗೂ 41.5 ಕೆ.ಜಿ. ಬೆಳ್ಳಿ ಇದೆ.

ಎಂಥಾ ಮಾತು!

ಅಯೋಧ್ಯೆಯ ರಾಮ ಮಂದಿರ ವಿಚಾರವನ್ನು ಯಾರೊಬ್ಬರೂ ಚರ್ಚಿಸುತ್ತಿಲ್ಲ. ಅದು ಮುಗಿದು ಹೋದ ವಿಷಯ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಇದರಿಂದ ಯಾವುದೇ ರಾಜಕೀಯ ಲಾಭ ದೊರಕದು. ಅಯೋಧ್ಯೆಯಲ್ಲಿ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದರೂ ಸೀತಾ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಲ್ಲ ಎಂದು ಕೆಲವು ಮಹಿಳೆಯರು ನನ್ನಲ್ಲಿ ದೂರಿದ್ದಾರೆ

ಶರದ್ ಪವಾರ್, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ

ಶರದ್ ಪವಾರ್ ಅವರು ಅಯೋಧ್ಯೆಯ ರಾಮ ಮಂದಿರದ ಕುರಿತು ಮಾಹಿತಿ ಸಂಗ್ರಹಿಸಿ, ಬಳಿಕ ಹೇಳಿಕೆ ನೀಡಬೇಕಿತ್ತು. ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆ ಮಾಡಿರುವುದು ಬಾಲ ರಾಮನ ಮೂರ್ತಿ. ಪವಾರ್ ಅವರು ಅಯೋಧ್ಯೆ ವಿಚಾರವಾಗಿ ರಾಜಕೀಯ ಮಾಡಲು ಆಸಕ್ತರಾಗಿದ್ದಾರೆ. ತಮ್ಮ ಸೊಸೆಯನ್ನು ಹೊರಗಿನವರು ಎಂದು ಹೇಳಿದ್ದ ಪವಾರ್ ಅವರು, ಈಗ ಸೀತಾ ಮಾತೆಯ ಬಗ್ಗೆ ಕಾಳಜಿ ತೋರಿಸುತ್ತಿದ್ದಾರೆ. ಇದು ಕಪಟತನದ ಪರಮಾವಧಿ

ಚಂದ್ರಶೇಖರ್ ಭಾವಂಕುಲೆ, ಬಿಜೆಪಿ ಮಹಾರಾಷ್ಟ್ರ ರಾಜ್ಯ ಘಟಕ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಕೊಲ್ಹಾಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರಿಕೆಯಾಗಿದ್ದು, ಘಟಾನುಘಟಿಗಳ ಹಣಾಹಣಿಗೆ ಕಣ ಸಜ್ಜಾಗಿದೆ. ‘ಮಹಾ ವಿಕಾಸ್ ಆಘಾಡಿ’ಯು ಛತ್ರಪತಿ ಶಿವಾಜಿ ಮಹಾರಾಜ್ ವಂಶಸ್ಥರಾದ, ಕಾಂಗ್ರೆಸ್‌ನ ಶಾಹು ಛತ್ರಪತಿ ಮಹಾರಾಜ್ ಅವರನ್ನು ಅಖಾಡಕ್ಕಿಳಿಸಿದೆ. ಇವರನ್ನು ಮಣಿಸಲು ‘ಮಹಾಯುತಿ’ ಒಕ್ಕೂಟವು ಶಿವಸೇನಾದ ಏಕನಾಥ ಶಿಂದೆ ಬಣದ ಸಂಜಯ್ ಮಾಂಡಲಿಕ್ ಅವರನ್ನು ಕಣಕ್ಕಿಳಿಸಿದೆ. ಎನ್‌ಸಿಪಿ ಶರದ್ ಪವಾರ್ ಬಣವು ‘ಮಹಾ ವಿಕಾಸ್ ಆಘಾಡಿ’ಯ ಜೊತೆಗಿರುವುದರಿಂದ ಆ ಪಕ್ಷದ ಮತಗಳು ಶಾಹು ಅವರಿಗೆ ಸಿಗಲಿದೆ ಎಂಬ ವಿಶ್ವಾಸ ಕಾಂಗ್ರೆಸ್ ಮುಖಂಡರದ್ದಾಗಿದೆ. 2019ರಲ್ಲಿ ಶಿವಸೇನಾದಿಂದ ಸ್ಪರ್ಧಿಸಿದ್ದ ಸಂಜಯ್ ಅವರು 2,70,568 ಮತಗಳ ಅಂತರದಿಂದ ಎನ್‌ಸಿಪಿಯ ಧನಂಜಯ ಮಹಾದಿಕ್ ಅವರನ್ನು ಪರಾಭವಗೊಳಿಸಿದ್ದರು. ಶಾಹು ಅವರು ಸಮಾಜ ಸುಧಾರಕ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಆಪ್ತರಾಗಿದ್ದ ರಾಜರ್ಷಿ ಛತ್ರಪತಿ ಶಾಹು ಮಹಾರಾಜ್ ಅವರ ಮೊಮ್ಮಗನಾಗಿದ್ದಾರೆ. 2014ರಲ್ಲಿ ಈ ಕ್ಷೇತ್ರದಿಂದ ಎನ್‌ಸಿಪಿಯ ಧನಂಜಯ ಮಹಾದಿಕ್ ಅವರು ಲೋಕಸಭೆಗೆ ಆಯ್ಕೆಯಾಗಿದ್ದರು. ಮಹಾರಾಷ್ಟ್ರದಲ್ಲಿ ಎನ್‌ಸಿಪಿ ಮತ್ತು ಶಿವಸೇನಾ ಇಬ್ಭಾಗವಾಗಿರುವುದರಿಂದ ಈ ಬಾರಿ ಜನರು ಯಾವ ಅಭ್ಯರ್ಥಿಯ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಅನಂತನಾಗ್– ರಜೌರಿ (ಜಮ್ಮು ಮತ್ತು ಕಾಶ್ಮೀರ)

ಮೆಹಬೂಬಾ ಮುಫ್ತಿ
(ಪಿಡಿಪಿ)

ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್–ರಜೌರಿ ಲೋಕಸಭಾ ಕ್ಷೇತ್ರವು ಈ ಬಾರಿ ಪಿಡಿಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಅಭ್ಯರ್ಥಿಗಳ ನಡುವಿನ ತುರುಸಿನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ಪುನರ್ ವಿಂಗಡನೆಯಾದ ಬಳಿಕ ಹೊಸದಾಗಿ ರಚನೆಯಾದ ಈ ಕ್ಷೇತ್ರದಿಂದ ಪಿಡಿಪಿ ಅಭ್ಯರ್ಥಿಯಾಗಿ ಪಕ್ಷದ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರೇ ಕಣಕ್ಕಿಳಿದಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಮೊದಲ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಮುಫ್ತಿ ಅವರು, ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದ್ದರು. 2018ರಲ್ಲಿ ಬಿಜೆಪಿಯು ಬೆಂಬಲ ಹಿಂಪಡೆದಾಗ ಇವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮುಫ್ತಿ ಅವರ ಪಕ್ಷ ಕೂಡ ‘ಇಂಡಿಯಾ’ ಒಕ್ಕೂಟದ ಜೊತೆಗೆ ಗುರುತಿಸಿಕೊಂಡಿತ್ತು. ಆದರೆ ನ್ಯಾಷನಲ್ ಕಾನ್ಫರೆನ್ಸ್, ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸುವುದಾಗಿ ಘೋಷಿಸಿದ ಬಳಿಕ, ತಮ್ಮ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಮುಫ್ತಿ ಘೋಷಿಸಿದ್ದರು.

V/S

ಮಿಯಾನ್ ಅಲ್ತಾಫ್ ಅಹ್ಮದ್
(ನ್ಯಾಷನಲ್ ಕಾನ್ಫರೆನ್ಸ್)

ಮೆಹಬೂಬಾ ಮುಫ್ತಿ ಅವರನ್ನು ಮಣಿಸಲು ನ್ಯಾಷನಲ್ ಕಾನ್ಫರೆನ್ಸ್, ಗುಜ್ಜರ್ ಮುಖಂಡ ಮಿಯಾನ್ ಅಲ್ತಾಫ್ ಅಹಮ್ಮದ್ ಅವರನ್ನು ಅಖಾಡಕ್ಕಿಳಿಸಿದೆ. ನ್ಯಾಷನಲ್ ಕಾನ್ಫರೆನ್ಸ್, ‘ಇಂಡಿಯಾ’ ಮೈತ್ರಿಕೂಟದ ಜೊತೆಗಿರುವುದರಿಂದ ಅಲ್ತಾಫ್ ಅವರು ಗೆಲ್ಲುವ ಸಾಧ್ಯತೆ ಹೆಚ್ಚಿದೆ ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ. ಅಲ್ತಾಫ್ ಅವರು ‘ಗುಜ್ಜರ್ ಜಾಟ್ ಕಾನ್ಫರೆನ್ಸ್’ನ ಸ್ಥಾಪಕ ಅಧ್ಯಕ್ಷ ಮಿಯಾನ್ ನಿಜಾಮುದ್ದೀನ್ ಅವರ ಮೊಮ್ಮಗ. ಅಲ್ತಾಫ್ ಅವರ ತಂದೆ ಮಿಯಾನ್ ಬಶೀರ್ ಅಹಮ್ಮದ್ ಕೂಡ ಪ್ರಭಾವಿ ಮುಖಂಡರಾಗಿದ್ದರು. ಅಲ್ತಾಫ್ ಅವರು ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ ಇವರು ಗುಜ್ಜರ್, ಬಕರ್ವಾಲ್ ಮತ್ತು ಪಹಾರಿ ಸಮುದಾಯದ ಮುಖಂಡರೂ ಹೌದು. ಸ್ಥಳೀಯವಾಗಿ ಪ್ರಭಾವಿ ಮುಖಂಡರಾಗಿರುವುದರಿಂದಲೇ ನ್ಯಾಷನಲ್ ಕಾನ್ಫರೆನ್ಸ್ ಇವರನ್ನು ಕಣಕ್ಕಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,995
ಇಂದಿನ ಅಂತ್ಯ	22,147
▲	151
ದಿನದ ಗರಿಷ್ಠ	22,179

ವಿನಿಮಯ ದರ

$ ಡಾಲರ್	83.44
£ ಪೌಂಡ್	103.92
€ ಯೂರೊ	88.96
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹485
12 ಕ್ಕೆ	₹65
ಮೈಸೂರು	
100ಕ್ಕೆ	₹487

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹945 (952)
ಸೂರ್ಯಕಾಂತಿ (ರಿಫೈನ್ಡ್)	₹935 (945)
ಪಾಮೊಲೀನ್	₹935 (942)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-445
ದ್ವಿತಳಿ (ಬಿ.ವಿ)	₹301-582

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹177.50
ಆರ್‌ಎಸ್‌ಎಸ್-5	₹171.50
ಗುಡ್ ಲಾಟ್	₹161.50

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹7500-8800
ಮಧುಗಿರಿ	₹2970-6000
ಪುತ್ತೂರು	₹5500-8600
ತಿಪಟೂರು	₹8500-9000

ಚಿನ್ನದ ದರ ₹400 ಏರಿಕೆ

ನವದೆಹಲಿ (ಪಿಟಿಐ): ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಸತತವಾಗಿ ಏರಿಕೆಯಾಗುತ್ತಿದೆ.

10 ಗ್ರಾಂ ಚಿನ್ನದ ದರವು ₹400 ಹೆಚ್ಚಳವಾಗಿ ₹74,100ರಂತೆ ಮಾರಾಟವಾಗಿದ್ದು, ಸಾರ್ವಕಾಲಿಕ ಗರಿಷ್ಠಕ್ಕೆ ಮುಟ್ಟಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹100 ಏರಿಕೆಯಾಗಿ ₹86,600ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,390 ಡಾಲರ್ (ಅಂದಾಜು ₹1.99 ಲಕ್ಷ) ಮತ್ತು 28.29 (ಅಂದಾಜು ₹2,360) ಡಾಲರ್‌ನಂತೆ ಮಾರಾಟವಾಗಿದೆ.

ಮುಂಬೈ ಧಾರಣೆ

ಶೇಂಗಾ	19-4-2024
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10802
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆಗಿ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	900 (905)
ಪಾಮ್ ವಾರದ ಡೆಲಿವರಿ	933 (940)
ಸೂರ್ಯಕಾಂತಿ ಎಣ್ಣೆ ಕಚ್ಚಾ	865(875)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿದ್ದ)	
ಅಪರಂಜಿ ಚಿನ್ನ 10ಗ್ರಾಂ	₹73,000 (73,250)
ಬೆಳ್ಳಿ ಕೆ.ಜಿ	₹82,900 (83,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಅಡಿಕೆ		ರಾಶಿ	32069-51596	ಚಾಲಿ	32198-36639
ಕುಮಟ		ಸರಕು	52200-83506	ಕೆಂಪುಗೋಟು	27399-36391
ಚಾಲಿ	25699-28209	ಸಿದ್ದಾಪುರ		ರಾಶಿ	44208-49199
ಕೋಕ	12509-24509	ಬಿಳೇಗೋಟು	26009-29899	ಯಲ್ಲಾಪುರ	
ಫ್ಯಾಕ್ಟರಿ	11019-21400	ಚಾಲಿ	32469-35699	ಅಪಿ	56769-60269
ಹಳೇಚಾಲಿ	36999-38999	ಕೋಕ	24699-28609	ಬಿಳೇಗೋಟು	23012-30810
ಹೊಸಚಾಲಿ	31509-34599	ಕೆಂಪುಗೋಟು	26019-28899	ಕೋಕ	11069-28906
ಪುತ್ತೂರು		ರಾಶಿ	43099-48959	ಹಳೇಚಾಲಿ	37001-38440
ಹೊಸ	26500-36600	ತಟ್ಟಿಬೆಟ್ಟೆ	36499-47509	ಹೊಸಚಾಲಿ	31891-35799
ಶಿವಮೊಗ್ಗ		ಶಿರಸಿ		ಕೆಂಪುಗೋಟು	24000-34200
ಬೆಟ್ಟೆ	40166-55555	ಚಾಲಿ	34601-45499	ರಾಶಿ	44040-55089
ಗೊರಬಲು	21000-34699	ಬಿಳೇಗೋಟು	21009-29018	ತಟ್ಟಿಬೆಟ್ಟೆ	36910-43269

ಕರಡಿ ಓಟಕ್ಕೆ ಗೂಳಿ ತಡೆ: ಹೂಡಿಕೆದಾರರಲ್ಲಿ ಹರ್ಷ

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ನಾಲ್ಕು ದಿನಗಳ ಕರಡಿ ಕುಣಿತಕ್ಕೆ ಶುಕ್ರವಾರ ತೆರೆ ಬಿದ್ದಿದೆ. ಆರಂಭಿಕ ವಹಿವಾಟಿನಲ್ಲಿ ಇಳಿಕೆ ದಾಖಲಿಸಿದ್ದ ಷೇರು ಸೂಚ್ಯಂಕಗಳು ಬಳಿಕ ಚೇತರಿಕೆಯ ಹಳಿಗೆ ಮರಳಿದವು.

ಬ್ಯಾಂಕಿಂಗ್ ಹಾಗೂ ಆಟೊ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆದಿತ್ತು. ಇದರಿಂದ ನಷ್ಟ ಅನುಭವಿಸಿದ್ದ ಹೂಡಿಕೆದಾರರ ಮೊಗದಲ್ಲಿ ಕೊಂಚ ಹರ್ಷ ಮೂಡಿದೆ.

ಇಸ್ರೇಲ್ ಮೇಲೆ ಇರಾನ್ ಪ್ರತಿ ದಾಳಿ ನಡೆಸಿದ್ದರಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗಿತ್ತು. ಆ ನಂತರ ಇರಾನ್‌ನಿಂದ ದಾಳಿಯ ತೀವ್ರತೆ ತಗ್ಗಿದ್ದರಿಂದ ತೈಲದ ಬೆಲೆ ಇಳಿಕೆಯಾಗುತ್ತಿದೆ. ಇದು ಸೂಚ್ಯಂಕಗಳ ಏರಿಕೆ ಮೇಲೆ ಪರಿಣಾಮ ಬೀರಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 599 ಅಂಶ (ಶೇ 0.83) ಏರಿಕೆ ಕಂಡು 73,088 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ಆರಂಭಿಕ ವಹಿವಾಟಿನಲ್ಲಿ ಕುಸಿತ ಕಂಡಿದ್ದ ಸೆನ್ಸೆಕ್ಸ್, ಬಳಿಕ ಏರಿಕೆ ಕಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 151 ಅಂಶ ಏರಿಕೆ (ಶೇ 0.69ರಷ್ಟು) ಕಂಡಿದ್ದು, 22,147 ಅಂಶಗಳಲ್ಲಿ ಸ್ಥಿರಗೊಂಡಿತು.

ಬಜಾಜ್ ಫೈನಾನ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಮಾರುತಿ, ವಿಪ್ರೊ, ಭಾರ್ತಿ ಏರ್‌ಟೆಲ್, ಬಜಾಜ್ ಫಿನ್‌ಸರ್ವ್, ಐಸಿಐಸಿಐ ಬ್ಯಾಂಕ್ ಮತ್ತು ಐಟಿಸಿ ಷೇರುಗಳು ಗಳಿಕೆ ಕಂಡಿವೆ.

ನೆಸ್ಲೆ ಇಂಡಿಯಾ, ಎಚ್‌ಸಿಎಲ್ ಟೆಕ್ನಾಲಜೀಸ್, ಎಲ್ ಆ್ಯಂಡ್ ಟಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಟಾಟಾ ಮೋಟರ್ಸ್ ಷೇರುಗಳು ಕುಸಿತ ಕಂಡಿವೆ. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆ ಕೂಡ ನಕಾರಾತ್ಮಕ ವಹಿವಾಟಿನಲ್ಲಿ ಮುಕ್ತಾಯಗೊಂಡಿದೆ.

ಇನ್ಫೊಸಿಸ್ ಷೇರು ಕುಸಿತ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯ ಷೇರಿನ ಮೌಲ್ಯ ಶೇ 1ರಷ್ಟು ಕುಸಿದಿದೆ.

2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಇನ್ಫೊಸಿಸ್‌ನ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ. ಆದರೆ, 2024–25ನೇ ಆರ್ಥಿಕ ವರ್ಷದ ಮಾರುಕಟ್ಟೆ ನಿರೀಕ್ಷೆಗೆ ತಕ್ಕಂತೆ ಕಂಪನಿಯ ಲಾಭ ದಾಖಲಿಸಿಲ್ಲ. ಹಾಗಾಗಿ, ಷೇರಿನ ಮೌಲ್ಯ ಕುಸಿದಿದೆ.

ಬಿಎಸ್‌ಇಯಲ್ಲಿ ಇಂಟ್ರಾ ಡೇ ಟ್ರೇಡಿಂಗ್‌ನಲ್ಲಿ ಷೇರಿನ ಮೌಲ್ಯ ಶೇ 2.87ರಷ್ಟು ಕುಸಿದು, ಪ್ರತಿ ಷೇರಿನ ಬೆಲೆ ₹1,379.70ಕ್ಕೆ ತಲುಪಿತ್ತು. ಅಂತಿಮವಾಗಿ ಶೇ 0.63ರಷ್ಟು ಇಳಿಕೆ ಕಂಡು, ಪ್ರತಿ ಷೇರಿನ ಬೆಲೆ ₹1,411.60ಕ್ಕೆ ಮುಟ್ಟಿದೆ. ಎನ್‌ಎಸ್‌ಇಯಲ್ಲಿ ಶೇ 2.85ರಷ್ಟು ಕುಸಿತ ಕಂಡು ಪ್ರತಿ ಷೇರಿನ ಬೆಲೆ ₹1,378.75ಕ್ಕೆ ತಲುಪಿತ್ತು. ಅಂತಿಮವಾಗಿ ಶೇ 0.51ರಷ್ಟು ಇಳಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹1,411.95 ಆಗಿದೆ.

ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹3,655 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹5.85 ಲಕ್ಷ ಕೋಟಿ ಆಗಿದೆ.

ನೆಸ್ಲೆಗೆ ₹10 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ಶುಕ್ರವಾರವೂ ನೆಸ್ಲೆ ಇಂಡಿಯಾ ಕಂಪನಿಯ ಷೇರಿನ ಮೌಲ್ಯವು ಶೇ 1ರಷ್ಟು ಕುಸಿದಿದೆ. ಎರಡು ದಿನಗಳಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯವು ₹10,610 ಕೋಟಿ ಕರಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 1.04ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹2,375.75 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 1.32ರಷ್ಟು ಇಳಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹2,430 ಆಗಿದೆ.

ನೆಸ್ಲೆ ಇಂಡಿಯಾ ಕಂಪನಿ ವಿರುದ್ಧ ಕೇಳಿಬಂದಿರುವ ಆರೋಪದ ಬಗ್ಗೆ ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕೆ (ಎಫ್‌ಎಸ್‌ಎಸ್‌ಎಐ), ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಸೂಚಿಸಿದೆ.

ಈ ವಿಷಯವು ಗಂಭೀರವಾಗಿದ್ದು, ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕೂಡ ಪ್ರಾಧಿಕಾರಕ್ಕೆ ಸೂಚಿಸಿದೆ.

ವಿಪ್ರೊ ಲಾಭ: ಶೇ 7.8ರಷ್ಟು ಇಳಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ವಿಪ್ರೊ ಕಂಪನಿಯ ನಿವ್ವಳ ಲಾಭವು ಶೇ 7.8ರಷ್ಟು ಇಳಿಕೆಯಾಗಿದೆ.

2022–23ನೇ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,074 ಕೋಟಿ ಲಾಭ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹2,835 ಕೋಟಿ ಲಾಭ ಗಳಿಸಿದೆ. ಇದೇ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ 4.2ರಷ್ಟು ಇಳಿಕೆಯಾಗಿದೆ. ವರಮಾನ ಒಟ್ಟು ₹22,208 ಕೋಟಿ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯ ವರಮಾನವು ₹89,760 ಕೋಟಿಯಾಗಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 0.8ರಷ್ಟು ಕಡಿಮೆಯಾಗಿದೆ. ನಿವ್ವಳ ಲಾಭದಲ್ಲಿ ಶೇ 2.6ರಷ್ಟು ಇಳಿದಿದ್ದು, ₹11,045 ಕೋಟಿ ಆಗಿದೆ ಎಂದು ಹೇಳಿದೆ.

ಒಟ್ಟು ಸಿಬ್ಬಂದಿ ಸಂಖ್ಯೆಯು ಶೇ 9.1ರಷ್ಟು ಇಳಿಕೆ ಕಂಡಿದೆ. ಮಾರ್ಚ್ ಅಂತ್ಯಕ್ಕೆ ಕಂಪನಿಯಲ್ಲಿ ಒಟ್ಟು 2.34 ಲಕ್ಷ ಉದ್ಯೋಗಿಗಳು ಇದ್ದಾರೆ.

ಸಿಇಒ ಆಗಿದ್ದ ಥಿಯರಿ ಡೆಲಾಪೋರ್ಟ್ ಇತ್ತೀಚೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ಹೊಸ ಸಿಇಒ ಆಗಿ ಶ್ರೀನಿವಾಸ್ ಪಲ್ಲಿಯಾ ನೇಮಕಗೊಂಡಿದ್ದಾರೆ. ಈ ನೇಮಕವು ಕಂಪನಿಯ ಪ್ರದರ್ಶನ ಮತ್ತು ಕಾರ್ಯಾಚರಣೆಯ ಮೇಲೆ ಪ್ರಭಾವ ಬೀರಿದೆ. ಹಾಗಾಗಿ, ಲಾಭ, ವರಮಾನದಲ್ಲಿ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಕಳೆದ ಹಣಕಾಸು ವರ್ಷವು ಇಡೀ ಐ.ಟಿ ಉದ್ಯಮಕ್ಕೆ ದೊಡ್ಡ ಸವಾಲುಗಳನ್ನು ಒಡ್ಡಿದೆ. ಇದು ವಿಪ್ರೊದ ಕಾರ್ಯಕ್ಷಮತೆ ಮೇಲೂ ಪರಿಣಾಮ ಬೀರಿದೆ. ಆರ್ಥಿಕ ಪರಿಸ್ಥಿತಿಯು ಇನ್ನೂ ಅನಿಶ್ಚಿತತೆಯಿಂದ ಕೂಡಿದೆ. ಹಾಗಾಗಿ, ಅಲ್ಪಾವಧಿಯಲ್ಲಿ ಹೆಚ್ಚಿನ ಸವಾಲುಗಳು ಎದುರಾಗಬಹುದು. ಇವುಗಳನ್ನು ಸಮರ್ಥವಾಗಿ ಎದುರಿಸುವ ಬಗ್ಗೆ ನಾನು ಆಶಾವಾದಿಯಾಗಿದ್ದೇನೆ' ಎಂದು ಪಲ್ಲಿಯಾ ಹೇಳಿದ್ದಾರೆ.

ಸುದ್ದಿ 2 ನಿಮಿಷ

ನಾರಾಯಣಮೂರ್ತಿ ಮೊಮ್ಮಗನಿಗೆ ₹4.20 ಕೋಟಿ ಲಾಭಾಂಶ

ನವದೆಹಲಿ (ಪಿಟಿಐ): ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರ ಐದು ತಿಂಗಳ ಮೊಮ್ಮಗ ಏಕಾಗ್ರ ರೋಹನ್ ಮೂರ್ತಿಗೆ ₹4.20 ಕೋಟಿ ಲಾಭಾಂಶ ಲಭಿಸಿದೆ.

ಏಕಾಗ್ರ, ನಾರಾಯಣಮೂರ್ತಿ ಅವರ ಪುತ್ರ ರೋಹನ್ ಮೂರ್ತಿ ಹಾಗೂ ಅಪರ್ಣಾ ಕೃಷ್ಣನ್ ಅವರ ಪುತ್ರ.

ಕಳೆದ ಮಾರ್ಚ್‌ನಲ್ಲಿ ನಾರಾಯಣಮೂರ್ತಿ ಅವರು ತಮ್ಮ ಮೊಮ್ಮಗನಿಗೆ ₹240 ಕೋಟಿ ಮೌಲ್ಯದ 15 ಲಕ್ಷ ಷೇರುಗಳನ್ನು ಉಡುಗೊರೆಯಾಗಿ ನೀಡಿದ್ದರು. 2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದ ಕಂಪನಿಯ ಫಲಿತಾಂಶ ಪ್ರಕಟವಾಗಿದ್ದು, ಪ್ರತಿ ಷೇರಿಗೆ ₹28 ಲಾಭಾಂಶ ಘೋಷಿಸಲಾಗಿದೆ.

ಹಾಗಾಗಿ, ಏಕಾಗ್ರನಿಗೆ ಇಷ್ಟು ಮೊತ್ತದ ಲಾಭಾಂಶ ಸಿಕ್ಕಿದೆ. ದೇಶದ ಎರಡನೇ ಅತಿದೊಡ್ಡ ಐ.ಟಿ ಕಂಪನಿಯಾದ ಇನ್ಫೊಸಿಸ್‌ನಲ್ಲಿ ಷೇರು ಹೊಂದುವ ಮೂಲಕ ಈ ಮಗು ಕೋಟ್ಯಧಿಪತಿಗಳ ಸಾಲಿಗೆ ಸೇರ್ಪಡೆಯಾಗಿದೆ.

ಪ್ರತಿ ಷೇರಿಗೆ ₹20 ಅಂತಿಮ ಲಾಭಾಂಶ ಹಾಗೂ ಹೆಚ್ಚುವರಿಯಾಗಿ ₹8 ವಿಶೇಷ ಲಾಭಾಂಶ ನೀಡಲು ನಡೆದ ಆಡಳಿತ ಮಂಡಳಿ ಸಭೆಯು ನಿರ್ಧರಿಸಿದೆ.

ಮೇ 31ರಂದು ನಡೆಯುವ ಕಂಪನಿಯ ವಾರ್ಷಿಕ ಸಭೆಯಲ್ಲಿ ಲಾಭಾಂಶ ವಿತರಣೆಗೆ ಅನುಮೋದನೆ ಪಡೆಯಲಿದ್ದು, ಜುಲೈ 1ರಂದು ವಿತರಿಸಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ನಾರಾಯಣಮೂರ್ತಿ ಹಾಗೂ ಸುಧಾ ಮೂರ್ತಿ ಅವರಿಗೆ ಏಕಾಗ್ರ ಮೂರನೇ ಮೊಮ್ಮಗು. ಅಕ್ಷತಾ ಮೂರ್ತಿ ಹಾಗೂ ರಿಷಿ ಸುನಕ್ ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಎಲ್‌ಐಸಿ: ₹36 ಸಾವಿರ ಕೋಟಿ ಪ್ರೀಮಿಯಂ ಸಂಗ್ರಹ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಮಾರ್ಚ್ ತಿಂಗಳಿನಲ್ಲಿ ₹36,300 ಕೋಟಿಯಷ್ಟು ಪ್ರೀಮಿಯಂ ಸಂಗ್ರಹಿಸಿದೆ.

ಹಿಂದಿನ ವರ್ಷದ ಮಾರ್ಚ್‌ನಲ್ಲಿ ₹28,716 ಕೋಟಿ ಪ್ರೀಮಿಯಂ ಸಂಗ್ರಹಿಸಿತ್ತು. ಇದಕ್ಕೆ ಹೋಲಿಸಿದರೆ ಪ್ರೀಮಿಯಂ ಸಂಗ್ರಹದಲ್ಲಿ ಶೇ 26.41ರಷ್ಟು ಏರಿಕೆಯಾಗಿದೆ.

ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಕಂಪನಿಯು ಶೇ 24.76ರಷ್ಟು ಹಾಗೂ ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿಯ ಪ್ರೀಮಿಯಂ ಸಂಗ್ರಹವು ಶೇ 12.58ರಷ್ಟು ಏರಿಕೆಯಾಗಿದೆ.

ಆದರೆ, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ಪ್ರೀಮಿಯಂ ಸಂಗ್ರಹವು ಶೇ 20.05ರಷ್ಟು ಇಳಿಕೆಯಾಗಿದೆ. ಮಾರ್ಚ್ ತಿಂಗಳಿನಲ್ಲಿ ಸಂಗ್ರಹವಾಗಿರುವ ಪ್ರೀಮಿಯಂನಲ್ಲಿ ಎಲ್‌ಐಸಿ ಪಾಲು ಶೇ 58.87ರಷ್ಟಿದೆ ಎಂದು ಜೀವ ವಿಮಾ ಪರಿಷತ್‌ನ ಅಂಕಿ–ಅಂಶಗಳು ತಿಳಿಸಿವೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ ಸುಧಾರಣೆ ಭಾರತದ ನಿಲುವಿಗೆ ಅಮೆರಿಕ ಸಹಮತ

ವಾಷಿಂಗ್ಟನ್ (ಪಿಟಿಐ): 'ವಿಶ್ವಸಂಸ್ಥೆ ಭದ್ರತಾ ಮಂಡಳಿಯ (ಯುಎನ್‌ಎಸ್‌ಸಿ) ಚಿಂತನೆ 70 ವರ್ಷ ಹಳೆಯದಾಗಿದ್ದು, ಸದ್ಯದ ವಸ್ತುಸ್ಥಿತಿ ಬಿಂಬಿಸುವುದಿಲ್ಲ ಎಂಬ ಭಾರತದ ನಿಲುವನ್ನು ಅಮೆರಿಕ ಬೆಂಬಲಿಸಿದೆ.

'ಜಿ–4 ಸದಸ್ಯ ರಾಷ್ಟ್ರಗಳು ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ಪಡೆಯಬೇಕು ಎಂಬ ನಿಲುವಿಗೆ ಜೋ ಬೈಡನ್ ಆಡಳಿತ ಬೆಂಬಲಿಸಲಿದೆ' ಎಂದು ಅಮೆರಿಕದ ಹಿರಿಯ ರಾಯಭಾರಿ ಹೇಳಿದ್ದಾರೆ.

ಸದ್ಯ ಟೋಕಿಯೊ ಪ್ರವಾಸದಲ್ಲಿರುವ, ವಿಶ್ವಸಂಸ್ಥೆಯಲ್ಲಿನ ಅಮೆರಿಕದ ರಾಯಭಾರಿ ಲಿಂಡಾ ಥಾಮಸ್ ಗ್ರೀನ್‌ಫೀಲ್ಡ್ ಅವರು, 'ಭದ್ರತಾ ಮಂಡಳಿ ಸುಧಾರಣೆಗೆ ಸದ್ಯ ಚೀನಾ, ರಷ್ಯಾ ವಿರೋಧಿಸುತ್ತಿವೆ' ಎಂದರು.

'ಈ ಹಿಂದೆ ಅಮೆರಿಕ, ಚೀನಾ, ರಷ್ಯಾ ಭದ್ರತಾ ಮಂಡಳಿಯಲ್ಲಿಯಾವುದೇ ಬದಲಾವಣೆ ಬೇಡ ಎಂಬ ನಿಲುವು ತಳೆದಿದ್ದವು. ಇದರಿಂದ, 2021ರಲ್ಲಿ ಅಮೆರಿಕ ಹಿಂದೆ ಸರಿಯಿತು' ಎಂದು ಲಿಂಡಾ ಹೇಳಿದರು.

ಜಿ4 ಶೃಂಗದ ಸದಸ್ಯ ರಾಷ್ಟ್ರಗಳಾದ ಜಪಾನ್, ಜರ್ಮನಿ, ಭಾರತ, ಬ್ರೆಜಿಲ್ ಜೊತೆಗಿನ ಚರ್ಚೆಯಲ್ಲೂ ಇವು ಯುಎನ್‌ಎಸ್‌ಸಿ ಶಾಶ್ವತ ಸದಸ್ಯರಾಗಬೇಕು ಎಂದು ಅಮೆರಿಕ ನಿಲುವು ಸ್ಪಷ್ಟಪಡಿಸಿದೆ ಎಂದರು.

ಪಾಕಿಸ್ತಾನ: ಉಗ್ರರ ದಾಳಿಗೆ 7 ಮಂದಿ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಸರ್ಕಾರಿ ವಾಹನದ ಮೇಲೆ ಗುರುವಾರ ಉಗ್ರರು ದಾಳಿ ನಡೆಸಿದ ಪರಿಣಾಮ ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿದೆ. ಮೃತರಲ್ಲಿ ನಾಲ್ಕು ವರ್ಷದ ಬಾಲಕಿ, ಒಬ್ಬ ಪುರುಷ ಹಾಗೂ ಐವರು ಅಧಿಕಾರಿಗಳು ಇದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಕಸ್ಟಮ್ಸ್ ಇಂಟೆಲಿಜೆನ್ಸ್‌ನ ಅಧಿಕಾರಿಗಳು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯ ಕ್ವೆಟ್ಟಾ ರಸ್ತೆಯಲ್ಲಿ ಕರ್ತವ್ಯದಲ್ಲಿದ್ದಾಗ ಅಪರಿಚಿತ ಬಂದೂಕುಧಾರಿಗಳು ಅವರ ವಾಹನದ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ತೃತೀಯ ಪುಣ್ಯ ಸ್ಮರಣೆ

ಶ್ರೀ ಕೆ. ಮುನಿಯಪ್ಪ
(ಮಾರೇನಹಳ್ಳಿ ಪಾಳ್ಯ, ಜೆ.ಪಿ.ನಗರ)
(10-03-1942) (20-04-2021)
ಈ ದಿನದಂದು ನಮ್ಮನ್ನು ಅಗಲಿ ಮೂರು ವರ್ಷವಾಯಿತು.
ಈ ಸಂದರ್ಭದಲ್ಲಿ ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲಸಿದ್ದೀರಿ.
ನೀವೆಂದಿಗೂ ನಮ್ಮ ಮನದಲ್ಲಿ ಚಿರಸ್ಥಾಯಿಯಾಗಿರುವಿರಿ.
AMEYA Sriameya Projects India Pvt. Ltd.
ದುಃಖತಪ್ತರು ಕುಟುಂಬವರ್ಗದವರು
ಶ್ರೀ ಆಮೆಯ ಪ್ರಾಜೆಕ್ಟ್ಸ್ ಪ್ರೈ.ಲಿ.
ಜೆ.ಪಿ.ನಗರ 2ನೇ ಹಂತ, ಬೆಂಗಳೂರು-560 078

7ನೇ ವರ್ಷದ ಪುಣ್ಯಸ್ಮರಣೆ

ಶ್ರೀಯುತ ಉಮೇಶ್ ರವರು
ಅಡುಗೆ ಕಂಟ್ರಾಕ್ಟರ್, ಅಡೇಪೇಟೆ, ನೆಲಮಂಗಲ
ನಿಧನ 20-04-2017
ನೀವು ನಮ್ಮನ್ನು ಅಗಲಿ ಇಂದಿಗೆ 7 ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ.
ತಮ್ಮ ಸ್ಮರಣೆಯಲ್ಲಿರುವ
ಕುಟುಂಬದವರು, ಆತ್ಮೀಯ ಗೆಳೆಯರು ಹಾಗೂ ಬಂಧು ಬಾಂಧವರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ವೇತನ ತಿಂಗಳಿಗೆ 20000/-ರಿಂದ 25000/- ವರೆಗೆ. ಮಂಡಿ ನೋವು ಬೆನ್ನು ನೋವು ಕೀಲು ನೋವು. ಪಾರ್ಶ್ವವಾಯು ಪೀಡಿತರಿಗೆ ದೇಶಿಯ ಚಿಕಿತ್ಸೆ ಉಚಿತವಾಗಿ ಕೊಡಲಾಗುವುದು. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್ : 7349494852

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ,ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

ರಿಯಲ್ ಎಸ್ಟೇಟ್ ಸೆಲ್ಲಿಂಗ್

Basavanagudi

3 BHK 2500 sft vastu compliant 24 hours water power security 2 parking contact 9902689470

Sites

Kanakpura

LAND FOR SALE, 6534 sq.ft. W/Face, Kanakapura Nagarasabhe, (Budiguppe), Near Ricemill Bus Stop. 7483048123, 8105999887

ಪ್ರವಾಸ

Travel

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋ ದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿ ಪುರ,ವಾಘಬಾರ್ಡರ್`,ಇತ್ಯಾದಿ. ಏಷ್ಯನ್`ಟ್ರಾವಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಏರ್‌ಟ್ಯಾಕ್ಸಿ ಸೇವೆಗೆ ಆರಂಭಿಸಲು ಸಿದ್ಧತೆ

ನವದೆಹಲಿ (ಪಿಟಿಐ): ದೇಶದಲ್ಲಿ 2026ರ ವೇಳೆಗೆ ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಸೇವೆ ಆರಂಭಿಸಲು ಇಂಡಿಗೊ ಕಂಪನಿಯ ಮಾತೃಸಂಸ್ಥೆಯಾದ ಇಂಟರ್‌ಗ್ಲೋಬಲ್ ಎಂಟರ್‌ಪ್ರೈಸಸ್ ಮತ್ತು ಅಮೆರಿಕದ ಆರ್ಚರ್ ಏವಿಯೇಷನ್ ಜಂಟಿಯಾಗಿ ಸಿದ್ಧತೆ ನಡೆಸಿವೆ.

ಪ್ರಥಮ ಬಾರಿಗೆ ನವದೆಹಲಿಯ ಕನೌಟ್ ಸ್ಥಳದಿಂದ ಹರಿಯಾಣದ ಗುರುಗ್ರಾಮಕ್ಕೆ ಈ ಸೇವೆ ಆರಂಭವಾಗಲಿದೆ. ಏಳು ನಿಮಿಷಗಳಲ್ಲಿ ಪ್ರಯಾಣಿಕರನ್ನು ತಲುಪಿಸಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ನವದೆಹಲಿ ಬಳಿಕ ಮುಂಬೈ ಮತ್ತು ಬೆಂಗಳೂರಿನಲ್ಲಿಯೂ ಈ ಸೇವೆ ವಿಸ್ತರಿಸಲು ಈ ಕಂಪನಿಗಳು ನಿರ್ಧರಿಸಿವೆ.

'ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಸೇವೆ ಕುರಿತು ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ಜೊತೆಗೆ ಮಾತುಕತೆ ನಡೆಯುತ್ತಿದೆ. ಏರ್‌ಕ್ರಾಫ್ಟ್‌ಗೆ ಮುಂದಿನ ವರ್ಷ ಅನುಮತಿ ಸಿಗುವ ನಿರೀಕ್ಷೆಯಿದೆ. ಇದಾದ ಬಳಿಕ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯಕ್ಕೆ (ಡಿಜಿಸಿಎ) ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗುವುದು' ಎಂದು ಆರ್ಚರ್ ಏವಿಯೇಷನ್ ಸಂಸ್ಥಾಪಕ ಮತ್ತು ಸಿಇಒ ಆಡಮ್ ಗೋಲ್ಡ್‌ಸ್ಟೈನ್ ಅವರು, ಶುಕ್ರವಾರ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಏರ್ ಟ್ಯಾಕ್ಸಿಯಲ್ಲಿ ಕನೌಟ್‌ನಿಂದ ಗುರುಗ್ರಾಮಕ್ಕೆ ತಲುಪಲು ₹2 ಸಾವಿರದಿಂದ ₹3 ಸಾವಿರ ಪ್ರಯಾಣ ವೆಚ್ಚವಾಗಲಿದೆ. ಈ ಎರಡು ಸ್ಥಳಗಳ ನಡುವೆ 27 ಕಿ.ಮೀ. ದೂರವಿದೆ. ರಸ್ತೆ ಮಾರ್ಗದಲ್ಲಿ ಕಾರಿನಲ್ಲಿ ಕ್ರಮಿಸಲು 90 ನಿಮಿಷ ಬೇಕಿದ್ದು, ₹1,500 ವೆಚ್ಚವಾಗಲಿದೆ ಎಂದು ಹೇಳಿದ್ದಾರೆ. ಐದು ಆಸನಗಳ ಸಾಮರ್ಥ್ಯದ 200 ಮಿಡ್‌ನೈಟ್ ಏರ್‌ಕ್ರಾಫ್ಟ್‌ಗಳನ್ನು ಈ ಮಾರ್ಗದಲ್ಲಿ ಕಾರ್ಯಾಚರಣೆಗೆ ಇಳಿಸಲು ನಿರ್ಧರಿಸಲಾಗಿದೆ. ಪೈಲಟ್ ಸೇರಿ ನಾಲ್ವರು ಪ್ರಯಾಣಿಸಲು ಅವಕಾಶ ಸಿಗಲಿದೆ ಎಂದು ತಿಳಿಸಿದ್ದಾರೆ.

ಬ್ರಿಟನ್: ನೀರಲ್ಲಿ ಮುಳುಗಿ ಇಬ್ಬರು ಭಾರತೀಯರ ಸಾವು

ಲಂಡನ್ (ಪಿಟಿಐ): ಬ್ರಿಟನ್‌ನ ವಿಶ್ವವಿದ್ಯಾಲಯವೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಭಾರತ ಮೂಲದ ಇಬ್ಬರು ವಿದ್ಯಾರ್ಥಿಗಳು ಸ್ಕಾಟ್ಲೆಂಡ್‌ನ ಜಲಪಾತದಲ್ಲಿ ಮುಳುಗಿ ಸತ್ತಿದ್ದಾರೆ. ಮೃತ ವಿದ್ಯಾರ್ಥಿಗಳು ಆಂಧ್ರಪ್ರದೇಶದವರಾಗಿದ್ದು, 22 ಮತ್ತು 26 ವರ್ಷ ವಯಸ್ಸಿನವರಾಗಿದ್ದಾರೆ.

ಸ್ನೇಹಿತರೆಲ್ಲ ಪರ್ಥ್‌ಶೈರ್‌ನ ಅಥೋಲ್ ಬಳಿಯ ಜಲಪಾತಕ್ಕೆ ವಿಹಾರಕ್ಕೆ ತೆರಳಿದ್ದಾಗ ಬುಧವಾರ ಸಂಜೆ ಘಟನೆ ಸಂಭವಿಸಿದೆ. ಇಬ್ಬರೂ ಯುವಕರು ನೀರಿನಲ್ಲಿ ಮುಳುಗುತ್ತಿದ್ದಂತೆ ಜೊತೆಗಿದ್ದ ಸ್ನೇಹಿತರು ಸ್ಥಳೀಯ ರಕ್ಷಣಾ ಅಧಿಕಾರಿಗಳ ಬಳಿ ಸಹಾಯ ಕೋರಿದ್ದಾರೆ. ಕೂಡಲೇ ಅಗ್ನಿಶಾಮಕದಳ ಮತ್ತು ರಕ್ಷಣಾ ಸೇವೆ ತಂಡಗಳು ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿವೆ. ಕಾರ್ಯಾಚರಣೆ ಬಳಿಕ ಯುವಕರ ಮೃತದೇಹಗಳನ್ನು ಹೊರತೆಗೆಯಲಾಗಿದೆ.

'ಅರಬ್ ಸಂಯುಕ್ತ ಸಂಸ್ಥಾನ ಭೇಟಿ ಮುಂದೂಡಿ'

ಅಬುದಾಬಿ (ಪಿಟಿಐ): ಭಾರಿ ಪ್ರಮಾಣದಲ್ಲಿ ಸುರಿದ ಮಳೆಯಿಂದಾಗಿ ತತ್ತರಿಸಿರುವ ಅರಬ್ ಸಂಯುಕ್ತ ಸಂಸ್ಥಾನವು ಸಾಮಾನ್ಯ ಸ್ಥಿತಿಗೆ ಮರಳುವವರೆಗೆ ಅನಗತ್ಯ ಪ್ರವಾಸ ಕೈಗೊಳ್ಳಬಾರದು ಎಂದು ಭಾರತದ ಪ್ರಜೆಗಳಿಗೆ ಇಲ್ಲಿನ ಭಾರತೀಯ ರಾಯಭಾರ ಕಚೇರಿ ಸೂಚಿಸಿದೆ.

ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರತೀಯ ಪ್ರಜೆಗಳ ನೆರವಿಗಾಗಿ ದುಬೈನಲ್ಲಿರುವ ಭಾರತೀಯ ಪ್ರಧಾನ ಕಾನ್ಸುಲೇಟ್ ಏಪ್ರಿಲ್ 17ರಿಂದಲೇ ತುರ್ತು ಸಹಾಯವಾಣಿ ಸಂಖ್ಯೆಯನ್ನು ಆರಂಭಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಾರ ಪೂರ್ತಿ ಸುರಿದ ದಾಖಲೆ ಪ್ರಮಾಣದ ಮಳೆಯಿಂದಾಗಿ ದುಬೈ ಮತ್ತು ಸುತ್ತಮುತ್ತಲಿನ ಪ್ರದೇಶಗಳು ನೆರೆಪೀಡಿತವಾಗಿದ್ದು, ಈ ಪರಿಸ್ಥಿತಿಯನ್ನು ಸುಧಾರಿಸಿಕೊಂಡು, ಹೊರಬರಲು ಅರಬ್ ಸಂಯುಕ್ತ ಸಂಸ್ಥಾನವು ಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ ದುಬೈನಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವವರೆಗೆ ಭಾರತೀಯರು ತಮ್ಮ ಅನಗತ್ಯ ಪ್ರವಾಸವನ್ನು ಮುಂದೂಡುವಂತೆ ಸಲಹೆ ನೀಡಲಾಗಿದೆ.

ದೇಶದಲ್ಲಿ ಎಲ್ಲ ಚಟುವಟಿಕೆಗಳು ಸಾಮಾನ್ಯ ಸ್ಥಿತಿಗೆ ಮರಳುವಂತೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ದಿನದ 24 ಗಂಟೆಯೂ ಕೆಲಸ ಮಾಡುತ್ತಿದ್ದಾರೆ. ವಿಮಾನಗಳು ಕಾರ್ಯಾಚರಣೆ ನಡೆಸುವ ದಿನಾಂಕ ಮತ್ತು ಸಮಯ ನಿಗದಿಯಾದ ಬಳಿಕವಷ್ಟೇ ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಬರುವಂತೆ ವಿಮಾನ ನಿಲ್ದಾಣದ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಮಳೆಯ ಪರಿಣಾಮ ವಿಶ್ವದಲ್ಲೇ ಬಿಡುವಿಲ್ಲದ ವಿಮಾನ ನಿಲ್ದಾಣ ಎಂಬ ಖ್ಯಾತಿಗೆ ಪಾತ್ರವಾಗಿದ್ದ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೆಲವೇ ಕೆಲವು ವಿಮಾನಗಳು ಸಂಚಾರ ಪ್ರಾರಂಭಿಸಿವೆ. ಮುಂದಿನ 24 ಗಂಟೆಯಲ್ಲಿ ವಿಮಾನಗಳ ಹಾರಾಟ ಸಹಜ ಸ್ಥಿತಿಗೆ ಮರಳಬಹುದು ಎಂದು ನಿರೀಕ್ಷಿಸಲಾಗಿದೆ.

ಇರಾನ್‌ನ ಇಸ್ಫಹಾನ್ ನಗರದ ಸೇನಾ ನೆಲೆ ಗುರಿಯಾಗಿಸಿ ದಾಳಿ

ಡ್ರೋನ್ ದಾಳಿ–ಇಸ್ರೇಲ್‌ನಿಂದ ಪ್ರತಿರೋಧ?

ವಾಷಿಂಗ್ಟನ್/ದುಬೈ (ರಾಯಿಟರ್ಸ್/ಎ.ಪಿ): ಇರಾನ್‌ನ ಇಸ್ಫಹಾನ್ ನಗರದಲ್ಲಿರುವ ಸೇನಾ ನೆಲೆಯನ್ನು ಗುರಿಯಾಗಿಸಿ ಇಸ್ರೇಲ್ ಶುಕ್ರವಾರ ಬೆಳಗಿನ ಜಾವ ಡ್ರೋನ್ ದಾಳಿ ನಡೆಸಿದೆ.

ಈ ಬೆಳವಣಿಗೆ ಕುರಿತು ಮಾಹಿತಿ ಇರುವ ಮೂವರು ಇದನ್ನು ದೃಢಪಡಿಸಿದ್ದಾರೆ ಎಂದು ಇರಾನ್‌ನ ಅಧಿಕೃತ ಮಾಧ್ಯಮ ವರದಿ ಮಾಡಿದೆ. ರಕ್ಷಣಾತ್ಮಕವಾಗಿ ಸೇನೆಯು ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ಹೇಳಿದೆ.

ಈ ದಾಳಿ ಪ್ರಕ್ರಿಯೆಯಲ್ಲಿ ಅಮೆರಿಕದ ಸೇನೆ ನೇರವಾಗಿ ಭಾಗಿಯಾಗಿಲ್ಲ. ಆದರೆ, ದಾಳಿಗೂ ಮುನ್ನ ಇಸ್ರೇಲ್ ಈ ಕುರಿತು ಅಮೆರಿಕಕ್ಕೆ ಮಾಹಿತಿ ನೀಡಿತ್ತು ಎಂದು ಮೂಲಗಳು ದೃಢಪಡಿಸಿವೆ.

ಇರಾನ್‌ನ ಫಾರ್ಸ್ ಸುದ್ದಿ ಸಂಸ್ಥೆಯ ಪ್ರಕಾರ, ನಗರದಲ್ಲಿರುವ ಸೇನಾ ನೆಲೆಯ ಸಮೀಪ ಮೂರು ಸ್ಫೋಟ ಸಂಭವಿಸಿವೆ. 'ಮಧ್ಯರಾತ್ರಿ ಬಳಿಕ ಮೂರು ಡ್ರೋನ್‌ಗಳು ವಾಯುಗಡಿಯಲ್ಲಿ ಕಂಡುಬಂದವು.

'ವಾಯುದಾಳಿ ರಕ್ಷಣಾ ವ್ಯವಸ್ಥೆಯು ಪ್ರತಿದಾಳಿ ನಡೆಸಿದ್ದು, ಅವುಗಳನ್ನು ಆಗಸದಲ್ಲೇ ಹೊಡೆದು ಉರುಳಿಸಲಾಯಿತು. ಈಗ ಸಹಜ ಪರಿಸ್ಥಿತಿ ನೆಲೆಸಿದೆ' ಎಂದು ಇರಾನ್‌ನ ಅಧಿಕೃತ ಟಿ.ವಿ ವರದಿ ಮಾಡಿದೆ.

'ಕ್ಷಿಪಣಿ ದಾಳಿ ನಡೆದಿಲ್ಲ. ಇರಾನ್‌ನ ವಾಯುದಾಳಿ ರಕ್ಷಣಾ ವ್ಯವಸ್ಥೆ ಚಾಲನೆಗೊಳಿಸಿದ್ದರ ಪರಿಣಾಮ ಸ್ಫೋಟದ ಶಬ್ದ ಕೇಳಿಸಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಸ್ಫೋಟದ ಶಬ್ದ ಕೇಳಿಬಂದಿತು ಎನ್ನಲಾದ ಇರಾನ್ ಕೇಂದ್ರ ಭಾಗದ ಇಸ್ಫಹಾನ್ ನಗರದಲ್ಲಿನ ನೋಟ– ಇರಾನ್‌ನ ಅಧಿಕೃತ ಸುದ್ದಿ ವಾಹಿನಿ ಐಆರ್‌ಐಬಿಯಲ್ಲಿ ಕಂಡಿದ್ದು ಹೀಗೆ –ಎಎಫ್‌ಪಿ ಚಿತ್ರ

ಇರಾನ್ ಕಳೆದ ವಾರಾಂತ್ಯದಲ್ಲಿ ಇಸ್ರೇಲ್ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿತ್ತು. ಇದಕ್ಕೆ ಪ್ರತಿರೋಧವಾಗಿ ದಾಳಿ ನಡೆಸಲಾಗುವುದು ಎಂದು ಇಸ್ರೇಲ್ ಪ್ರತಿಕ್ರಿಯಿಸಿತ್ತು.

ಇಸ್ರೇಲ್‌ನಿಂದ ದಾಳಿ ನಡೆದಿದೆ ಎಂಬ ಕುರಿತಂತೆ ಇರಾನ್‌ನ ಯಾವುದೇ ಅಧಿಕಾರಿ ಪ್ರತಿಕ್ರಿಯಿಸಿಲ್ಲ. ಇಸ್ರೇಲ್ ಸೇನೆ ಕೂಡ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಹಮಾಸ್ ವಿರುದ್ಧದ ಯುದ್ಧದ ನಡುವೆಯೂ ಈ ಬೆಳವಣಿಗೆಯು ಬಿಗುವಿನ ಸ್ಥಿತಿಯನ್ನು ನಿರ್ಮಾಣ ಮಾಡಿದೆ.

ಒಟ್ಟು ಬೆಳವಣಿಗೆ ಕುರಿತು ಅಮೆರಿಕ ಅಧಿಕೃತವಾಗಿ ಪ್ರತಿಕ್ರಿಯಿಸಿಲ್ಲ. ಆದರೆ, 'ದ ನ್ಯೂಯಾರ್ಕ್ ಟೈಮ್ಸ್'ನಲ್ಲಿ ಈ ದಾಳಿಯನ್ನು ಇಸ್ರೇಲ್ ನಡೆಸಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರ ಹೇಳಿಕೆ ಆಧರಿಸಿ ವರದಿ ಮಾಡಲಾಗಿದೆ.

ಕೇಜ್ರಿವಾಲ್ ಆಹಾರಕ್ರಮದ ಬಗ್ಗೆ ಇ.ಡಿ ಸುಳ್ಳಾಡಿದೆ; ಇದು ಕ್ಷುಲ್ಲಕ ರಾಜಕೀಯ – ನ್ಯಾಯಾಲಯಕ್ಕೆ ಹೇಳಿಕೆ

‘ವೈದ್ಯರ ಸಲಹೆಯಂತೆಯೇ ಆಹಾರ’

ನವದೆಹಲಿ (ಪಿಟಿಐ): ತಾನು ಜೈಲಿನಲ್ಲಿ ಸೇವಿಸಿದ ಆಹಾರದ ಕುರಿತು ಜಾರಿ ನಿರ್ದೇಶನಾಲಯ (ಇ.ಡಿ) ಕ್ಷುಲ್ಲಕವಾಗಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ವೈದ್ಯರು ಸಿದ್ಧಪಡಿಸಿದ ಆಹಾರಕ್ರಮದ ಪಟ್ಟಿಗೆ ಅನುಗುಣವಾಗಿಯೇ ತಿನಿಸುಗಳನ್ನು ಸೇವಿಸಿದ್ದಾಗಿ ಶುಕ್ರವಾರ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

‘ಕೇಜ್ರಿವಾಲ್ ಅವರು ಟೈಪ್-2 ಮಧುಮೇಹಿ ಆಗಿದ್ದರೂ ನಿತ್ಯ ಮಾವಿನಹಣ್ಣು ಮತ್ತು ಸಿಹಿತಿಂಡಿ ಗಳಂತಹ ಸಕ್ಕರೆ ಅಂಶ ಹೆಚ್ಚಿರುವ ಆಹಾರವನ್ನು ಸೇವಿಸುತ್ತಿದ್ದಾರೆ. ಈ ಮೂಲಕ ಅವರು ವೈದ್ಯಕೀಯ ಜಾಮೀನಿಗೆ ಆಧಾರಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ’ ಎಂದು ಇ.ಡಿ ಗುರುವಾರ ನ್ಯಾಯಾಲಯಕ್ಕೆ ತಿಳಿಸಿತ್ತು.

ಕೇಜ್ರಿವಾಲ್ ಅವರಿಗೆ ನೀಡುತ್ತಿರುವ ಆಹಾರಕ್ರಮದ ಬಗೆಗಿನ ಆರೋಪ ಕ್ಷುಲ್ಲಕವಾಗಿದ್ದು, ಹಾಸ್ಯಾಸ್ಪದವಾಗಿದೆ. ಅದರ ಹೇಳಿಕೆಯು ಪೂರ್ಣ ಸುಳ್ಳು ಮತ್ತು ದುರುದ್ದೇಶಪೂರಿತ ಎಂದೂ ವಕೀಲರ ಮೂಲಕ ಕೇಜ್ರಿವಾಲ್ ಕೋರ್ಟ್‌ಗೆ ಹೇಳಿದರು.

ಇ.ಡಿ ಆರೋಪಿಸಿದ್ದು...

- ಕೇಜ್ರಿವಾಲ್ ಅವರು ಜಾಮೀನು ಪಡೆಯಲು ತನ್ನ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಿದ್ದಾರೆ. ವೈದ್ಯಕೀಯ ಕಾರಣಗಳನ್ನು ನೀಡಿ ಜಾಮೀನು ಪಡೆಯುವ ಉದ್ದೇಶ ಅವರದ್ದು.
- ನಿಯಮಿತವಾಗಿ ಮಾವಿನಹಣ್ಣು, ಸಿಹಿ ತಿಂಡಿಗಳು, ಆಲೂಪೂರಿ ಇತ್ಯಾದಿಗಳನ್ನು ಕೇಜ್ರಿವಾಲ್ ತಿನ್ನುತ್ತಿದ್ದಾರೆ

ವಕೀಲ ಅಭಿಷೇಕ್ ಸಿಂಘ್ವಿ ಹೇಳಿದ್ದು...

- ಜಾಮೀನು ಪಡೆಯಲು ಸಕ್ಕರೆ ಅಂಶ ಹೆಚ್ಚಿರುವ ಪದಾರ್ಥಗಳನ್ನು ಸೇವಿಸಿದರೆ ಪಾರ್ಶ್ವವಾಯುವಿನಂತಹ ಅಪಾಯ ಎದುರಾಗುವುದಿಲ್ಲವೇ? ಬಂಧನಕ್ಕೂ ಮುನ್ನ ವೈದ್ಯರು ಸಿದ್ಧಪಡಿಸಿಕೊಟ್ಟ ಆಹಾರಕ್ರಮದ ಪಟ್ಟಿಗೆ ಅನುಗುಣವಾಗಿಯೇ ಅವರು ಆಹಾರ ಸೇವಿಸುತ್ತಿದ್ದಾರೆ.
- ಮಾವಿನಹಣ್ಣು, ಸಿಹಿ ತಿಂಡಿಗಳು, ಆಲೂಪೂರಿ ಇತ್ಯಾದಿಗಳನ್ನು ಅವರಿಗೆ ಕೆಲವು ಬಾರಿ ಮಾತ್ರ ನೀಡಲಾಗಿದೆ. ಮನೆಯಿಂದ ಕಳುಹಿಸಿದ 48 ತಿನಿಸುಗಳ ಪೈಕಿ ಮೂರು ಬಾರಿ ಮಾತ್ರ ಮಾವಿನ ಹಣ್ಣು ಕಳುಹಿಸಲಾಗಿದೆ. ಅವರಿಗೆ ಏಪ್ರಿಲ್ 8ರ ನಂತರ ಮಾವಿನ ಹಣ್ಣು ಕಳುಹಿಸಿಲ್ಲ. ಆದಾಗ್ಯೂ, ಮಾವಿನ ಹಣ್ಣಿನಲ್ಲಿ ವೈಟ್ ರೈಸ್ ಅಥವಾ ಬ್ರೌನ್ ರೈಸ್‌ಗಿಂತ ಸಕ್ಕರೆ ಮಟ್ಟ ಕಡಿಮೆ ಇದೆ. ಚಹಾದಲ್ಲಿ ಶುಗರ್ ಫ್ರೀ (ಕೃತಕ ಸಕ್ಕರೆ) ಬಳಸುತ್ತಾರೆ. ಆಲೂಪೂರಿಯನ್ನು ಒಮ್ಮೆ ಮಾತ್ರ ಪೂಜಾ ಸಮಯದಲ್ಲಿ ನೀಡಲಾಗಿತ್ತು.

‘ವೈದ್ಯರ ಸಮಾಲೋಚನೆಗೆ ಅವಕಾಶ ಕೊಡಿ’



ಅರವಿಂದ ಕೇಜ್ರಿವಾಲ್

ತಮ್ಮ ಸಕ್ಕರೆ ಮಟ್ಟದ ಏರಿಳಿತದ ಬಗ್ಗೆ ವಾರಕ್ಕೆ ಮೂರು ಬಾರಿ ವೈದ್ಯರನ್ನು ಸಂಪರ್ಕಿಸಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಗುರುವಾರ ಹಿಂಪಡೆದ ಕೇಜ್ರಿವಾಲ್ ಅವರು, ನಿತ್ಯ 15 ನಿಮಿಷ ತಮ್ಮ ವೈದ್ಯರೊಂದಿಗೆ ಸಮಾಲೋಚನೆ ನಡೆಸಲು ಅವಕಾಶ ಒದಗಿಸಬೇಕು ಎಂದು ಕೋರಿ ಶುಕ್ರವಾರ ಹೊಸ ಅರ್ಜಿ ಸಲ್ಲಿಸಿದರು.

‘ಜೈಲಿನಲ್ಲಿದ್ದಾರೆ ಎಂಬ ಕಾರಣಕ್ಕೆ ಅವರಿಗೆ ಘನತೆಯ ಜೀವನ ನಡೆಸುವ ಮತ್ತು ಉತ್ತಮ ಆರೋಗ್ಯ ಕಾಯ್ದುಕೊಳ್ಳುವ ಹಕ್ಕಿಲ್ಲವೇ? ಅವರೇನು ದರೋಡೆಕೋರರೇ? ತಮ್ಮ ವೈದ್ಯರೊಂದಿಗೆ 15 ನಿಮಿಷ ವಿಡಿಯೊ ಕಾನ್ಫರೆನ್ಸ್ ಮೂಲಕ ಸಮಾಲೋಚನೆ ನಡೆಸಲು ಅವಕಾಶ ನೀಡಬಹುದಲ್ಲ’ ಎಂದು ಕೇಜ್ರಿವಾಲ್ ಪರ ವಕೀಲ ಅಭಿಷೇಕ್ ಸಿಂಘ್ವಿ ಕೋರಿದರು.

ಸಿಂಘ್ವಿ ಅವರ ಕೋರಿಕೆಗೆ ಇ.ಡಿ ವಿರೋಧ ವ್ಯಕ್ತಪಡಿಸಿತು. ಕೇಜ್ರಿವಾಲ್ ಅವರು ಸೇವಿಸುತ್ತಿರುವ ಆಹಾರವು, ಅವರ ವೈದ್ಯರು ಸೂಚಿಸಿದ ಆಹಾರಕ್ರಮದ ಪಟ್ಟಿಗೆ ಹೊಂದಿಕೆಯಾಗುತ್ತಿಲ್ಲ ಎಂದು ಪ್ರತಿಪಾದಿಸಿತು. ಅಲ್ಲದೆ ಕೇಜ್ರಿವಾಲ್ ಅವರ ಮಧುಮೇಹವನ್ನು ಗಮನಿಸಲು ತಿಹಾರ್ ಜೈಲಿನಲ್ಲಿ ಸಾಕಷ್ಟು ವೈದ್ಯಕೀಯ ಸೌಲಭ್ಯಗಳಿವೆ ಎಂದು ಹೇಳಿತು.

ಕೇಜ್ರಿವಾಲ್ ಪರ ಹಾಜರಿದ್ದ ಮತ್ತೊಬ್ಬ ಹಿರಿಯ ವಕೀಲ ರಮೇಶ್ ಗುಪ್ತಾ ಅವರು ಇ.ಡಿ ವಾದವನ್ನು ವಿರೋಧಿಸಿದರು. ಈ ವಿಚಾರಣೆಗೂ ಇ.ಡಿಗೂ ಏನು ಸಂಬಂಧ? ಇದರಲ್ಲಿ ಇ.ಡಿ ಕಕ್ಷಿದಾರರೇ ಅಲ್ಲ. ಇದು ಕೇಜ್ರಿವಾಲ್ ಮತ್ತು ಜೈಲು ಹಾಗೂ ನ್ಯಾಯಾಲಯದ ನಡುವಿನ ವಿಚಾರ. ಇ.ಡಿಯವರು ಮಾಧ್ಯಮ ವಿಚಾರಣೆ ನಡೆಸುತ್ತಿದ್ದಾರೆ ಮತ್ತು ಅವುಗಳು ತಮಗೆ ಬೇಕಾದುದನ್ನು ಪ್ರಕಟಿಸುತ್ತಿವೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ತಮ್ಮ ವೈದ್ಯರೊಂದಿಗೆ ನಿತ್ಯ ಸಮಾಲೋಚನೆಗೆ ಅವಕಾಶ ಕೋರಿ ದೆಹಲಿ ಸಿ.ಎಂ ಸಲ್ಲಿಸಿದ ಅರ್ಜಿಯ ಆದೇಶವನ್ನು ನ್ಯಾಯಾಲಯವು ಸೋಮವಾರಕ್ಕೆ ಕಾಯ್ದಿರಿಸಿತು. ಈ ಸಂಬಂಧ ತಿಹಾರ್ ಜೈಲಿನ ಅಧಿಕಾರಿಗಳು ಶನಿವಾರದೊಳಗೆ ಉತ್ತರ ಸಲ್ಲಿಸುವಂತೆ ನ್ಯಾಯಾಲಯ ನಿರ್ದೇಶಿಸಿತು.

ಕೇಜ್ರಿವಾಲ್‌ಗೆ ಜೈಲಲ್ಲಿ ಏನಾದರೂ ಆಗಬಹುದು: ಸಂಜಯ್ ಸಿಂಗ್

ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ವಿರುದ್ಧ ಬಹುದೊಡ್ಡ ಪಿತೂರಿ ನಡೆಸಲಾಗುತ್ತಿದೆ. ಜೈಲಿನಲ್ಲಿ ಅವರಿಗೆ ಏನು ಬೇಕಾದರೂ ಆಗಬಹುದು ಎಂದು ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಅವರು ತಮ್ಮ ಪಕ್ಷದ ಆರೋಪವನ್ನು ಶುಕ್ರವಾರ ಪುನರುಚ್ಚರಿಸಿದರು.

ಕೇಜ್ರಿವಾಲ್ ಅನಾರೋಗ್ಯವನ್ನು ಬಿಜೆಪಿ ನಾಯಕರು ಗೇಲಿ ಮಾಡಿದ್ದಾರೆ. ಅಲ್ಲದೇ ಮಾಧ್ಯಮಗಳಲ್ಲಿ ದಾರಿ ತಪ್ಪಿಸುವ ಸುದ್ದಿಗಳನ್ನು ಪ್ರಸಾರ ಮಾಡಲಾಗುತ್ತಿದೆ ಎಂದು ಸಿಂಗ್ ಕಿಡಿಕಾರಿದರು.

ಕೈದಿಗಳ ಆರೋಗ್ಯ ಸಂಬಂಧಿಸಿದ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಲು ಜೈಲಿನ ನಿಯಮಗಳು ಅನುಮತಿಸುವುದಿಲ್ಲ. ಹಾಗಿದ್ದರೂ ಇ.ಡಿ. ಗುರುವಾರ ಕೇಜ್ರಿವಾಲ್ ಅವರ ನಕಲಿ ಆಹಾರ ಪಟ್ಟಿಯನ್ನು ಪ್ರಚಾರ ಮಾಡಿದ್ದು ಏಕೆ ಎಂದು ಪ್ರಶ್ನಿಸಿದರು.

ಎನ್‌ಎಸ್‌ಜಿ ಮುಖ್ಯಸ್ಥರಾಗಿ ಪ್ರಭಾತ್

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ನಳಿನ್ ಪ್ರಭಾತ್ ಅವರನ್ನು ರಾಷ್ಟ್ರೀಯ ಭದ್ರತಾ ಪಡೆಯ(ಎನ್‌ಎಸ್‌ಜಿ) ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ ಎಂದು ಸಿಬ್ಬಂದಿ ಇಲಾಖೆ ತಿಳಿಸಿದೆ.

ಎನ್‌ಎಸ್‌ಜಿಯ ಪ್ರಧಾನ ನಿರ್ದೇಶಕರಾಗಿ ಅವರ ನೇಮಕವನ್ನು ಸಂಪುಟದ ನೇಮಕಾತಿ ಸಮಿತಿಯು (ಎಸಿಸಿ) ಅನುಮೋದನೆಗೊಳಿಸಿದೆ. ಅವರು 2028ರ ಆಗಸ್ಟ್ 31ರವರೆಗೆ ಈ ಹುದ್ದೆಯಲ್ಲಿ ಇರಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

1992ರ ಐಪಿಎಸ್ ಬ್ಯಾಚ್‌ನ ಆಂಧ್ರಪ್ರದೇಶ ಕೇಡರ್ ಅಧಿಕಾರಿಯಾಗಿರುವ ಪ್ರಭಾತ್ ಅವರು, ಕೇಂದ್ರೀಯ ಮೀಸಲು ಪಡೆಯ (ಸಿಆರ್‌ಪಿಎಫ್) ಹೆಚ್ಚುವರಿ ಪ್ರಧಾನ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಪ್ನ ತಿವಾರಿಗೆ ಬಡ್ತಿ: ಗುಪ್ತಚರ ದಳದ ವಿಶೇಷ ನಿರ್ದೇಶಕಿಯಾಗಿ ಹಿರಿಯ ಐಪಿಎಸ್ ಅಧಿಕಾರಿ ಸಪ್ನ ತಿವಾರಿ ಅವರನ್ನು ನೇಮಕ ಮಾಡಲಾಗಿದೆ.

ಮೂರು ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದ ಮತದಾನ

ಪಶ್ಚಿಮ ಬಂಗಾಳ: ಹಲವೆಡೆ ಹಿಂಸಾಚಾರ

ಕೂಚ್‌ಬಿಹಾರ್/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಮೂರು ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ನಡೆದ ಮೊದಲ ಹಂತದ ಮತದಾನದ ವೇಳೆ, ಹಲವೆಡೆ ಹಿಂಸಾಚಾರ ನಡೆದಿದೆ.

ಕೂಚ್ ಬಿಹಾರ್ ಕ್ಷೇತ್ರದಲ್ಲಿ ಆಡಳಿತಾರೂಢ ಟಿಎಂಸಿ ಹಾಗೂ ಬಿಜೆಪಿ ಕಾರ್ಯಕರ್ತರ ನಡುವಿನ ಘರ್ಷಣೆ ಹಿಂಸಾಚಾರಕ್ಕೆ ತಿರುಗಿದೆ.

ಮತದಾನದ ವೇಳೆ ಹಿಂಸಾಚಾರ, ಮತದಾರರಿಗೆ ಬೆದರಿಕೆ ಒಡ್ಡಿರುವುದು ಹಾಗೂ ಏಜೆಂಟರ ಮೇಲೆ ಹಲ್ಲೆ ನಡೆಸಿರುವುದಕ್ಕೆ ಸಂಬಂಧಿಸಿ ಟಿಎಂಸಿ ಹಾಗೂ ಬಿಜೆಪಿ ಕ್ರಮವಾಗಿ 80 ಹಾಗೂ 30 ದೂರುಗಳನ್ನು ದಾಖಲಿಸಿವೆ ಎಂದು ಎರಡೂ ಪಕ್ಷಗಳ ಮೂಲಗಳು ಹೇಳಿವೆ.

ಕೂಚ್‌ಬಿಹಾರ್ ಹಾಗೂ ಅಲಿಪುರ್ದೌರ್ ಕ್ಷೇತ್ರಗಳಲ್ಲಿ ಅಧಿಕ ಸಂಖ್ಯೆಯ ದೂರುಗಳು ದಾಖಲಾಗಿವೆ.

‘ಹಲವು ದೂರುಗಳನ್ನು ಸ್ವೀಕರಿಸಿದ್ದೇವೆ. ಆದರೆ, ಹಿಂಸಾಚಾರ ನಡೆದ ಬಗ್ಗೆ ಈವರೆಗೆ ನಮಗೆ ಯಾವುದೇ ವರದಿಗಳು ಬಂದಿಲ್ಲ’ ಎಂದು ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸಚಿವ ಹಾಗೂ ಬಿಜೆಪಿ ಮುಖಂಡ ನಿಸಿತ್ ಪ್ರಾಮಾಣಿಕ್ (ಕೂಚ್ ಬಿಹಾರ್‌ದಿಂದ ಸ್ಪರ್ಧೆ) ಸೇರಿದಂತೆ 37 ಅಭ್ಯರ್ಥಿಗಳು ಈ ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಕಣದಲ್ಲಿದ್ದಾರೆ.

ಆರೋಪ-ಪ್ರತ್ಯಾರೋಪ: ‘ಕೂಚ್‌ಬಿಹಾರ್ ಕ್ಷೇತ್ರದ ಸೀತಲಕುಚಿಯಲ್ಲಿ ಪಕ್ಷದ ಏಜೆಂಟರ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆ. ಮತದಾರರು ಕೆಲ ಮತಗಟ್ಟೆಗಳ ಪ್ರವೇಶಿಸುವುದನ್ನು ತಡೆದಿದ್ದಾರೆ’ ಎಂದು ಟಿಎಂಸಿ ಆರೋಪಿಸಿದೆ. ಈ ಆರೋಪಗಳನ್ನು ತಳ್ಳಿಹಾಕಿರುವ ಬಿಜೆಪಿ, ಟಿಎಂಸಿ ಕಾರ್ಯಕರ್ತರೇ ಮತದಾರರನ್ನು ಬೆದರಿಕೆ ಒಡ್ಡಿದ್ದಾರೆ ಎಂದು ದೂರಿದ್ದಾರೆ.

ಕೂಚ್‌ಬಿಹಾರ್ ಜಿಲ್ಲೆಯ ಮಾಥಾಭಾಂಗಾ ಎಂಬಲ್ಲಿ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆಯುತ್ತಿರುವ ದೃಶ್ಯಗಳು ಕೆಲ ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿವೆ.

ಅಮಿತ್ ಶಾ ಪೋಸ್ಟ್: ಮೊದಲ ಹಂತದ ಮತದಾನದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿ,‘ಒಳನುಸುಳುವಿಕೆ ಹಾಗೂ ಭ್ರಷ್ಟಾಚಾರ ತಡೆಗಟ್ಟುವುದಕ್ಕಾಗಿ ಮತದಾರರು ತಮ್ಮ ಹಕ್ಕು ಚಲಾಯಿಸಬೇಕು’ ಎಂದು ಒತ್ತಾಯಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಟಿಎಂಸಿ ಮುಖಂಡ ಕುನಾಲ್ ಘೋಷ್, ‘ಅಕ್ರಮವಾಗಿ ದೇಶದೊಳಗೆ ನುಸುಳುವುದನ್ನು ತಡೆಗಟ್ಟುವುದು ಕೇಂದ್ರ ಗೃಹ ಸಚಿವರ ಕಚೇರಿ ಹಾಗೂ ಬಿಎಸ್‌ಎಫ್‌ನ ಕೆಲಸ’ ಎಂದು ಹೇಳಿದ್ದಾರೆ.

ಮತದಾನದ ಸುತ್ತ...

- ಅಕ್ರಮವಾಗಿ ಮತ ಚಲಾವಣೆ ಮಾಡುವುದಕ್ಕೆ ಕೇಂದ್ರೀಯ ಪಡೆಗಳು ಬಿಜೆಪಿ ಕಾರ್ಯಕರ್ತರಿಗೆ ನೆರವು ನೀಡುತ್ತಿದ್ದಾರೆ ಎಂದು ಆರೋಪಿಸಿ ಮಾಥಾಭಾಂಗಾದಲ್ಲಿ ಟಿಎಂಸಿ ಕಾರ್ಯಕರ್ತರಿಂದ ಪ್ರತಿಭಟನೆ
- ಟಿಎಂಸಿಯ ಬೇಥಗುರಿ ಬ್ಲಾಕ್ ಅಧ್ಯಕ್ಷ ಅನಂತ ಬರ್ಮನ್ ಅವರನ್ನು ಬಿಜೆಪಿ ಕಾರ್ಯಕರ್ತರು ಥಳಿಸಿದ ಆರೋಪ. ಅನಂತರ ಆಸ್ಪತ್ರೆಗೆ ದಾಖಲು
- ಕೂಚ್‌ಬಿಹಾರ್ ದಕ್ಷಿಣ ಭಾಗದಲ್ಲಿ ಪಕ್ಷದ ಕಾರ್ಯಕರ್ತರನ್ನು ಟಿಎಂಸಿ ಅಪಹರಿಸಿದೆ. ಏಜೆಂಟರು ಮತಗಟ್ಟೆ ಪ್ರವೇಶಿಸದಂತೆ ತಡೆದಿದೆ ಎಂದು ಬಿಜೆಪಿ ಆರೋಪ

ಪಶ್ಚಿಮ ಬಂಗಾಳದ ಜಲಪೈಗುರಿಯಲ್ಲಿ ಶುಕ್ರವಾರ ಮತದಾರರು ತಮ್ಮ ಹಕ್ಕು ಚಲಾಯಿಸಲು ಮತಗಟ್ಟೆಯೊಂದರಲ್ಲಿ ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ

> ಚುನಾವಣಾ ಅಕ್ರಮ ನಡೆಸುವುದಕ್ಕಾಗಿ ಬಿಜೆಪಿಯು ಕೇಂದ್ರೀಯ ಪಡೆಗಳ ಜೊತೆ ಸೇರಿ ಭಯದ ವಾತಾವರಣ ನಿರ್ಮಿಸಿದೆ
>
> **ಉದಯನ್ ಗುಹಾ,** ಉತ್ತರ ಬಂಗಾಳ ಅಭಿವೃದ್ಧಿ ಸಚಿವ

> ತಾನು ಸೋಲುವುದನ್ನು ಮನಗಂಡಿರುವ ಟಿಎಂಸಿ ಮತದಾರರನ್ನು ಬೆದರಿಸಲು ಯತ್ನಿಸಿದೆ
>
> **ನಿಸಿತ್ ಪ್ರಮಾಣಿಕ್,** ಬಿಜೆಪಿ ಮುಖಂಡ ಹಾಗೂ ಕೇಂದ್ರ ಸಚಿವ

ಬಾಂಬ್ ಸ್ಫೋಟ: ಸಿಆರ್‌ಪಿಎಫ್ ಯೋಧನಿಗೆ ಗಾಯ

ಛತ್ತೀಸಗಢ (ಪಿಟಿಐ): ಇಲ್ಲಿನ ಬಸ್ತರ್ ಲೋಕಸಭಾ ಕ್ಷೇತ್ರದಲ್ಲಿ ನಕ್ಸಲರು ಇಟ್ಟಿದ್ದ ಕಚ್ಚಾ ಬಾಂಬ್ ಸ್ಫೋಟಗೊಂಡ ಪರಿಣಾಮ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಯೋಧರೊಬ್ಬರು ಗಾಯಗೊಂಡಿದ್ದಾರೆ.

ಬಿಜಾಪುರ ಜಿಲ್ಲೆಯ ಬೈರಮಗಢ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಂಬ್ ಸ್ಫೋಟಗೊಂಡಿದೆ. ಸಿಆರ್‌ಪಿಎಫ್‌ನ 62ನೇ ಬೆಟಾಲಿಯನ್‌ನ ಸಹಾಯಕ ಕಮಾಂಡಂಟ್ ಮನು ಎಚ್‌.ಸಿ. ಗಾಯಗೊಂಡ ಯೋಧ. ಇವರ ಕಾಲು ಮತ್ತು ಕೈಗಳಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದರು.

ಗ್ರನೇಡ್ ಲಾಂಚರ್ ಸ್ಫೋಟ: ಇನ್ನೊಂದೆಡೆ, ಬಿಜಾಪುರ ಜಿಲ್ಲೆಯ ಗುಲ್ಗಾಂ ಗ್ರಾಮದ ಸಮೀಪ ಬಂದೂಕಿಗೆ ಅಳವಡಿಸುವ ಗ್ರನೇಡ್ ಲಾಂಚರ್ ಆಕಸ್ಮಿಕವಾಗಿ ಸ್ಫೋಟಿಸಿದ್ದರಿಂದ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ಸಿಆರ್‌ಪಿಎಫ್ ಯೋಧರೊಬ್ಬರು ಗಾಯಗೊಂಡಿದ್ದಾರೆ.

ಗಾಯಾಳು ಸಿಆರ್‌ಪಿಎಫ್‌ನ 196ನೇ ಬೆಟಾಲಿಯನ್‌ನವರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಭದ್ರತಾ ಸಿಬ್ಬಂದಿ ಮತಗಟ್ಟೆಯಿಂದ 500 ಮೀಟರ್ ದೂರದಲ್ಲಿ ಕಣ್ಗಾವಲು ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯ/ ಕೇಂದ್ರಾಡಳಿತ ಪ್ರದೇಶ	ಚುನಾವಣೆ ನಡೆದ ಕ್ಷೇತ್ರಗಳು	ಮತದಾನದ ಶೇಕಡಾವಾರು ಪ್ರಮಾಣ*
ತಮಿಳುನಾಡು	39	72.09
ರಾಜಸ್ಥಾನ	12	54.97
ಉತ್ತರ ಪ್ರದೇಶ	08	57.61
ಮಧ್ಯಪ್ರದೇಶ	06	63.50
ಅಸ್ಸಾಂ	05	71.38
ಮಹಾರಾಷ್ಟ್ರ	05	55.29
ಉತ್ತರಾಖಂಡ	05	53.64
ಬಿಹಾರ	04	47.49
ಪಶ್ಚಿಮ ಬಂಗಾಳ	03	77.57
ಮಣಿಪುರ	02	68.62
ಅರುಣಾಚಲ ಪ್ರದೇಶ	02	65.46
ಮೇಘಾಲಯ	02	70.26
ಅಂಡಮಾನ್ ಮತ್ತು ನಿಕೋಬಾರ್	01	56.87
ಮಿಜೋರಾಂ	01	56.68
ನಾಗಾಲ್ಯಾಂಡ್	01	56.77
ಪುದುಚೇರಿ	01	73.25
ಸಿಕ್ಕಿಂ	01	68.06
ಲಕ್ಷದ್ವೀಪ	01	59.02
ತ್ರಿಪುರ	01	79.90
ಜಮ್ಮು ಮತ್ತು ಕಾಶ್ಮೀರ	01	65.08
ಛತ್ತೀಸಗಢ	01	63.41

*ರಾತ್ರಿ 7 ಗಂಟೆಯವರೆಗೆ

ಪೂರ್ವ ನಾಗಾಲ್ಯಾಂಡ್ ಆರು ಜಿಲ್ಲೆಗಳಲ್ಲಿ ನಡೆಯದ ಮತದಾನ

ಕೊಹಿಮಾ (ಪಿಟಿಐ): ಪೂರ್ವ ನಾಗಾಲ್ಯಾಂಡ್‌ನ ಆರು ಜಿಲ್ಲೆಗಳಲ್ಲಿ ಶುಕ್ರವಾರ ಯಾರೊಬ್ಬರೂ ಮನೆಯಿಂದ ಹೊರಗೆ ಬಂದು ಮತ ಚಲಾಯಿಸಲಿಲ್ಲ. ಈ ಭಾಗದ ಮತಗಟ್ಟೆಗಳಲ್ಲಿ ಮತಗಟ್ಟೆ ಅಧಿಕಾರಿಗಳನ್ನು ಹೊರತುಪಡಿಸಿದರೆ, ಮತದಾರರು ಸುಳಿಯಲಿಲ್ಲ.

ಈ ಪ್ರದೇಶದ ಏಳು ಬುಡಕಟ್ಟು ಸಂಘಟನೆಗಳ ಉನ್ನತ ಸಂಸ್ಥೆಯಾದ ‘ಈಸ್ಟರ್ನ್ ನಾಗಾಲ್ಯಾಂಡ್ ಪೀಪಲ್ಸ್ ಆರ್ಗನೈಸೇಷನ್’ (ಇಎನ್‌ಪಿಒ) ಪ್ರತ್ಯೇಕ ರಾಜ್ಯಕ್ಕೆ ಆಗ್ರಹಿಸಿ, ಅನಿರ್ದಿಷ್ಟಾವಧಿ ಬಂದ್ ಹಾಗೂ ಚುನಾವಣೆಯನ್ನು ಬಹಿಷ್ಕರಿಸಲು ಕರೆ ನೀಡಿತ್ತು.

ಜಿಲ್ಲಾಡಳಿತ ಮತ್ತು ಇತರ ತುರ್ತು ಸೇವೆಗಳನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ ಅಥವಾ ವಾಹನಗಳ ಸಂಚಾರ ಇರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಪ್ರದೇಶದ ಆರು ಜಿಲ್ಲೆಗಳಲ್ಲಿ 738 ಮತಗಟ್ಟೆಗಳಿದ್ದು, ಚುನಾವಣಾ ಕಾರ್ಯದ ನಿಮಿತ್ತ ಚುನಾವಣಾ ಸಿಬ್ಬಂದಿ ಮತಗಟ್ಟೆಗಳಲ್ಲಿ ಹಾಜರಿದ್ದರು ಎಂದು ನಾಗಾಲ್ಯಾಂಡ್‌ನ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಅವಾ ಲೋರಿಂಗ್ ತಿಳಿಸಿದ್ದಾರೆ.

ಈ ಆರು ಜಿಲ್ಲೆಗಳಲ್ಲಿ ಒಟ್ಟು 4,00,632 ಮತದಾರು ಇದ್ದು, ಮಧ್ಯಾಹ್ನದವರೆಗೆ ಯಾವುದೇ ಮತದಾನವಾಗಿರಲಿಲ್ಲ ಎಂದು ಮೂಲಗಳು ತಿಳಿಸಿವೆ. ಈ ಆರು ಜಿಲ್ಲೆಗಳಲ್ಲಿ ಏಳು ನಾಗಾ ಬುಡಕಟ್ಟು ಗಳಾದ ಚಾಂಗ್, ಕೊನ್ಯಾಕ್, ಸಾಂಗ್ತಮ್, ಫೋಮ್, ಯಿಮ್ಖಿಯುಂಗ್, ಖಿಯಾಮ್ನಿಯುಂಗನ್ ಮತ್ತು ಟಿಖಿರ್ ಜನರು ನೆಲೆಸಿದ್ದಾರೆ. ಇವರ ಜತೆಗೆ ಪ್ರತ್ಯೇಕ ರಾಜ್ಯದ ಬೇಡಿಕೆಗೆ ಈ ಪ್ರದೇಶದ ಸುಮಿ ಬುಡಕಟ್ಟಿನ ಒಂದು ಭಾಗವೂ ಬೆಂಬಲ ಸೂಚಿಸಿದೆ.

ಇಎನ್‌ಪಿಒ ಸಂಘಟನೆಯು ಮಾರ್ಚ್ 5ರಂದು, ಪೂರ್ವ ನಾಗಾಲ್ಯಾಂಡ್ ಪ್ರದೇಶದಲ್ಲಿ ಏಪ್ರಿಲ್ 18ರಿಂದ ಅನಿರ್ದಿಷ್ಟಾವಧಿ ಬಂದ್ ಆಚರಿಸಲು ಕರೆ ನೀಡಿತ್ತು. 2010ರಿಂದ ಪ್ರತ್ಯೇಕ ರಾಜ್ಯಕ್ಕೆ ಈ ಸಂಘಟನೆ ಬೇಡಿಕೆ ಮುಂದಿಟ್ಟು, ಹೋರಾಟಗಳನ್ನು ನಡೆಸಿದೆ.

ನೋಟಿಸ್: ಚುನಾವಣಾ ಪ್ರಕ್ರಿಯೆಗೆ ಅಡ್ಡಿಪಡಿಸಿದ ಇಎನ್‌ಪಿಒಗೆ ನಾಗಾಲ್ಯಾಂಡ್‌ನ ಮುಖ್ಯ ಚುನಾವಣಾ ಅಧಿಕಾರಿ ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದಾರೆ.

ಮತ ಹಾಕಿ ಮನೆಯತ್ತ... ಛತ್ತೀಸಗಢದ ದಾಂತೇವಾಡ ಜಿಲ್ಲೆಯ ದುಗೇಲಿ ಗ್ರಾಮದಲ್ಲಿ ಶುಕ್ರವಾರ ಮತ ಚಲಾವಣೆ ಮಾಡಿದ ನಂತರ ಮತದಾರರು ಟ್ರಕ್‌ವೊಂದರಲ್ಲಿ ತಮ್ಮ ಗ್ರಾಮಗಳತ್ತ ತೆರಳಿದರು –ಪಿಟಿಐ ಚಿತ್ರ

ಹಂತ 1: ಮತದಾನ ಶೇ 62

ಒಂದನೇ ಪುಟದಿಂದ...

ಗರಿಷ್ಠ ಶೇ 79.90ರಷ್ಟು ಮತದಾನ ತ್ರಿಪುರಾದಲ್ಲಿ ಆಗಿದ್ದರೆ, ಅತ್ಯಂತ ಕನಿಷ್ಠ ಶೇ 47.49ರಷ್ಟು ಮತದಾನ ಬಿಹಾರದಲ್ಲಿ ಆಗಿದೆ.

ಹಲವೆಡೆ ಮತದಾನ ಪ್ರಕ್ರಿಯೆ ಆರಂಭಗೊಂಡ ಕೆಲ ಹೊತ್ತಿನಲ್ಲಿಯೇ ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ದೋಷ ಕಂಡುಬಂದ ಘಟನೆಗಳು ವರದಿಯಾಗಿವೆ. ಪಟ್ಟಿಯಲ್ಲಿ ತಮ್ಮ ಹೆಸರುಗಳು ಇಲ್ಲದಿರುವ ಬಗ್ಗೆಯೂ ಕೆಲವೆಡೆ ಮತದಾರರು ಆಕ್ಷೇಪ ವ್ಯಕ್ತಪಡಿಸಿದರು.

ಸಂಜೆ 6 ಗಂಟೆಗೆ ಮತದಾನ ಪ್ರಕ್ರಿಯೆ ಮುಕ್ತಾಯವಾಗಿದ್ದರೂ, ಮತ ಚಲಾಯಿಸಲು ಜನರು ಮತಗಟ್ಟೆಗಳಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದರು. ಹೀಗಾಗಿ, ಸರದಿಯಲ್ಲಿ ಇದ್ದವರಿಗೆಲ್ಲ ತಮ್ಮ ಹಕ್ಕು ಚಲಾವಣೆ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ಆಯೋಗ ತಿಳಿಸಿದೆ.

ಮೊದಲ ಹಂತದಲ್ಲಿ ‘ಅಧಿಕ ಪ್ರಮಾಣ’ದ ಮತದಾನ ನಡೆದಿದೆ ಎಂದು ಆಯೋಗ ಹೇಳಿದೆ. 2019ರಲ್ಲಿ ನಡೆದಿದ್ದ ಲೋಕಸಭೆ ಚುನಾವಣೆಯ ಮೊದಲ ಹಂತದಲ್ಲಿ ಶೇ 69.43ರಷ್ಟು ಮತದಾನವಾಗಿತ್ತು.

ಮಧ್ಯಪ್ರದೇಶದ ಭಿಂದವಾಢದಲ್ಲಿ ನವದಂಪತಿ ಶುಕ್ರವಾರ ಮತದಾನ ಮಾಡಿದರು – ಪಿಟಿಐ ಚಿತ್ರ

ಮಣಿಪುರ: ಕೆಲವೆಡೆ ಗುಂಡಿನ ದಾಳಿ

ಒಂದನೇ ಪುಟದಿಂದ...

ಇಂಫಾಲ್ ಪಶ್ಚಿಮ ಜಿಲ್ಲೆಯ ಉರಿಪೋಕ್ ಮತ್ತು ಇರೊಯಿಶೆಂಬಾದಲ್ಲಿ ಶಸ್ತ್ರಸಜ್ಜಿತ ವ್ಯಕ್ತಿಗಳು ರಾಜಕೀಯ ಪಕ್ಷವೊಂದರ ಚುನಾವಣಾ ಏಜೆಂಟರನ್ನು ಬೆದರಿಸಿ, ಮತಗಟ್ಟೆಗಳಿಂದ ಹೊರ ಹೋಗುವಂತೆ ತಾಕೀತು ಮಾಡಿದರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇರೊಯಿಶೆಂಬಾದಲ್ಲಿ ಮತಗಟ್ಟೆಗಳಲ್ಲಿನ ಚುನಾವಣಾ ಸಾಮಗ್ರಿಗಳು ಮತ್ತು ಸಲಕರಣೆಗಳನ್ನು ನಾಶಪಡಿಸಿರುವ ಘಟನೆ ನಡೆದಿದೆ. ಇಂಫಾಲ್ ಪೂರ್ವ ಜಿಲ್ಲೆಯ ಖೋಂಗ್‌ಮನ್ ವಲಯ 4ರಲ್ಲಿ ಮತದಾರರು ಮತ್ತು ಅಪರಿಚಿತ ವ್ಯಕ್ತಿಗಳ ನಡುವೆ ವಾಗ್ವಾದ ನಡೆದಿದೆ. ಇವಿಎಂಗಳಿಗೆ ಹಾನಿ ಮಾಡಲಾಗಿದೆ. ಕೀರಾವೊ ವ್ಯಾಪ್ತಿಯ ಕಿಯಾಮ್‌ಗೆಯಲ್ಲಿ ಶಸ್ತ್ರಸಜ್ಜಿತ ವ್ಯಕ್ತಿಗಳು ಗಾಳಿಯಲ್ಲಿ ಗುಂಡುಗಳನ್ನು ಹಾರಿಸಿ, ಮತಗಟ್ಟೆಗಳಲ್ಲಿದ್ದ ಕಾಂಗ್ರೆಸ್ ಏಜೆಂಟರನ್ನು ಬೆದರಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಎಎ: ಪ್ರತಿಕ್ರಿಯೆಗೆ ಕೇಂದ್ರ, ಅಸ್ಸಾಂ ಸರ್ಕಾರಕ್ಕೆ ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ-2024 (ಸಿಎಎ) ನಿಯಮಗಳನ್ನು ಪ್ರಶ್ನಿಸಿ ಹೊಸದಾಗಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಹಾಗೂ ಅಸ್ಸಾಂ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠ, ಅಸ್ಸಾಂ ಸರ್ಕಾರ, ಗೃಹ ಮತ್ತು ವಿದೇಶಾಂಗ ಸಚಿವಾಲಯಗಳಿಗೆ ನೋಟಿಸ್ ಜಾರಿ ಮಾಡಿತು.

ಇದೇ ವಿಷಯ ಕುರಿತು ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಗಳೊಂದಿಗೆ ಈ ಹೊಸ ಅರ್ಜಿ ಸೇರಿಸುವಂತೆಯೂ ನ್ಯಾಯಪೀಠ ಆದೇಶಿಸಿತು.

ಗುವಾಹಟಿ ನಿವಾಸಿ ಹೀರೇನ್ ಗೋಹೇನ್ ಎಂಬವರು ಈ ಕುರಿತು ಅರ್ಜಿ ಸಲ್ಲಿಸಿದ್ದಾರೆ.

‘ಸಿಎಎ ನಿಯಮಗಳು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿವೆ. ಅವು ತಾರತಮ್ಯ ಧೋರಣೆ ಮತ್ತು ಸ್ವೇಚ್ಛೆಯಿಂದ ಕೂಡಿದ್ದು, ಕಾನೂನುಬಾಹಿರ ಸಹ ಆಗಿವೆ. ಜೊತೆಗೆ, ಸಂವಿಧಾನದ ಮೂಲ ಸ್ವರೂಪಕ್ಕೂ ವಿರುದ್ಧವಾಗಿವೆ’ ಎಂದು ಗೋಹೇನ್ ಅರ್ಜಿಯಲ್ಲಿ ಹೇಳಿದ್ದಾರೆ.

ಬೇಸಿಗೆ: ರೈಲುಗಳ ಹೆಚ್ಚುವರಿ ಸಂಚಾರ

ನವದೆಹಲಿ: ಬೇಸಿಗೆ ಅವಧಿಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚುವ ನಿರೀಕ್ಷೆ ಇರುವುದರಿಂದ ದೇಶದಾದ್ಯಂತ ರೈಲುಗಳು 9,111 ಬಾರಿ ಹೆಚ್ಚುವರಿಯಾಗಿ ಸಂಚರಿಸಲಿವೆ ಎಂದು ಭಾರತೀಯ ರೈಲ್ವೆ ಶುಕ್ರವಾರ ತಿಳಿಸಿದೆ.

2023ಕ್ಕೆ ಹೋಲಿಸಿದರೆ ಇದು ಗಣನೀಯ ಹೆಚ್ಚಳ. ಆ ವರ್ಷ ಬೇಸಿಗೆಯಲ್ಲಿ ರೈಲುಗಳು ಹೆಚ್ಚುವರಿಯಾಗಿ 6,369 ಬಾರಿ ಸಂಚರಿಸಿದ್ದವು. ಈ ಬಾರಿ ಅದಕ್ಕಿಂತ 2,742 ಬಾರಿ ಹೆಚ್ಚುವರಿಯಾಗಿ ಸಂಚರಿಸಲಿವೆ ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ. ಮಾಧ್ಯಮ ವರದಿಗಳು, ಸಾಮಾಜಿಕ ಜಾಲತಾಣಗಳು, ರೈಲ್ವೆ ಸಹಾಯವಾಣಿ ಆಧರಿಸಿ ಹೆಚ್ಚುವರಿ ರೈಲು ಸೇವೆಯನ್ನು ಒದಗಿಸಲಾಗುವುದು ಎಂದು ತಿಳಿಸಿದೆ.

28 ವಾರಗಳ ಭ್ರೂಣ ತೆಗೆಸಲು ಮನವಿ: ಪರೀಕ್ಷೆಗೆ ನಿರ್ದೇಶನ

ನವದೆಹಲಿ: ತನ್ನ 28 ವಾರಗಳ ಭ್ರೂಣವನ್ನು ತೆಗೆಸಲು ಅನುಮತಿ ಕೋರಿರುವ 14 ವರ್ಷದ ಅತ್ಯಾಚಾರ ಸಂತ್ರಸ್ತೆಯನ್ನು ತಕ್ಷಣವೇ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಅವರ ಪೀಠವು, ಬಾಲಕಿಯ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಗರ್ಭಾವಸ್ಥೆಯ ಸಂಭವನೀಯ ಪರಿಣಾಮಗಳ ಕುರಿತು ಪರೀಕ್ಷೆ ನಡೆಸುವಂತೆ ನಿರ್ದೇಶಿಸಿದೆ. ಈ ವಿಷಯವನ್ನು ಸೋಮವಾರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಪೀಠ ಹೇಳಿದೆ.

ಬಾಲಕಿಯ ತಾಯಿ ಸಲ್ಲಿಸಿದ್ದ ಮನವಿಯನ್ನು ಬಾಂಬೆ ಹೈಕೋರ್ಟ್ ಏಪ್ರಿಲ್ 4ರಂದು ತಿರಸ್ಕರಿಸಿತ್ತು. ಬಳಿಕ ಅವರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು. ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಆಕೆ ಗರ್ಭಿಣಿಯಾಗಿದ್ದಾಳೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಎಫ್‌ಐಆರ್ ಕೂಡ ದಾಖಲಾಗಿದೆ.

ಸಂತ್ರಸ್ತ ಬಾಲಕಿಯನ್ನು ಇದೇ 20ರಂದು (ಶನಿವಾರ) ಸಿಯಾನ್ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಡಿಸಿ, ಆಸ್ಪತ್ರೆಯ ವರದಿಯನ್ನು ಇದೇ 22ರಂದು (ಸೋಮವಾರ) ಬೆಳಿಗ್ಗೆ 10.30ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಪೀಠ ಸೂಚಿಸಿತು.

ಅಲೋಪಥಿ ಕುರಿತ ಹೇಳಿಕೆ: ರಾಮದೇವಗೆ 'ಸುಪ್ರೀಂ' ಸೂಚನೆ

‘ದೂರುದಾರರನ್ನು ಕಕ್ಷಿದಾರರನ್ನಾಗಿ ಮಾಡಿ’

ನವದೆಹಲಿ(ಪಿಟಿಐ):ನವದೆಹಲಿ(-ಪಿಟಿಐ): ಅಲೋಪಥಿ ಔಷಧಗಳ ಕುರಿತ ಹೇಳಿಕೆಗೆ ಸಂಬಂಧಿಸಿ ತಮ್ಮ ವಿರುದ್ಧದ ಕ್ರಿಮಿನಲ್ ಕ್ರಮಕ್ಕೆ ತಡೆ ನೀಡುವಂತೆ ಕೋರಿ ಯೋಗ ಗುರು ರಾಮದೇವ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ‘ನಿಮ್ಮ ಅರ್ಜಿಯಲ್ಲಿ ದೂರುದಾರರನ್ನು ಕಕ್ಷಿದಾರರನ್ನಾಗಿ ಸೇರಿಸಿ’ ಎಂದು ರಾಮದೇವ ಅವರಿಗೆ ಶುಕ್ರವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದ್ರೇಶ್ ಹಾಗೂ ಪಿ.ಬಿ.ವರಾಳೆ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘ಈ ಹೇಳಿಕೆಗೆ ಸಂಬಂಧಿಸಿಂತೆ ಯಾರೆಲ್ಲಾ ನಿಮ್ಮ (ಬಾಬಾ ರಾಮದೇವ್) ವಿರುದ್ಧ ದೂರು ನೀಡಿದ್ದಾರೆಯೋ ಅವರನ್ನು ಈ ವಿಚಾರಣಾ ನ್ಯಾಯ ಪ್ರಕ್ರಿಯೆಯಲ್ಲಿ; ತಡೆ ಆದೇಶ ಕೊಡುವ ಮುನ್ನ ಅವರ ವಾದವನ್ನೂ ಆಲಿಸುವ ಅಗತ್ಯವಿದೆ. ಈ ಸಂಬಂಧ ಅವರೆಲ್ಲರನ್ನೂ ಕಕ್ಷಿದಾರರನ್ನಾಗಿ ಸೇರ್ಪಡೆ ಮಾಡಿ’ ಎಂದು ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಮೇ 20ಕ್ಕೆ ಮುಂದೂಡಿತು.

‘ಕೋವಿಡ್-19 ಪಿಡುಗಿನ ಸಂದರ್ಭದಲ್ಲಿ, ಅಲೋಪಥಿ ಔಷಧಗಳ ಕುರಿತ ರಾಮದೇವ ನೀಡಿದ್ದ ಹೇಳಿಕೆಗಳು ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಚಿಕಿತ್ಸೆ ಕುರಿತು ಪೂರ್ವಗ್ರಹದಿಂದ ಕೂಡಿದ್ದವು. ಚಿಕಿತ್ಸೆ ಪಡೆಯುವುದರಿಂದ ಜನರು ವಿಮುಖರಾಗುವಂತೆ ಮಾಡುವಂತಿದ್ದವು’ ಎಂದು ಆರೋಪಿಸಿ ಭಾರತೀಯ ವೈದ್ಯಕೀಯ ಸಂಸ್ಥೆಯ (ಐಎಂಎ) ಪಟ್ನಾ ಮತ್ತು ರಾಯಪುರ ಘಟಕಗಳು 2021ರಲ್ಲಿ ರಾಮದೇವ ವಿರುದ್ಧ ದೂರು ದಾಖಲಿಸಿದ್ದವು.

ಸೇವಾ ತೆರಿಗೆ ವಿಧಿಸಿದ್ದನ್ನು ಎತ್ತಿ ಹಿಡಿದ ‘ಸುಪ್ರೀಂ’

ನವದೆಹಲಿ(ಪಿಟಿಐ): ವಸತಿಯುತ ಮತ್ತು ವಸತಿರಹಿತ ಯೋಗ ಶಿಬಿರಗಳಿಗೆ ಪ್ರವೇಶ ಶುಲ್ಕ ವಿಧಿಸುವ ಕಾರಣ ಪತಂಜಲಿ ಯೋಗಪೀಠ ಟ್ರಸ್ಟ್ ಸೇವಾ ತೆರಿಗೆ ಪಾವತಿಸಬೇಕು ಎಂಬ ಕಸ್ಟಮ್ಸ್, ಅಬಕಾರಿ ಮತ್ತು ಸೇವಾ ತೆರಿಗೆಯ ಮೇಲ್ಮನವಿ ನ್ಯಾಯಮಂಡಳಿ ಯ(ಸಿಇಎಸ್‌ಟಿಎಟಿ) ಅಲಹಾಬಾದ್ ಪೀಠದ ಆದೇಶವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ.

